# KSP PSI/PC ಹುದ್ದೆಗಳ ತಯಾರಿಗಾಗಿ ಉತ್ತಮ ಪುಸ್ತಕಗಳನ್ನು ಈಗಲೇ ಖರೀದಿಸಿ




## www.kpscvaani.com/books

* ಪ್ರತಿ ಪುಸ್ತಕದ ಮೇಲೆ ಉತ್ತಮ ರಿಯಾಯಿತಿ
* ಪ್ರಸಿದ್ಧ ಲೇಖಕರ ಸ್ಪರ್ಧಾತ್ಮಕ ಪುಸ್ತಕಗಳು
* ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ

KSP PSI/PC ಹುದ್ದೆಗಳ ತಯಾರಿಗಾಗಿ ಉತ್ತಮ ಪುಸ್ತಕಗಳನ್ನು ಈಗಲೇ ಖರೀದಿಸಿ




www.kpscvaani.com/books

* ಪ್ರತಿ ಪುಸ್ತಕದ ಮೇಲೆ ಉತ್ತಮ ರಿಯಾಯಿತಿ ಪಡೆಯಿರಿ
* ಪ್ರಸಿದ್ಧ ಲೇಖಕರ ಉತ್ತಮ ಸ್ಪರ್ಧಾತ್ಮಕ ಪುಸ್ತಕಗಳು ನಿಮಗಾಗಿ
* ಎಲ್ಲ ಪುಸ್ತಕಗಳು ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ

# Current affairs of April 2020 from KPSC Vaani

01 04 2020 ಕೊರೋನ ವೈರಸ್'ನಿಂದ ದೇಶದಲ್ಲಿ 13.6 ಕೋಟಿ ಉದ್ಯೋಗಾವಕಾಶ ನಷ್ಟಸಾಧ್ಯತೆ : ಸಿಐಐ



ನವದೆಹಲಿ: ಕೊರೋನ ವೈರಸ್ ಭೀತಿಯಿಂದ ದೇಶಾಂದ್ಯಂತ ಲಾಕ್ ಡೌನ್ ಹೇರಲಾಗಿದ್ದು, ಈ ಹೋರಾಟದ ಬಳಿಕ ಭಾರತದ ಅರ್ಥ ವ್ಯವಸ್ಥೆಗೆ ದೊಡ್ಡ ಸವಾಲು ಎದುರಾಗಲಿದ್ದು, ಭಾರತದಲ್ಲಿ ಸುಮಾರು 13.6 ಕೋಟಿಯಷ್ಟು ಉದ್ಯೋಗಾವಕಾಶಗಳ ನಷ್ಟವಾಗಬಹುದೆಂದು ಕೈಗಾರಿಕಾ ಸಂಸ್ಥೆ ಸಿಐಐ ಹೇಳಿದೆ. ಬೇಡಿಕೆ ಮತ್ತು ಪೂರೈಕೆಯ ನಡುವಿನ ವ್ಯತ್ಯಾಸದಿಂದ ಉಂಟಾಗುವ ಕಡಿಮೆ ಬೆಳವಣಿಗೆಯು ಹೊಸ ಉದ್ಯೋಗ ಸೃಷ್ಟಿಯನ್ನು ಸೀಮಿತಗೊಳಿಸುವುದಲ್ಲದೆ, ಪ್ರಸ್ತುತ ಉದ್ಯೋಗದಲ್ಲಿರುವವರಿಗೂ ಕೂಡ ಸಮಸ್ಯೆ ಎದುರಾಗಲಿದೆ ಎಂದು ತಿಳಿದು ಬಂದಿದೆ.

01 04 2020 ವೈದ್ಯರಿಂದ ಉಚಿತ ಟೆಲಿ ಕನ್ಸಲ್ಟೇಷನ್‌ಗೆ ಇಂದು ಚಾಲನೆ ನೀಡಲಿರುವ ಡಿಸಿಎಂ



ಬೆಂಗಳೂರು: ಕೊವಿಡ್ 19 (Covid 19) ಸಾಂಕ್ರಾಮಿಕ ವೈರಾಣುವಿಗೆ ಸಂಬಂಧಿತ ಮಾಹಿತಿ ಪಡೆಯಲು ಮತ್ತು ಜನರಿಗಿರುವ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಜನ ಸಾಮಾನ್ಯರೇ ನೇರವಾಗಿ ವೈದ್ಯರೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಲು ಅನುಕೂಲವಾಗುವ 'ಟೆಲಿ ಕನ್ಸಲ್ಟೇಷನ್' ಯೋಜನೆಗೆ ರಾಜ್ಯದ ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ ದಿನಾಂಕ 01 ಏಪ್ರಿಲ್ 2020 ರಂದು ಚಾಲನೆ ನೀಡಲಿದ್ದಾರೆ.

* ಪ್ರಾಯೋಗಿಕವಾಗಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ಈ ಯೋಜನೆ ಜಾರಿಯಾಗಲಿದ್ದು, ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಸರ್ಕಾರ ಚಿಂತಿಸುತಿದೆ.

* ಪೋರ್ಟಿಯಾ ಮೆಡಿಕಲ್ ಸಂಸ್ಥೆ ಈ ಸೇವೆ ನೀಡುತ್ತಿದ್ದು ತಜ್ಞ ವೈದ್ಯರ ತಂಡ ಬೆಳಗ್ಗೆ 8 ರಿಂದ ರಾತ್ರಿ 8ರವರೆಗೆ ಸಾರ್ವಜನಿಕರ ಕರೆಗಳನ್ನ ಸ್ವೀಕರಿಸಿ ಜನರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ದೂರವಾಣಿ ಸಂಖ್ಯೆ: 08066744788

# Current affairs of April 2020 from KPSC Vaani

## 01 04 2020 DRDOದಿಂದವೈದ್ಯರಸುರಕ್ಷಾಉಡುಪುತಯಾರಿ




ಹೈದರಬಾದ್ : ಕೋವಿಡ್ 19 ವಿರುದ್ಧ ಸೆಣಸಾಡುತ್ತಿರುವ ವೈದ್ಯಕೀಯ ಸಿಬ್ಬಂದಿಯ ಕಾರ್ಯಾಚರಣೆ ಅಭಿನಂದಿಸಲು ಮತ್ತು ಅವರಿಗೆ ಸೂಕ್ತ ರಕ್ಷಣೆಯೊದಗಿಸಲು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ (ಡಿಆರ್‌ಡಿಒ) ಸಂಸ್ಥೆಯು ವೈದ್ಯರಿಗೆ ಅನುಕೂಲವಾಗುವಂತಹ ಉಡುಪು (ಬಾಡಿ ಸೂಟ್) ಅಭಿವೃದ್ಧಿಪಡಿಸಿದೆ. ಕೋವಿಡ್ 19 ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ಮತ್ತು ಇತರ ವೈದ್ಯಕೀಯ ಸಿಬ್ಬಂದಿಯ ಸುರಕ್ಷತೆಯೂ ಆದ್ಯತೆಯಾಗಬೇಕಾದನ್ನು ಗಮನದಲ್ಲಿಟ್ಟುಕೊಂಡು DRDO ಈ ಉಡುಪನ್ನು ಸಿದ್ಧಪಡಿಸಿದೆ.

## 01 04 2020 ವಿದೇಶಿ ಪ್ರವಾಸಿಗರಿಗೆ ಸಹಾಯ ಮಾಡಲು "ಭಾರತದಲ್ಲಿ ಸಿಲುಕಿದೆ(Stranded in India)ಪೋರ್ಟಲ್‌ಪ್ರಾರಂಭ



ದಿನಾಂಕ ಮಾರ್ಚ್ 31, 2020 ರಂದು ಪ್ರವಾಸೋದ್ಯಮ ಸಚಿವಾಲಯವು "ಸ್ಟ್ರಾಂಡೆಡ್ ಇನ್ ಇಂಡಿಯಾ" ಎಂಬ ಪೋರ್ಟಲ್ ಅನ್ನು ಪ್ರಾರಂಭಿಸಿದೆ. ಈ ಪೋರ್ಟಲ್ ಭಾರತದಲ್ಲಿ ಸಿಲುಕಿರುವ ವಿದೇಶಿ ಪ್ರವಾಸಿಗರ ಅನುಕೂಲಕ್ಕಾಗಿ ಆರಂಭಿಸಲಾಗಿದೆ. COVID 19 ನಿಂದಾಗಿ ಭಾರತದಲ್ಲಿ ಹೇರಿರುವ ಲಾಕ್ ಡೌನ್ ನಡುವೆ ಇಲ್ಲಿ ಸಿಲುಕಿ ಹಾಕಿಕೊಂಡಿರುವ ವಿದೇಶಿ ಪ್ರವಾಸಿಗರಿಗೆ ತಮ್ಮ ಮಾಹಿತಿಯನ್ನು ಪ್ರಸಾರ ಮಾಡುವ ಉದ್ದೇಶವನ್ನು ಈ ಪೋರ್ಟಲ್ ಹೊಂದಿದೆ. ಭಾರತ ಸರ್ಕಾರ ಮತ್ತು ವಿದೇಶಿ ಸರ್ಕಾರವು ಅವರನ್ನು ಸುರಕ್ಷಿತವಾಗಿ ಮನೆಗೆ ಕರೆದೊಯ್ಯುವ ಕ್ರಮಗಳ ಕುರಿತ ಮಾಹಿತಿ ನೀಡುತ್ತದೆ.

# Current affairs of April 2020 from KPSC Vaani

## 01 04 2020 Covid19ವಿರುದ್ಧದಹೋರಾಟ:ಅಝೀಂಪ್ರೇಮ್‌ಜಿ ಫೌಂಡೇಶನ್‌ನಿಂದ 1,000ಕೋಟಿರೂ.

ನವದೆಹಲಿ : ಭಾರತದಲ್ಲಿ ವ್ಯಾಪಿಸುತ್ತಿರುವ COVID 19 ವೈರಸ್ ನಿಯಂತ್ರಿಸಲು ಭಾರತ ಸರ್ಕಾರ ಸ್ಥಾಪಿಸಿರುವ PM Care ಗೆ ಅಝೀಂ ಪ್ರೇಮ್ ಜಿ ಫೌಂಡೇಶನ್ ನಿಂದ 1000 ಕೋಟಿ ರೂಪಾಯಿ, ವಿಪ್ರೋ ಲಿಮಿಟೆಡ್ ನಿಂದ 100 ಕೋಟಿ ರೂಪಾಯಿ ಹಾಗೂ ವಿಪ್ರೋ ಎಂಟರ್ ಪ್ರೈಸಸ್ ನಿಂದ 25 ಕೋಟಿ ರೂಪಾಯಿ ನೆರವನ್ನು ಘೋಷಿಸಲಾಗಿದೆ. ಈ ಕುರಿತು ಅಝೀಂ ಪ್ರೇಮ್ ಜಿ ಫೌಂಡೇಶನ್ ಮತ್ತು ವಿಪ್ರೋ ಜಂಟಿ ಪತ್ರಿಕಾ ಹೇಳಿಕೆಗಳನ್ನೂ ಬಿಡುಗಡೆಗೊಳಿಸಿವೆ.

## 02 04 2020 ಕೋವಿಡ್ 19ಭೀತಿ : ವಿಂಬಲ್ಡನ್‌ಟೂರ್ನಿರದ್ದು




ದಿನಾಂಕ ಏಪ್ರಿಲ್ 1, 2020 ರಂದು, ಕರೋನಾ ವೈರಸ್ ಭೀತಿಯಿಂದಾಗಿ ವಿಂಬಲ್ಡನ್ ಪಂದ್ಯಾವಳಿಯನ್ನು ರದ್ದುಪಡಿಸಲಾಯಿತು. ಎರಡನೇ ಮಹಾಯುದ್ಧದ ಆದನಂತರ ಇದೇ ಮೊದಲ ಬಾರಿಗೆ ಈ ಪಂದ್ಯಾವಳಿಯನ್ನು ರದ್ದುಗೊಳಿಸಲಾಗುತ್ತಿದೆ.

* ವಿಂಬಲ್ಡನ್ ಪದ್ಯಾವಳಿಗಳನ್ನು ಜೂನ್ 29, 2020 ರಿಂದ ಜುಲೈ 12, 2020 ರ ವರೆಗೆ ಲಂಡನ್ ನಗರದ ಹೊರವಲಯದಲ್ಲಿ ಆಯೋಜಿಸಲಾಗಿತ್ತಾದರೂ, ಈಗಿರುವ ಕರೋನ ವೈರಸ್ ಭೀತಿಯಿಂದ ಪದ್ಯಾವಳಿಯನ್ನು ರದ್ದುಗೊಳಿಸಲಾಗಿದೆ.
* ಈ ಪಂದ್ಯಾವಳಿಯ ಮುಂದಿನ ಆವೃತ್ತಿಯನ್ನು ಜೂನ್ 28, 2021 ರಿಂದ ಜುಲೈ 11,2021 ರ ನಡುವೆ ನಡೆಸಲು ತೀರ್ಮಾನಿಸಲಾಗಿದೆ.

# Current affairs of April 2020 from KPSC Vaani

## 02 04 2020 G 20 ಹಣಕಾಸು ಮಂತ್ರಿಗಳ ಸಭೆ : ಭಾರತವನ್ನು ಪ್ರತಿನಿಧಿಸಿದ ನಿರ್ಮಲಾ ಸೀತಾರಾಮನ್



ದಿನಾಂಕ ಮಾರ್ಚ್ 31, 2020 ರಂದು ನಡೆದ "G 20 Finance Ministers ಮೀಟ್ (ಜಿ 20 ಹಣಕಾಸು ಸಚಿವರ ಸಭೆ)" ಭಾರತದಿಂದ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಭಾರತವನ್ನು ಪ್ರತಿನಿಧಿಸಿದರು. ಈ ವರ್ಚುವಲ್ ಮೀಟ್(ವಿಡಿಯೋ ಕಾನ್ಫರೆನ್ಸ್ ಸಭೆ)ಯನ್ನು ಸೌದಿ ಅರೇಬಿಯಾ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

* ಈ ವರ್ಚುವಲ್ ಸಭೆಯಲ್ಲಿ, ಸದಸ್ಯ ರಾಷ್ಟ್ರಗಳ ಹಣಕಾಸು ಮಂತ್ರಿಗಳು ನಿಯಮಿತವಾಗಿ ಭೇಟಿಯಾಗಲು ನಿರ್ಧರಿಸಿದರು.

*COVID 19ವಿರುದ್ಧ ಸೆಣಸಲು G20 ರಾಷ್ಟ್ರಗಳ ಸಚಿವರು ‘‘ಜಿ20ಕ್ರಿಯಾ ಯೋಜನೆ’’ ರೂಪಿಸುವ ಬಗ್ಗೆ ಯೋಜಿಸಿದರು.

## 02 04 2020 "ನವರತ್ನಲು ಪೆಡಲಂದರಿಕಿ ಇಲು" ಯೋಜನೆಯಡಿ 25 ಲಕ್ಷ ಬಡವರಿಗೆಮನೆ ನೀಡಲುಅಂಧ್ರಸರ್ಕಾರನಿರ್ಧಾರ



ಆಂಧ್ರಪ್ರದೇಶ ಸರ್ಕಾರವು "ನವರತ್ನಲು ಪೆಡಲಾಂಡರಿಕಿ ಇಲು(ನವರತ್ನಂ ಎಲ್ಲಾ ಬಡವರಿಗೆ ಮನೆಗಳು)" ಎಂಬ ಯೋಜನೆ ಆರಂಭಿಸಿದ್ದು ಈ ಯೋಜನೆಯಡಿಯಲ್ಲಿ ಆಂಧ್ರಪ್ರದೇಶದ ಬಿಳಿ ಪಡಿತರಚೀಟಿಹೊಂದಿರುವಬಡವರಿಗೆಮನೆಸೈಟ್ಗಳನ್ನುರೂ1ಕ್ಕೆನೀಡಲುಯೋಜಿಸಲಾಗಿದೆ.

*ಈ ಯೋಜನೆಯಡಿಯಲ್ಲಿ ಒಟ್ಟು 25 ಲಕ್ಷ ಬಡವರಿಗೆ ಮನೆ ಕಟ್ಟಲು ಸ್ಥಳವನ್ನು ನೀಡಲು ಆಂಧ್ರ ಸರ್ಕಾರ ಯೋಜಿಸಿದೆ.

* ಸರ್ಕಾರ ನೀಡಿದ ಈ ಸ್ಥಳದಲ್ಲಿ ಫಲಾನುಭವಿಗಳು ಕಡ್ಡಾಯವಾಗಿ ಮನೆಗಳನ್ನು ಮಾತ್ರ ನಿರ್ಮಿಸಬೇಕು ಮತ್ತು ಅವರು ಕನಿಷ್ಟ ಐದು ವರ್ಷಗಳವರೆಗೆ ಮನೆಗಳನ್ನು ಮಾರಾಟ ಮಾಡಲು ಅವಕಾಶವಿರುವದಿಲ್ಲ.

# Current affairs of April 2020 from KPSC Vaani

02 04 2020 ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರದಿಂದ 24 ವರ್ಗದ ವೈದ್ಯಕೀಯ ಸಾಧನಗಳಔಷಧಿಗಳವರ್ಗಕ್ಕೆಸೇರ್ಪಡೆ




ಏಪ್ರಿಲ್ 1, 2020 ರಂದು, ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರವು ಒಟ್ಟು 883 ನಿಗದಿತ ಔಷಧಿಗಳ ಸೀಲಿಂಗ್ ಬೆಲೆಯನ್ನು ಪರಿಷ್ಕರಿಸಿತು, ಮತ್ತು ಔಷಧೀಯ ಪದಾರ್ಥಗಳ ಪೂರೈಕೆಯಲ್ಲಿನ ವಿವಿಧ ಅಡ್ಡಿಗಳನ್ನೂ ಸಾಮಾನ್ಯ ಸ್ಥಿತಿಗೆ ತರುವಲ್ಲಿ ಕೆಲಸಮಾಡುತ್ತಿರುವುದಾಗಿ ಪ್ರಾಧಿಕಾರ ತಿಳಿಸಿದೆ.

* ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಆಕ್ಟ್, 1940 ರ ಅಡಿಯಲ್ಲಿ ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರ ಒಟ್ಟು 24 ವರ್ಗದ ವೈದ್ಯಕೀಯ ಸಾಧನಗಳನ್ನು ಔಷಧಿಗಳಾಗಿ ಪರಿಗಣಿಸಿ ಸೂಚಿಸಿದೆ.
* ಜೊತೆಗೆ ಇನ್ನು ಕೆಲ ನಿಗದಿತ ವೈದ್ಯಕೀಯ ಸಾಧನಗಳ ಬೆಲೆಗಳನ್ನು ಪ್ರಾಧಿಕಾರವು ಮಾರ್ಪಾಡು ಮಾಡಲು ಯೋಜಿಸಿದೆ ಮತ್ತು ತಯಾರಕರು / ಆಮದುದಾರರು ಈ ಪಟ್ಟಿಮಾಡಿದ ಸಾಧನಗಳ ಬೆಲೆಯನ್ನು ಇನ್ನೂ 12ತಿಂಗಳವರೆಗೆ 10%ಕ್ಕಿಂತ ಹೆಚ್ಚು ಬೆಲೆಯನ್ನು ಹೆಚ್ಚಿಸಬಾರದು ಎಂದು ತಿಳಿಸಿದೆ.

02 04 2020 ಭಾರತಸರ್ಕಾರದಿಂದವಿದೇಶಿವ್ಯಾಪಾರನೀತಿಯನ್ನುವಿಸ್ತರಣೆ




ರಫ್ತು ಯೋಜನೆಗಳಾದ ರಫ್ತುಗಳನ್ನು ಉತ್ತೇಜಿಸುವ ಬಂಡವಾಳ ಸರಕು ಮತ್ತು ಸುಂಕ ರಹಿತ ಆಮದುಗಳ ಅಧಿಕಾರಗಳನ್ನು ಒಂದು ವರ್ಷದ ಅವಧಿಗೆ ವಿಸ್ತರಿಸುವುದಾಗಿ 2020 ರ ಏಪ್ರಿಲ್ 1 ರಂದು ಭಾರತ ಸರ್ಕಾರ ಪ್ರಕಟಿಸಿದೆ. ಅಲ್ಲದೆ, ವಿದೇಶಿ ವ್ಯಾಪಾರ ನೀತಿಯನ್ನು 2015 20 ನ್ನು 2021 ರವರೆಗೆ ಇನ್ನೂ ಒಂದು ವರ್ಷ ವಿಸ್ತರಿಸಲು ಭಾರತ ಸರ್ಕಾರ ಯೋಜಿಸಿದೆ. ನೀತಿಯ ಉದ್ದೇಶ: ಈ ನೀತಿಯು ಭಾರತವನ್ನು ಜಾಗತಿಕ ಮಟ್ಟದಲ್ಲಿ ಪ್ರಮುಖ ಮಾಡುವ ಗುರಿಯನ್ನು ಹೊಂದಿದೆ. ಡಿಜಿಟಲ್ ಇಂಡಿಯಾ ಯೋಜನೆ ಮತ್ತು ಮೇಕ್ ಇನ್ ಇಂಡಿಯಾ ಕಾರ್ಯಕ್ರಮದೊಂದಿಗೆ 2020ರ ವೇಳೆಗೆ 900ಬಿಲಿಯನ್ USD ಸಾಗರೋತ್ತರ ಮಾರಾಟದ ಗುರಿ ಸಾಧಿಸಬೇಕಾಗಿದೆ.

# Current affairs of April 2020 from KPSC Vaani

## 02 04 2020 ಹೋಂ ಕ್ವಾರಂಟೈನ್‌ನಲ್ಲಿರುವವರ ಮೇಲೆ ನಿಗಾ ಇಡಲು ರಾಜ್ಯಸರ್ಕಾರದಿಂದ ಹೊಸಆಯಪ್




ಕರೋನ ವೈರಸ್ ಭೀತಿಯಿಂದ ವಿದೇಶಗಳಿಂದ ಬಂದಿರುವವರನ್ನು ಮುನ್ನೆಚ್ಚರಿಕೆಕಾ ಕ್ರಮವಾಗಿ 14 ದಿನಗಳ ಕಾಲ ಹೋಂ ಕ್ವಾರಂಟೈನ್‌ನಲ್ಲಿ ಇರಿಸಲಾಗಿದ್ದು, ಇವರು ಮನೆಯಿಂದ ಹೊರಗೆ ಬಾರದಂತೆ ನಿಗಾ ಇರಿಸಲು ರಾಜ್ಯ ಸರ್ಕಾರ ಹೊಸ App ಒಂದನ್ನು ಅಭಿವೃದ್ಧಿ ಪಡಿಸಿದೆ.
* ಕ್ವಾರಂಟೈನ್ ವಾಚ್ ಮೊಬೈಲ್ ಆಯಪ್ (Quarantine Watch Mobile App) : ಹೋಂ ಕ್ವಾರಂಟೈನ್ ನಲ್ಲಿರುವವರು ಮನೆಗಳಿಂದ ಹೊರಬಾರದಂತೆ ಮತ್ತು ಹೊರಬಂದರೆ ಅವರನ್ನು ಕಂಡು ಹಿಡಿಯುವ ಆಯಪ್ ವೊಂದನ್ನು ಕರ್ನಾಟಕದ ರಾಜ್ಯ ಸರ್ಕಾರ ಅಭಿವೃದ್ಧಿಪಡಿಸಿದೆ.

## 03 04 2020 'ಜನ್‌ಧನ್ ಖಾತೆ' ಹೊಂದಿರುವ ಮಹಿಳೆಯರಿಗೆ ತಲಾ 500 ರೂಪಾಯಿ ಪಾವತಿ




ನವದೆಹಲಿ : ಕೋವಿಡ್ 19ನಿಂದ ದೇಶದಲ್ಲಿ ವಿಧಿಸಿರುವ ಲಾಕ್ ಡೌನ್ ನಿಂದಾಗಿ ತತ್ತರಿಸಿರುವ ದೇಶದ ಜನಧನಖಾತೆ ಹೊಂದಿರುವ ಮಹಿಳೆಯರಿಗೆ ಕೇಂದ್ರ ಸರ್ಕಾರವು 500 ರೂಪಾಯಿ ಯಂತೆ ಮೂರೂ ತಿಂಗಳು ನಗದು ಪಾವತಿಸುವಂತೆ ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ತಿಳಿಸಿದೆ, ಈಗಾಗಲೇ ಮೊದಲ ಕಂತಿನ ಜಮಾ ಮಾಡುವ ಕಾರ್ಯ ಜಾರಿಯಲ್ಲಿದೆ. ಇದರಿಂದ ದೇಶದ ಮಹಿಳೆಯರಿಗೆ ಲಾಕ್ ಡೌನ್ ಸಮಯದಲ್ಲಿ ಎದುರಾಗಿರುವ ಆರ್ಥಿಕ ಹೊರೆಯನ್ನು ಕಡಿಮೆಮಾಡುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ.

# Current affairs of April 2020 from KPSC Vaani

03 04 2020 ಸಮೀಪದಲ್ಲಿರೋ ಕರೊನಾ ಸೋಂಕಿತನ ಬಗ್ಗೆ ತಿಳಿಸಲಿರುವ 'ಆರೋಗ್ಯ ಸೇತು' ಆಯಪ್

ನವದೆಹಲಿ : ಸಮೀಪದಲ್ಲಿರೋ ಕರೊನಾ ವೈರಸ್ ಸೋಂಕಿತರನ್ನು ಪತ್ತೆಹಚ್ಚಲು ಕೇಂದ್ರ ಸರ್ಕಾರ ಗುರುವಾರ(ಏಪ್ರಿಲ್ 03)ರಂದು 'ಆರೋಗ್ಯ ಸೇತು' ಎಂಬ ಹೊಸ ಮೊಬೈಲ್ ಅಪ್ಲಿಕೇಶನ್ ಬಿಡುಗಡೆಗೊಳಿಸಿದೆ.

*ಈ ನೂತನ "ಆರೋಗ್ಯ ಸೇತು" ಅನ್ನು Androidಮತ್ತು iOSಮಾದರಿಯ ಮೊಬೈಲುಗಳ ಬಳಕೆದಾರರು ಉಪಯೋಗಿಸಬಹುದಾಗಿದೆ.

* ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ರಾಷ್ಟ್ರೀಯ ಮಾಹಿತಿ ಕೇಂದ್ರ ಈ ನೂತನ ಆಯಪ್ ಅನ್ನು ಅಭಿವೃದ್ಧಿ ಪಡಿಸಿದೆ.

*ಕೋವಿಡ್ 19ತಡೆಗಟ್ಟಲು ಸೂಕ್ತವಾದ ಸಲಹೆಗಳನ್ನ ಈ ಆಯಪ್ ಒದಗಿಸಲಿದೆ

03 04 2020 ಪದ್ಮಶ್ರೀ ವಿಜೇತ, ಆಧ್ಯಾತ್ಮಿಕ ಗಾಯಕ ನಿರ್ಮಲ್ ಸಿಂಗ್ ವಿಧಿವಶ



ಅಮೃತಸರ್ : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಸಿಖ್ ಆಧ್ಯಾತ್ಮಿಕ ಗಾಯಕರಾದ ನಿರ್ಮಲ್ ಸಿಂಗ್ ಅವರು ಗುರುವಾರ (ಏಪ್ರಿಲ್ 02) ರಂದು ಬೆಳಗ್ಗೆ ಅಮೃತಸರ್ ನಗರದಲ್ಲಿನ ತಮ್ಮ ಕೊನೆಯುಸಿರೆಳೆದರು. ಅಮೃತಸರ್‌ನ ಸ್ವರ್ಣ ಮಂದಿರದಲ್ಲಿನ ಮಾಜಿ ಹಝೂರಿ ಆಗಿದ್ದ ನಿರ್ಮಲ್ ಸಿಂಗ್ ಅವರು ಪದ್ಮಶ್ರೀ ಪ್ರಶಸ್ತಿ ಪುರಸತ್ಕೃತರಾಗಿದ್ದರು, ಇವರು ಇಡೀ ಜಗತ್ತನ್ನೇ ಕೊಡುತ್ತಿರುವ ಮಹಾಮಾರಿ ಕರೋನ ವೈರಸ್ ಸೋಂಕಿನಿಂದ ವಿಧಿವಶರಾದರು.

# Current affairs of April 2020 from KPSC Vaani



# Current affairs of April 2020 from KPSC Vaani

## 03 04 2020 ಎಲ್ಲಾ ರಾಜ್ಯಗಳ ಸಿಎಂಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಮೋದಿ



ಕೊರೋನವೈರಸ್ ಮಹಾಮಾರಿ ಸೃಷ್ಟಿಸಿರುವ ಆತಂಕಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವ ಸಲುವಾಗಿ ಪ್ರಧಾನಿ ನರೇಂದ್ರ ಮೋದಿಯವರು ಗುರುವಾರ (ಏಪ್ರಿಲ್ 02) ರಂದು ದೇಶದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ನವದೆಹಲಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದರು.

* ವಿಡಿಯೋ ಕಾನ್ಫರೆನ್ಸ್ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿಗಳು ಸೋಂಕಿತರ ಸಂಪರ್ಕಗಳನ್ನು ಪತ್ತೆ ಹಚ್ಚುವ ಮತ್ತು ಶಂಕಿತರನ್ನು ಕ್ವಾರಂಟೈನ್ ಸೌಲಭ್ಯಕ್ಕೆ ಕಳುಹಿಸುವ ಬಗೆಗೆ ಚರ್ಚೆ ನಡೆಸಿದರು. * ಕೊರೋನವೈರಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇದು ಪ್ರಧಾನಿ ನರೇಂದ್ರ ಮೋದಿಯವರು ಮುಖ್ಯಮಂತ್ರಿಗಳೊಂದಿಗೆ ನಡೆಸುತ್ತಿರುವ ಎರಡನೇ ವಿಡಿಯೋ ಕಾನ್ಫರೆನ್ಸ್ ಆಗಿದೆ.

## 03 04 2020 ಪ್ರಾಜೆಕ್ಟ್ ಪ್ರಾಣ: IISc ಬೆಂಗಳೂರು ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳಿಂದ ಸ್ಥಳೀಯ ವೆಂಟಿಲೇಟರ್‌ಗಳ ಅಭಿವೃದ್ಧಿ



ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (Indian institute of science) ನ ವಿದ್ಯಾರ್ಥಿಗಳು ಮತ್ತು ವಿಜ್ಞಾನಿಗಳು ಸೇರಿ "ಪ್ರಾಜೆಕ್ಟ್ ಪ್ರಾಣ" ಹೆಸರಿನ ಪ್ರಾಜೆಕ್ಟ್ ಅಡಿಯಲ್ಲಿ ಸ್ಥಳೀಯವಾಗಿ ವೆಂಟಿಲೇಟರ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ವೆಂಟಿಲೇಟರಗಳ ತಯಾರಿಕೆಯಲ್ಲಿ ಬಳಸಿದ ಎಲ್ಲಾ ಬಿಡಿಭಾಗಗಳನ್ನು ಭಾರತದಲ್ಲಿಯೇ ಅಭಿವೃದ್ಧಿ ಪಡಿಸಲಾದುದರಿಂದ ಈ ವೆಂಟಿಲೇಟರ್ ಗಳು 100% ಸ್ಥಳೀಯವಾಗಿದೆ.

# Current affairs of April 2020 from KPSC Vaani

03 04 2020 ಕೇಂದ್ರ ಕೃಷಿ ಸಚಿವಾಲಯ ಪ್ರಾರಂಭಿಸಿದ ಹೊಸ ಇ ನಾಮ್(E Nam) ವಿಶೇಷತೆಗಳು

ಕೇಂದ್ರ ಸರ್ಕಾರದ ಕೃಷಿ ಸಚಿವಾಲಯವು ರಾಷ್ಟ್ರೀಯ ಕೃಷಿ ಮಾರುಕಟ್ಟೆಯ ಹೊಸ ವೈಶಿಷ್ಟ್ಯಗಳನ್ನು ಬಿಡುಗಡೆ ಮಾಡಿದ್ದು, ಇದು ರೈತರ ಕೃಷಿ ಮಾರಾಟವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.
COVID 19 ವಿರುದ್ಧ ಹೋರಾಡುತ್ತಿರುವ ಈ ಸಮಯದಲ್ಲಿ ಮಂಡಿಗಳಲ್ಲಿ ಉಂಟಾಗುವ ಜನ ದಟ್ಟಣೆಯನ್ನು ಕಡಿಮೆ ಮಾಡಲು ಈ ವ್ಯವಸ್ಥೆ ಸಹಕರಿಸಲಿದೆ. ಇ ನಾಮ್:
*ಗೋದಾಮು ಆಧಾರಿತ ವಹಿವಾಟುಗಳನ್ನು ಗೋದಾಮುಗಳಿಂದಲೇ ವ್ಯಾಪಾರಕ್ಕೆ ಅನುಕೂಲವಾಗುತ್ತವೆ. ಇದರಿಂದ ವೆಚ್ಚವನ್ನು ಉಳಿಸಬಹುದಾಗಿದೆ.
* ಈ ನೂತನ ವ್ಯವಸ್ಥೆಯಡಿಯಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ರಾಷ್ಟ್ರದಾದ್ಯಂತ ಎಲ್ಲಿ ಬೇಕಾದರೂ ಮಾರಾಟ ಮಾಡಬಹುದಾಗಿದೆ, ಮತ್ತು ಪೂರೈಕೆ ಮತ್ತು ಬೇಡಿಕೆಯನ್ನು ಸಮಾಂತರಗೊಳಿಸಿ ಬೆಲೆಗಳನ್ನು ಸ್ಥಿರವಾಗಿಸುತ್ತದೆ.
* ಅಂತರ ರಾಜ್ಯ ಮತ್ತು ಅಂತರ ಮಂಡಿ ವ್ಯಾಪಾರಕ್ಕಾಗಿ ಟ್ರ್ಯಾಕ್ ಮಾಡಬಹುದಾದ ಸಾರಿಗೆ ಸೌಲಭ್ಯಗಳು.

03 04 2020 ರಾಷ್ಟ್ರೀಯ ಪುಸ್ತಕ ಪ್ರಾಧಿಕಾರದಿಂದ “ಕರೋನಾ ಸ್ಟಡೀಸ್” ಪುಸ್ತಕಸರಣಿಯನ್ನು ಆರಂಭ



ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ "ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ"ವು"ಕರೋನಾಸ್ಟಡೀಸ್"ಎಂಬ ಪುಸ್ತಕಸರಣಿಯನ್ನುಆರಂಭಿಸಿದೆ.ಈಪುಸ್ತಕಸರಣಿಯು ಕರೋನಾ ವೈರಸ್ ಬಗ್ಗೆ ಸಂಬಂಧಿತ ಎಲ್ಲ ಮಾಹಿತಿಯನ್ನು ಒದಗಿಸುತ್ತದಲ್ಲದೆ, ಎಲ್ಲಾ ವಯಸ್ಸಿನವರಿಗೆ ಸೂಕ್ತವಾದ ಮಾರ್ಗದರ್ಶನ ನೀಡುತ್ತದೆ.
* ಜನರಲ್ಲಿ ವೈರಸ್ ಬಗ್ಗೆ ಸಾಮಾಜಿಕ, ಆರ್ಥಿಕ, ಮಾನಸಿಕ ಮತ್ತು ಸಾಂಸ್ಕೃತಿಕ ಜಾಗೃತಿ ಮೂಡಿಸಲು ಈ ಯೋಜನೆಯನ್ನು ಆರಂಭಿಸಲಾಗಿದೆ.
* ಈ ಪುಸ್ತಕ ಸರಣಿಯು ಸಂಶೋಧಕರು ಮತ್ತು ಲೇಖಕರು ತಮ್ಮ ಜ್ಞಾನವನ್ನು ಕೊಡುಗೆ ನೀಡುವ ವೇದಿಕೆಯಾಗಿಕಾರ್ಯನಿರ್ವಹಿಸುತ್ತದೆ.

# Current affairs of April 2020 from KPSC Vaani

03 04 2020 ಏಪ್ರಿಲ್ 5 ರಂದು ರಾತ್ರಿ ವಿದ್ಯುತ್ ದೀಪ ಆರಿಸಿ, 9 ನಿಮಿಷ ದೀಪ ಬೆಳಗಿಸಲು ಪ್ರಧಾನಿ ಕರೆ



ನವದೆಹಲಿ: ಭಾರತದ ಪ್ರಧಾನಿ ಮೋದಿಯವರು ಕೊರೋನಾ ವಿರುದ್ಧದ ಹೋರಾಟಕ್ಕೆ ಒಗ್ಗಟ್ಟು ಪ್ರದರ್ಶಿಸಿಸಲು ದಿನಾಂಕ ಏಪ್ರಿಲ್ 5(ಭಾನುವಾರ) ರಂದು ರಾತ್ರಿ 9 ಗಂಟೆಗೆ ಮನೆಯ ವಿದ್ಯುತ್ ದೀಪಗಳನ್ನು ಆರಿಸಿ, ಮನೆಗಳ ಮಹಡಿಗಳಲ್ಲಿ ನಿಂತು ಮೇಣದ ಬತ್ತಿ, ದೀಪ, ಮೊಬೈಲ್ ಟಾರ್ಚ್ ಗಳನ್ನು ಹಿಡಿದು 9ನಿಮಿಷಗಳ ಕಾಲ ಬೆಳಕು ಚೆಲ್ಲಲು ದೇಶದ ಜನತೆಗೆ ಮೋದಿ ಕರೆ ನೀಡಿದ್ದಾರೆ. ಇಂದು (3 ಏಪ್ರಿಲ್) ಬೆಳಿಗ್ಗೆ 9 ಗಂಟೆಗೆ ಟ್ವಿಟ್ಟರ್ ನಲ್ಲಿ ವಿಡಿಯೋ ಸಂದೇಶ ಹಂಚಿಕೊಂಡು ದೀಪ ಬೆಳಗುವ ಮೂಲಕ ನಮ್ಮ ಮನದಲ್ಲಿ ನಾವು ಒಂಟಿಯಲ್ಲ ಎಂಬ ಸಂಕಲ್ಪ ಮಾಡಿ ಕರೋನ ವಿರುದ್ದದ ಹೋರಾಟಕ್ಕೆ ಸಹಕರಿಸಿ ಎಂದು ಕರೆ ನೀಡಿದ್ದಾರೆ.

03 04 2020 ಛಾಯಾಗ್ರಾಹಕಟಿ.ಎಲ್.ರಾಮಸ್ವಾಮಿಇನ್ನಿಲ್ಲ



ಬೆಂಗಳೂರು : ಕಳೆದ ಆರು ದಶಕಗಳಿಗೂ ಹೆಚ್ಚು ಕಾಲ ಮಾಧ್ಯಮ ಛಾಯಾಗ್ರಾಹಕರಾಗಿ ಸೇವೆ ಸಲ್ಲಿಸಿದ್ದ ಹಾಗೂ ಬೆಂಗಳೂರಿನ ಮೊದಲ ಛಾಯಾಗ್ರಾಹಕ ಎಂಬ ಹೆಗ್ಗಳಿಕೆ ಹೊಂದಿರುವ ಹಿರಿಯ ಛಾಯಾಗ್ರಾಹಕರಾದ ಟಿ.ಎಲ್.ರಾಮಸ್ವಾಮಿ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು.

* ಮೈಸೂರು ನ್ಯೂಸ್ ಫೋಟೊಸ್ ಎಂಬ ಸಂಸ್ಥೆ ಆರಂಭಿಸಿದ್ದರು
* ಜಮ್ಮು ಮತ್ತು ಪಂಜಾಬ್ ಗಡಿಗಳಲ್ಲಿ ಸಮವಸ್ತ್ರ ಧರಿಸಿ ಯುದ್ಧ ವರದಿಯ ತರಬೇತಿ ಪಡೆದಿದ್ದರು.
* ಕರ್ನಾಟಕ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಗೌರವ ಪ್ರಶಸ್ತಿ ಪಡೆದಿದ್ದರು

# Current affairs of April 2020 from KPSC Vaani

03 04 2020 ಕೊರೊನಾ ವಿರುದ್ಧ ಹೋರಾಟ ಭಾರತಕ್ಕೆ $ 1 ಬಿಲಿಯನ್ ನೆರವು ನೀಡಿದ ವಿಶ್ವಬ್ಯಾಂಕ್




ಕರೋನ ವೈರಸ್ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಭಾರತಕ್ಕೆ ವಿಶ್ವ ಬ್ಯಾಂಕ್ $ 1 ಬಿಲಿಯನ್ (ಅಮೆರಿಕನ್ ಡಾಲರು) ಮೊತ್ತದ ತುರ್ತುನಿಧಿಯ ಸಹಾಯವನ್ನು ನೀಡಿದೆ. ವಿಶ್ವ ಬ್ಯಾಂಕ್ ಒಟ್ಟು 1.9 ಶತಕೋಟಿ ಡಾಲರ್ ಮೊತ್ತದಷ್ಟು ಮೊತ್ತವನ್ನು ಮೊದಲ ಹಂತವಾಗಿ 25 ದೇಶಗಳಿಗೆ ನೀಡಲಿದೆ. ವಿಶ್ವ ಬ್ಯಾಂಕ್ ನೀಡುವ ಈ ಹಣವನ್ನು ಬಳಸಿಕೊಂಡು ಕೊರೊನವನ್ನು ನಿಯಂತ್ರಿಸಲು ನೆರವು ಪಡೆಯುವ ರಾಷ್ಟ್ರಗಳಿಗೆ ಮನವಿ ಮಾಡಿದೆ.
* ವಿಶ್ವ ಬ್ಯಾಂಕ್ ನಿಂದ ಪಾಕಿಸ್ತಾನಕ್ಕೆ 200 ಮಿಲಿಯನ್,ಅಫ್ಘಾನಿಸ್ತಾನಕ್ಕೆ 100ಮಿಲಿಯನ್,ಮಾಲ್ಡೀವ್ಸ್ 37.3ಮಿಲಿಯನ್‌ಮತ್ತು ಶ್ರೀಲಂಕಾಕ್ಕೆ 8128.6ಮಿಲಿಯನ್ ತುರ್ತುನಿಧಿ ಘೋಷಿಸಲಾಗಿದೆ.

04 04 2020 ಆರೋಗ್ಯಸಂಜೀವನಿವಿಮಾಪಾಲಿಸಿ:IRDIAಯಿಂದ ಮಾರ್ಗಸೂಚಿಗಳಬಿಡುಗಡೆ




ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ವು ಆರೋಗ್ಯ ಸಂಜೀವನಿ ವಿಮಾ ಪಾಲಿಸಿಯನ್ನು ಜಾರಿಗೆ ತರಲು ಯೋಜಿಸಿದ್ದು, ಈ ಯೋಜನೆಯ ಆರೋಗ್ಯ ವಿಮಾ ಪೂರೈಕೆದಾರರಿಗೆ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಿದೆ. ನೀತಿಯ ಬಗ್ಗೆ "ಆರೋಗ್ಯ ಸಂಜೀವನಿ ವಿಮಾ ಪಾಲಿಸಿ" ನೀತಿಯನ್ನು ಆರಂಭಿಸಿದ ಮೂಲ ಮುಖ್ಯ ಉದ್ದೇಶವು COVID 19 ರೋಗಿಗಳ ಆಸ್ಪತ್ರೆಗೆ ದಾಖಲು ಮಾಡುವ ವೆಚ್ಚವನ್ನು ಭರಿಸುವುದಾಗಿದೆ. ಈ ನೀತಿಯನ್ನು ಭಾರತ ಸರ್ಕಾರ ರೂಪಿಸಿಲ್ಲ ಬದಲಿಗೆ ಈ ಪಾಲಿಸಿಗೆ ಮಾರ್ಗಸೂಚಿಗಳನ್ನು ಸೂಚಿಸಿದೆ. ಒಟ್ಟು 29 ಆರೋಗ್ಯ ಮತ್ತು ವಿಮಾ ಕಂಪನಿಗಳ ಪಾಲಿಸಿಗಳನ್ನು ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಅನುಮೋದಿಸಿದೆ.

# Current affairs of April 2020 from KPSC Vaani

04 04 2020 COVID 19ಹರಡುವಿಕೆಯನ್ನು ತಡೆಯಲು ಭಾರತ ಸರ್ಕಾರದಿಂದ 5 ಸಂಶೋಧನಾ ಯೋಜನೆಗಳ ಪ್ರಾರಂಭ



ದೇಶದಲ್ಲಿ ವ್ಯಾಪಿಸುತ್ತಿರುವ ಕರೋನ ವೈರಸ್ ಹರಡುವುದನ್ನು ನಿಯಂತ್ರಿಸಲು ಭಾರತ ಸರ್ಕಾರವು 5 ಹೊಸ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗಳು ಲಸಿಕೆಗಳು ಅಥವಾ ಔಷಧಿಗಳನ್ನು ಅಭಿವೃದ್ಧಿ ಪಡಿಸುವತ್ತ ಹೆಚ್ಚಿನ ಗಮನಹರಿಸುವದಿಲ್ಲ. ಬದಲಿಗೆ COVID 19 ಹರಡುವಿಕೆಯನ್ನು ತಗ್ಗಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವದು. ಈ ಯೋಜನೆಗಳು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ವಹಿಸಲಿದೆ.

04 04 2020 ರಾಷ್ಟ್ರೀಯ ಕರೋನಾ ಸಮೀಕ್ಷೆ ನಡೆಸಲು 410 ಜಿಲ್ಲೆಗಳು ಆಯ್ಕೆ



ಕೇಂದ್ರ ಸಚಿವರಾದ ಜಿತೇಂದ್ರ ಸಿಂಗ್ ರವರು COVID 19 ಕುರಿತು ರಾಷ್ಟ್ರೀಯ ಪೂರ್ವಸಿದ್ಧತಾ ಸಮೀಕ್ಷೆಯನ್ನು ಬಿಡುಗಡೆ ಮಾಡಿದರು.
ಈ ಸಮೀಕ್ಷೆಯನ್ನು ದೇಶದ 410 ಜಿಲ್ಲೆಗಳಲ್ಲಿ ಮತ್ತು 3 ಕೆಲಸದ ದಿನಗಳಲ್ಲಿ ಪೂರ್ಣಗೊಳಿಸಲಾಗಿದೆ.
* ಈ ಸಮೀಕ್ಷೆ ನಡೆಸಿದ ಮುಖ್ಯ ಉದ್ದೇಶವೆಂದರೆ ಆಯಾ ರಾಜ್ಯಗಳು ಕೋವಿಡ್ 19 ವಿರುದ್ಧ ಕೈಗೊಂಡ ಕ್ರಮಗಳು ಅವಲೋಕಿಸುವದು.

ಸಮೀಕ್ಷೆಯ ವರದಿ :
* ವೈರಸ್ ಬಗ್ಗೆ ಜನರ ಅರಿವು ಹೆಚ್ಚಾಗಿದೆ
* 75% ಜನರು ಮುನ್ನೆಚ್ಚರಿಕೆಗಳನ್ನು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ
* 69% ಜನರು ಲಾಕ್ ಡೌನ್ ಅನ್ನು ಶಾಂತಿಯುತ ರೀತಿಯಲ್ಲಿ ನಿರ್ವಹಿಸುತ್ತಿದ್ದಾರೆ.

# Current affairs of April 2020 from KPSC Vaani

## 04 04 2020 ಕೋವಿಡ್ 19: ರಾಜ್ಯ ಸರ್ಕಾರದ ವಕ್ತಾರರಾಗಿ ಸಚಿವ ಸುರೇಶ್ ಕುಮಾರ್



ಬೆಂಗಳೂರು : ಮಹಾಮಾರಿ ಕೋವಿಡ್ 19 ವೈರಸ್ ನಿರ್ವಹಣೆಗೆ ಸಂಬಂಧಿಸಿದಂತೆ ಮಾಧ್ಯಮಗಳಿಗೆ ಮಾಹಿತಿ ನೀಡುವ ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರದ ವಕ್ತಾರರಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಅವರು ಆಯ್ಕೆಯಾಗಿದ್ದಾರೆ. ರಾಜ್ಯದ ಮುಖ್ಯಮಂತ್ರಿ B S ಯಡಿಯೂರಪ್ಪ ಅವರ ಸೂಚನೆ ಮೇರೆಗೆ ಈ ಹೊಸ ಜವಾಬ್ದಾರಿಯನ್ನು ಸುರೇಶ್‌ಕುಮಾರ್ ವಹಿಸಿಕೊಂಡಿದ್ದಾರೆ.
* ಈ ಮೊದಲು ಆರೋಗ್ಯ ಸಚಿವ ಬಿ. ಶ್ರೀರಾಮುಲು ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ಪ್ರತ್ಯೇಕವಾಗಿ ಮಾಧ್ಯಮಗಳಿಗೆ ಮಾಹಿತಿಗಳನ್ನು ನೀಡುತ್ತಿದ್ದರು.

## 04 04 2020 ಎಲೆಕ್ಟ್ರಾನಿಕ್ ಉತ್ಪಾದನಾ ವಲಯವನ್ನು ಉತ್ತೇಜಿಸಲು ಮೂರು ಯೋಜನೆಗಳ ಆರಂಭ



ದೇಶದಲ್ಲಿ ಎಲೆಕ್ಟ್ರಾನಿಕ್ಸ್ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರವು ಒಟ್ಟು ಮೂರು ಯೋಜನೆಗಳನ್ನು ಪ್ರಾರಂಭಿಸಿದೆ. ಈ ಯೋಜನೆಗಳಡಿಯಲ್ಲಿ ಕಂಪನಿಗಳು ಎಲೆಕ್ಟ್ರಾನಿಕ್ ಉತ್ಪನ್ನಗಳ ಮೇಲಿನ ಮಾರಾಟವನ್ನು ಹೆಚ್ಚಿಸಿದಾಗ ಶೇಕಡಾ 4% ರಿಂದ 6% ರಷ್ಟು ಪ್ರೋತ್ಸಾಹವನ್ನು ನೀಡುವುದಾಗಿದೆ.
* Production Linked Incentive ಸ್ಕೀಮ್ (ಉತ್ಪಾದನೆ ಆಧಾರಿತ ಪ್ರೋತ್ಸಾಹಕ ಯೋಜನೆ)
* Electronics Manufacturing Clusters 2.0 (EMC 2.0) (ಎಲೆಕ್ಟ್ರಾನಿಕ್ಸ್ ಉತ್ಪಾದನಾ ಕ್ಲಸ್ಟರ್ 2.0)
* Scheme for Promotion of Manufacturing of Electronics Components and Semiconductors (SPECS)(ಎಲೆಕ್ಟ್ರಾನಿಕ್ಸ್ ಘಟಕಗಳು ಮತ್ತು ಅರೆವಾಹಕಗಳ ಉತ್ಪಾದನೆಯನ್ನು ಉತ್ತೇಜಿಸುವ ಯೋಜನೆ)

# Current affairs of April 2020 from KPSC Vaani

05 04 2020 ಜೀವನ್: ರೈಲ್ವೆ ಇಲಾಖೆಯಿಂದ ಕಡಿಮೆ ವೆಚ್ಚದ ವೆಂಟಿಲೇಟರ್ ಮಾದರಿಪರೀಕ್ಷಿಸಿದICMR



ಕಪುರ್ತಲಾದ ರೈಲು ಕೋಚ್ ಕಾರ್ಖಾನೆಯಿಂದ ನಿರ್ಮಾಣ ಮಾಡಲಾದ ಅತಿ ಕಡಿಮೆ ವೆಚ್ಚದ ಹಾಗೂ ಕಡಿಮೆ ಶಕ್ತಿ ಬಳಸಿಕೊಳ್ಳುವ ವೆಂಟಿಲೇಟರ್ ಮಾದರಿ ತಯಾರಿಸಲಾಗಿದ್ದು, ಈ ಮಾದರಿಗಳನ್ನು ಬಹುಸಂಖ್ಯೆಯಲ್ಲಿ ತಯಾರಿಸುವ ಮೊದಲು ಈ ಮಾದರಿಯನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ICMR) ಪರೀಕ್ಷಿಸಿದೆ.

05 04 2020 ಕರುಣಾ : ಕರೋನ ವೈರಸ್ ವಿರುದ್ಧ ಹೋರಾಡಲು ನಾಗರೀಕ ಸೇವೆಗಳ ಅಧಿಕಾರಿಗಳಜಾಗೃತಿ




ದೇಶದ ನಾಗರೀಕ ಸೇವಕರ ಸಂಘಗಳು CARUNA ಎಂಬ ಜಾಗೃತಿ ಅಭಿಯಾನ ಆರಂಭಿಸಿದ್ದು, CARUNA ಸಹಕಾರಿ ವೇದಿಕೆಯಾಗಿದೆ. ಇದರಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಸೇರಿದ್ದಾರೆ. ವೇದಿಕೆಯನ್ನು ಎನ್‌ಜಿಒ, ಉದ್ಯಮದ ಮುಖಂಡರು, ಐಟಿ ವೃತ್ತಿಪರರು ಮತ್ತು ಸಿವಿಲ್ ಸರ್ವಂಟ್ಸ್ ಗಳು ಪ್ರತಿನಿಧಿಸಲಿದ್ದಾರೆ. ಭಾರತೀಯ ನಾಗರೀಕ ಸೇವೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ದೇಶಾದ್ಯಂತ ಹರಡಿಕೊಂಡಿರುವುದರಿಂದ, ಸರ್ಕಾರದ ಪ್ರಯತ್ನಕ್ಕೆ ಸಹಾಯ ಮಾಡಲು ಮತ್ತು ಪೂರಕವಾಗಿ ಈ ಸಂಸ್ಥೆ ಸೂಕ್ತ ವೇದಿಕೆಯಾಗಿದೆ.

# Current affairs of April 2020 from KPSC Vaani

05 04 2020 2021ರ ನವೆಂಬರ್‌ನಲ್ಲಿ ಏಷ್ಯನ್ ಯುವ ಕ್ರೀಡಾಕೂಟ ವನ್ನು ಚೀನಾದಲ್ಲಿ ಆಯೋಜಿಸಲಾಗುವದು.



ಮೂರನೇ ಏಷ್ಯನ್ ಯುವ ಕ್ರೀಡಾಕೂಟವನ್ನು ಬರುವ ನವೆಂಬರ್ 2021ರಲ್ಲಿ ಚೀನಾದಲ್ಲಿ ನಡೆಸಲು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ ನಿರ್ಧರಿಸಿದೆ.
* ಈ ಯುವ ಕ್ರೀಡಾಕೂಟವನ್ನು ಪ್ರತಿ 4 ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ
. * ಏಷ್ಯನ್ ಕ್ರೀಡಾಕೂಟದ ನಂತರದ ಈ ಕ್ರೀಡೆಯು ಎರಡನೇ ಅತಿದೊಡ್ಡ ಕ್ರೀಡೆಯಾಗಿದೆ
* ಮೊದಲ ಏಷ್ಯನ್ ಯುವ ಕ್ರೀಡಾಕೂಟವನ್ನು 2011 ರಲ್ಲಿ ಸಿಂಗಾಪುರದಲ್ಲಿ, 2013ರಲ್ಲಿ ಚೀನಾದಲ್ಲಿ ನಡೆಸಲಾಯಿತು.
*ಪ್ರತಿ ಬಾರಿಯೂ 2,500ಕ್ಕೂ ಹೆಚ್ಚು ಕ್ರೀಡಾಪಟುಗಳು ಏಷ್ಯನ್ ಯೂತ್ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಾರೆ.

05 04 2020 ಒಡಿಶಾ ಸರ್ಕಾರ ಯುನಿಸೆಫ್ ಸಹಯೋಗದೊಂದಿಗೆ "ಮೊ ಪ್ರತಿವಾ"(Mo Prativa)ಮಕ್ಕಳಕಾರ್ಯಕ್ರಮಆರಂಭ




ಒಡಿಶಾ ಸರ್ಕಾರ ಇತ್ತೀಚೆಗೆ ಯುನಿಸೆಫ್ (ಯುನೈಟೆಡ್ ನೇಷನ್ಸ್ ಚಿಲ್ಡ್ರನ್ಸ್ ಫಂಡ್ಸ್) ಸಹಯೋಗದೊಂದಿಗೆ "ಮೊ ಪ್ರತಿವಾ (Mo Prativa)"ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಕಾರ್ಯಕ್ರಮದಲ್ಲಿ ಮಕ್ಕಳು ಘೋಷಣೆಗಳು, ರೇಖಾಚಿತ್ರಗಳು, ಸಣ್ಣ ಕಥೆ ಬರೆಯುವಿಕೆ, ವರ್ಣಚಿತ್ರಗಳು ಸೇರಿ ಮುಂತಾದ ಆನ್‌ಲೈನ್ ಸ್ಪರ್ಧೆಗಳಲ್ಲಿ ಮಕ್ಕಳಿಗೆ ಭಾಗವಹಿಸಲು ವಿವಿಧ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ.
* ಈ ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳು ತಮ್ಮ ಕಥೆ ಕವನ ರೇಖಾ ಚಿತ್ರಗಳನ್ನು ಅಪ್‌ಲೋಡ್ ಮಾಡಬೇಕಾಗುತ್ತದೆ ಮತ್ತು ಪ್ರತಿ ವಾರ ಅವರಿಗೆ ಪ್ರಮಾಣಪತ್ರವನ್ನು ನೀಡಲಾಗುತ್ತದೆ.
* 5 ರಿಂದ 18 ವರ್ಷ ವಯಸ್ಸಿನ ಮಕ್ಕಳು ಈ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ಘೋಷ ವಾಕ್ಯ :COVID 19ಸಮಯದಲ್ಲಿ ಯುವ ಪ್ರಜೆಯಾಗಿ ನನ್ನ ಜವಾಬ್ದಾರಿ ಮತ್ತು ಲಾಕ್ ಡೌನ್ ಸಮಯದಲ್ಲಿ ಮನೆಯಲ್ಲಿರುವುದು (My Responsibility as a young citizen during COVID 19 and Being at home during lockdown)

# Current affairs of April 2020 from KPSC Vaani

05 04 2020 ಫಿಫಾ ಅಂಡರ್ 17ಮಹಿಳಾ ವಿಶ್ವಕಪ್:ನವೆಂಬರ್ 2020ಕ್ಕೆ ಮುಂದೂಡಲಾಗಿದೆ




ದಿ ಫೆಡರೇಶನ್ ಇಂಟನ್ರ್ಯಾಷನಲ್ ಡಿ ಫುಟ್ಬಾಲ್ ಅಸೋಸಿಯೇಷನ್ (The Federation Internationale de Football Association) (FIFA) ಸಂಸ್ಥೆಯು ಅಂಡರ್
17 ಮಹಿಳಾ ಫುಟ್ಬಾಲ್ ವಿಶ್ವಕಪ್ ಕ್ರೀಡಾಕೂಟವನ್ನು ನವೆಂಬರ್ 2020 ಕ್ಕೆ ಮುಂದೂಡಿದೆ.

* ಅಂಡರ್ 17 ಮತ್ತು 20 ವರ್ಷದೊಳಗಿನ ಮಹಿಳಾ ವಿಶ್ವಕಪ್ ಅನ್ನು ಭಾರತದ ನಗರಗಳಾದ ಗುವಾಹಟಿ, ನವೀ ಮುಂಬೈ, ಅಹಮದಾಬಾದ್, ಭುವನೇಶ್ವರ ಮತ್ತು ಕೋಲ್ಕತ್ತಾದಲ್ಲಿ ನಡೆಸಲು ನಿರ್ಧರಿಸಲಾಗಿದೆ.

05 04 2020 ಏಪ್ರಿಲ್8ರಂದುಭಾರತದಲ್ಲಿಕಾಣಸಲಿರುವ`ಸೂಪರ್‌ಮೂನ್'



ನವದೆಹಲಿ : ಏಪ್ರಿಲ್8ರಬೆಳಗ್ಗೆ8ಗಂಟೆಗೆಸೂಪರ್‌ಮೂನ್‌ಗೋಚರಿಸಲಿದೆಎಂದುಭಾರತೀಯ ಖಗೋಳಶಾಸ್ತ್ರಜ್ಞರು ತಿಳಿಸಿದ್ದಾರೆ. ಏಪ್ರಿಲ್ 7 ರ ರಾತ್ರಿ ಉತ್ತರ ಅಮೆರಿಕಾ ಹಾಗೂ ಇತರ ರಾಷ್ಟ್ರಗಳಲ್ಲಿ ಸೂಪರ್ ಮೂನ್ ಗೋಚರಿಸಲಿದ್ದು, ಭಾರತದಲ್ಲಿ ಏಪ್ರಿಲ್ 8 ರ ಬೆಳಗ್ಗೆ 8 ಗಂಟೆಗೆ ಸೂರ್ಯನ ಬೆಳಕು ಇರುವುದರಿಂದ ವೀಕ್ಷಣೆಗೆ ತೊಡಕಾಗಬಹುದೆಂದು ಕೂಡ ತಿಳಿಸಿದ್ದಾರೆ.

* ಏಪ್ರಿಲ್ 7 ರ ರಾತ್ರಿ ಹಾಗೂ ಏಪ್ರಿಲ್ 8 ರ ಬೆಳಗ್ಗೆ ಚಂದ್ರ ಭೂಮಿಯಿಂದ 3,56,000 ಕಿ.ಮೀ. ದೂರದಲ್ಲಿ ಪರಿಭ್ರಮಿಸುತ್ತದೆ.
* ಉಳಿದ ದಿನಗಳಲ್ಲಿ ಚಂದ್ರ ಮತ್ತು ಭೂಮಿಯ ಸರಾಸರಿ ಅಂತರ 3,84,000 ಕಿ.ಮೀ. ಆಗಿರುತ್ತದೆ.

# Current affairs of April 2020 from KPSC Vaani

06 04 2020 ಸಿಂಧು 3 ವರ್ಷ ವಿಶ್ವ ಚಾಂಪಿಯನ್...!



ನವದೆಹಲಿ : ಟೋಕಿಯೊ ಒಲಿಂಪಿಕ್ಸ್ ಮುಂದಿನ ವರ್ಷ ಜುಲೈನಲ್ಲಿ ಮರುನಿಗದಿಯಾಗಿರುವುದು ಮತ್ತು ಮುಂದಿನ ವಿಶ್ವ ಚಾಂಪಿಯನ್‌ಷಿಪ್ 2021ರ ಆಗಸ್ಟ್‌ನಲ್ಲಿ ಸ್ಪೇನ್ ನಲ್ಲಿ ನಡೆಯಲಿರುವ ಕಾರಣ, ಮತ್ತು ಅದರ ಬೆನ್ನಲ್ಲೇ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ನಡೆಯುವುದು ಕೂಡ ಅನುಮಾನವೆನಿಸಿದೆ. ಈ ಎಲ್ಲ ಬೆಳವಣಿಗೆಗಳಿಂದ ಭಾರತದ ಬ್ಯಾಡ್ಮಿಂಟನ್ ತಾರೆ ಪಿವಿ ಸಿಂಧುಗೆ 3 ವರ್ಷಗಳ ಕಾಲ ವಿಶ್ವ ಚಾಂಪಿಯನ್ ಆಗಿ ಉಳಿಯುವ ಅವಕಾಶವಿದೆ. ಪಿವಿ ಸಿಂಧು ಅವರು ಕಳೆದ ವರ್ಷದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸುವ ಮೂಲಕ ಈ ಸಾಧನೆ ಮಾಡಿದ ಮೊದಲ ಭಾರತೀಯರೆಂಬ ಕೀರ್ತಿಗೆ ಪಾತ್ರರಾಗಿದ್ದರು.

06 04 2020 ಹಲ್ದಿರಾಮ್ ಭುಜಿಯಾವಾಲಾ ಸ್ನ್ಯಾಕ್ಸ್ ಸಂಸ್ಥೆಯ ಮಾಲೀಕ ಮಹೇಶ್ ಅಗರ್ವಾಲ್ ನಿಧನ



ಕೋಲ್ಕತ: ಭಾರತದಾದ್ಯಂತ ಪ್ರಸಿದ್ಧವಾಗಿರುವ 'ಹಲ್ದಿರಾಮ್ ಭುಜಿಯಾವಾಲಾ' ಸ್ನ್ಯಾಕ್ಸ್ ಸಂಸ್ಥೆಯ ಮಾಲೀಕರಾದ ಮಹೇಶ್ ಅಗರ್ವಾಲ್ ಅವರು ಶುಕ್ರವಾರ(ಏಪ್ರಿಲ್ 03) ದಂದು ಸಿಂಗಾಪುರ್‌ನಲ್ಲಿ ವಿಧಿವಶರಾದರು. ಇವರು ಲಿವರ್ ಕಾಯಿಲೆಯಿಂದ ಬಳಲುತ್ತಿದ್ದರು. ಹಲ್ದಿರಾಮ್ ಭುಜಿಯಾವಾಲಾ: "ಹಲ್ದಿರಾಮ್" ಅನ್ನು 1937 ರಲ್ಲಿ ಶ್ರೀ ಗಂಗಾ ಭೀಷೆನ್ ಅಗರ್ವಾಲ್ ಅವರು ಸ್ಥಾಪಿಸಿದರು, ಹಲ್ದಿರಾಮ್ಸ್ ಪ್ರಮುಖವಾಗಿ ಆಲೂಗೆಡ್ಡೆ ಚಿಪ್ಸ್ ಸೇರಿ ಭಾರತೀಯ ಸಿಹಿತಿಂಡಿಗಳ ತಯಾರಕ ಸಂಸ್ಥೆಯಾಗಿದೆ. ಕಂಪನಿಯು ನಾಗ್ಪುರ, ನವದೆಹಲಿ, ಗುರಗಾಂವ್, ರುದ್ರಪುರ ಮತ್ತು ನೋಯ್ಡಾದಂತಹ ವಿವಿಧ ಸ್ಥಳಗಳಲ್ಲಿ ತನ್ನ ಉತ್ಪಾದನಾ ಘಟಕಗಳನ್ನು ಹೊಂದಿದೆ.

# Current affairs of April 2020 from KPSC Vaani

06 04 2020 ಆಪರೇಷನ್ ಸಂಜೀವನಿ: ಮಾಲ್ದೀವ್ಸ್‌ಗೆ 6.2 ಮಿಲಿಯನ್ ಟನ್ ಅಗತ್ಯ ಔಷಧಿಗಳ ಸರಬರಾಜು



ಆಪರೇಷನ್ ಸಂಜೀವನಿ ಹೆಸರಿನಲ್ಲಿ ಭಾರತವು ಮಾಲ್ದೀವ್ಸ್ ಗೆ ಸುಮಾರು 6.2 ಮಿಲಿಯನ್ ಟನ್ ಗಳಷ್ಟು ಅಗತ್ಯ ಔಷಧಿಗಳನ್ನು ಪೂರೈಸಿದೆ. ಈ ವಸ್ತುಗಳನ್ನು ಪೂರೈಸಲು ಭಾರತೀಯ ವಾಯುಪಡೆಯು ಸಹಕಾರ ನೀಡಿದೆ.

* ಭಾರತೀಯ ವಾಯುಪಡೆಯು ಹರ್ಕ್ಯುಲಸ್ ಸಿ 130 ಜೆ ನಲ್ಲಿ ಈ ಔಷಧಿಗಳನ್ನು ವಿಮಾನದಲ್ಲಿ ಸಾಗಿಸಿತು.

06 04 2020 ABD, AIIB ಯಿಂದ $6 ಬಿಲಿಯನ್ USD ಮೊತ್ತ ಪಡೆಯಲು ಭಾರತದಿಂದ ನಿರೀಕ್ಷೆ




ಇಡೀ ದೇಶವನ್ನೇ ತಲ್ಲಣಗೊಳಿಸಿರುವ ಕರೋನ ವೈರಸ್ ವಿರುದ್ಧ ಹೋರಾಡಲು ಭಾರತಕ್ಕೆ ಈಗಾಗಲೇ ವಿಶ್ವ ಬ್ಯಾಂಕ್ ಭಾರತಕ್ಕೆ 1 ಬಿಲಿಯನ್ ಯುಎಸ್ಡಿ ಹಣವನ್ನು ನೀಡಿದೆ, ಇದಲ್ಲದೆ ಭಾರತದಲ್ಲಿ COVID 19 ಪ್ರಕರಣಗಳು ಮತ್ತಷ್ಟು ಹೆಚ್ಚುತ್ತಿರುವ ಹಿನ್ನಲೆ ABD(ಏಶಿಯನ್ ಡೆವಲಪ್ಮೆಂಟ್ ಬ್ಯಾಂಕ್) ಮತ್ತು AIIB (ಏಶಿಯನ್ ಇನ್ಫ್ರಾಸ್ಟ್ರಕ್ಚರ್ ಇನ್ವೆಸ್ಟ್ಮೆಂಟ್ ಬ್ಯಾಂಕ್) ಯಿಂದ 6 ಬಿಲಿಯನ್ ಯುಎಸ್ಡಿಗಳನ್ನು ಹಣವನ್ನು ಪಡೆಯ ಬಯಸಿದೆ.

# Current affairs of April 2020 from KPSC Vaani

06 04 2020 ಆಯುಷ್ಮಾನ್‌ಭಾರತ್‌ಯೋಜನೆಯಡಿ50ಕೋಟಿಬಡವರು ಪರೀಕ್ಷೆಮತ್ತುಚಿಕಿತ್ಸೆಗೆ ಅರ್ಹರು




ಭಾರತಸರ್ಕಾರದಕೇಂದ್ರಆರೋಗ್ಯಸಚಿವರಾದಹರ್ಷವರ್ಧನ್‌ಅವರುಪ್ರಧಾನ್‌ಮಂತ್ರಿಜನಆರೋಗ್ಯ ಯೋಜನೆ (ಆಯುಷ್ಮಾನ್ ಭಾರತ್) ಅಡಿಯಲ್ಲಿ 50 ಕೋಟಿಗೂ ಹೆಚ್ಚು ದುರ್ಬಲ ಮತ್ತು ಬಡ ನಾಗರಿಕರು ಚಿಕಿತ್ಸೆ ಪಡೆಯಲು ಅರ್ಹರು ಎಂದು ಘೋಷಿಸಿದ್ದಾರೆ.
* ಆಯುಷ್ಮಾನ್ ಭಾರತ ಯೋಜನೆಯಡಿಯಲ್ಲಿ ಬಡವರು ಮತ್ತು ದುರ್ಬಲರಿಗೆ (ಅಂದರೆ ಯೋಜನೆಯಡಿ ಪ್ರಯೋಜನಗಳನ್ನುಪಡೆಯಲು ಅರ್ಹನಾಗರಿಕರು)ಪರೀಕ್ಷೆಯನ್ನುಉಚಿತಗೊಳಿಸಲಾಗಿದೆ.

07 04 2020 ವಿದೇಶವ್ಯವಹಾರಇಲಾಖೆಯನೂತನವಕ್ತಾರರಾಗಿಅನುರಾಗ್ ಶ್ರೀವಾಸ್ತವನೇಮಕ



ನವದೆಹಲಿ : ವಿದೇಶ ವ್ಯವಹಾರ ಇಲಾಖೆಯ ವಕ್ತಾರರಾಗಿ ಹಿರಿಯ ರಾಜತಂತ್ರಜ್ಞರಾದ ಅನುರಾಗ್ ಶ್ರೀವಾಸ್ತವ ಅವರು ಸೋಮವಾರದಂದು (06 ಏಪ್ರಿಲ್) ಅಧಿಕಾರ ಸ್ವೀಕರಿಸಿದರು. ರವೀಶ್ ಕುಮಾರ್ ಅವರಿಂದ ತೆರವಾದ ಸ್ಥಾನಕ್ಕೆ ಅನುರಾಗ್ ಶ್ರೀವಾಸ್ತವರನ್ನು ನೇಮಿಸಲಾಗಿದೆ.
* ಅನುರಾಗ್ ಶ್ರೀವಾಸ್ತವ ಅವರು 1999ರ ಬ್ಯಾಚ್‌ನ ಭಾರತೀಯ ವಿದೇಶಿ ಸೇವಾ ಅಧಿಕಾರಿಯಾಗಿದ್ದಾರೆ
* ಜಿನೇವಾದಲ್ಲಿ ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ನಿಯೋಗದಲ್ಲಿ ಕಾರ್ಯನಿರ್ವಹಿಸಿದ್ದರು.

# Current affairs of April 2020 from KPSC Vaani



# Current affairs of April 2020 from KPSC Vaani

07 04 2020 ಕೊರೊನಾವೈರಸ್‌ವಿರುದ್ಧದಹೋರಾಟ:ಪ್ರಧಾನಿಸೇರಿಎಲ್ಲಾ ಸಂಸದರ30%ವೇತನ ಕಡಿತ



ನವದೆಹಲಿ : ಕೋರೋಣ ವೈರಸ್ ನಿಯಂತ್ರಣಕ್ಕಾಗಿ ದೇಶದ ಪ್ರಧಾನಿ, ರಾಷ್ಟ್ರಪತಿ, ಸಂಪುಟ ಸಚಿವರು ಸೇರಿದಂತೆ ಎಲ್ಲಾ ಸಂಸದರ ಸಂಬಳವನ್ನು ಒಂದು ವರ್ಷದ ಅವಧಿಗೆ ಶೇ.30ರಷ್ಟು ಪ್ರಧಾನಿ ಪರಿಹಾರ ನಿಧಿಗಾಗಿ ನೀಡಲು ಇದೆ ಏಪ್ರಿಲ್ 01 ರಿಂದ ಜಾರಿಗೆ ಬರುವಂತೆ ಕಡಿತಗೊಳಿಸುವದಾಗಿ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದ್ದಾರೆ.

07 04 2020 ಕವಚ (CAWACH):COVID 19ಕುರಿತುಕೆಲಸಮಾಡುವ ಸ್ಟಾರ್ಟ್‌ಅಪ್‌ಗಳಬೆಂಬಲಿಸಲುಕೇಂದ್ರದಿಂದಸ್ಥಾಪನೆ



ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ದೇಶದಲ್ಲಿ ಕೋರೋಣದಿಂದ ಎದುರಾಗಿರುವ ಆರೋಗ್ಯ ಬಿಕ್ಕಟ್ಟಿನ ನಡುವೆ "ಕವಚ್" ಎಂಬ ನೂತನ ಕಾರ್ಯಕ್ರಮಯೊಂದನ್ನು ಜಾರಿಗೆ ತಂದಿದೆ.

* ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಜಾರಿಗೆ ತಂದ ಈ ಕಾರ್ಯಕ್ರಮದಡಿಯಲ್ಲಿ COVID 19 ವೈರಸ್ ಕುರಿತಂತೆ ಕಾರ್ಯನಿರ್ವಹಿಸುವ ಸ್ಟಾರ್ಟ್ ಅಪ್ ಗಳನ್ನು ಬೆಂಬಲಿಸಲು ಮತ್ತು ವಿವಿಧ ಹಂತಗಳಲ್ಲಿ ಅಗತ್ಯವಿದ್ದರೆ ಸ್ಟಾರ್ಟ್‌ಅಪ್ಗಳಿಗೆ ಮಾರ್ಗದರ್ಶನ ನೀಡುತ್ತದೆ.

* ಐಐಟಿ ಬಾಂಬೆ ಮತ್ತು ಸೊಸೈಟಿ ಫಾರ್ ಇನ್ನೋವೇಶನ್ ಅಂಡ್ ಎಂಟರ್‌ಪ್ರೆನ್ಯೂರ್‌ಶಿಪ್ (SINE)ಈ ಕಾರ್ಯಕ್ರಮವನ್ನು ಬೆಂಬಲಿಸಿದೆ

# Current affairs of April 2020 from KPSC Vaani

07 04 2020 ಭಾರತಸರ್ಕಾರದಿಂದ“MHRDAICTECOVID 19 ವಿದ್ಯಾರ್ಥಿಸಹಾಯವಾಣಿಪೋರ್ಟಲ್”ಪ್ರಾರಂಭ






ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯವು “MHRD AICTE COVID 19 ವಿದ್ಯಾರ್ಥಿ ಸಹಾಯವಾಣಿ ಪೋರ್ಟಲ್” ಅನ್ನು ಆರಂಭಿಸಿದೆ. ದೇಶದಲ್ಲಿ ಕೋರೋಣದಿಂದಾಗಿ ಹೇರಿರುವ ಲಾಕ್ ಡೌನ್'ನಿಂದಾಗಿ ಹಾಸ್ಟೆಲ್ ಮತ್ತು ಕಾಲೇಜುಗಳನ್ನು
ಮುಚ್ಚುವುದರಿಂದ ವಿದ್ಯಾರ್ಥಿಗಳು ಹಲವು ತೊಂದರೆಗಳನ್ನು ಅನುಭವಿಸುತ್ತಿರುವುದನ್ನು ಅರಿತ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯವು ವಿದ್ಯಾರ್ಥಿಗಳಿಗಾಗಿ ಸಹಾಯ ನೀಡುವ ಉದ್ದೇಶವನ್ನು ಈ ನೂತನ ಪೋರ್ಟಲ್ ಆರಂಭಿಸಿದೆ.

07 04 2020 ಒಬ್ಬ ಕೊರೋನಾ ಸೋಂಕಿತ ವ್ಯಕ್ತಿ 30 ದಿನದಲ್ಲಿ 406 ಮಂದಿಗೆಸೋಂಕು ತಗುಲಿಸಬಹುದು:ಕೇಂದ್ರಸರ್ಕಾರ



ನವದೆಹಲಿ: ಕೇಂದ್ರ ಸರ್ಕಾರ ವಿಧಿಸಿರುವ ಲಾಕ್ ಡೌನ್ ಆದೇಶಗಳು ಮತ್ತು ಸಾಮಾಜಿಕ ಅಂತರ ಪಾಲಿಸದೇ ಇದ್ದ ಪಕ್ಷದಲ್ಲಿ ಒಬ್ಬ ಕರೋನ ಸೋಂಕಿತ ವ್ಯಕ್ತಿ ಕೇವಲ 30 ದಿನಗಳ ಅಂತರದಲ್ಲಿ ಬರೋಬ್ಬರಿ 406 ಜನರಿಗೆ ಸೋಂಕು ತಗುಲಿಸಬಹುದು ಎಂದು ಕೇಂದ್ರ ಸರ್ಕಾರ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ದೇಶದಲ್ಲಿ ದಿನೇ ದಿನೇ ಕೊರೋನಾ ವೈರಸ್ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಅಂಕಿ ಅಂಶಗಳನ್ನು ಬಿಡುಗಡೆ ಮಾಡಿದ್ದು ಜನತೆ ಲಾಕ್ ಡೌನ್ ನಿಯಮಗಳನ್ನು ಸರಿಯೆಯಾಗಿ ಪಾಲಿಸದ ಇದ್ದಲ್ಲಿ ದೊಡ್ಡ ಗಂಡಾತರ ಎದುರಾಗಬಹುದೆಂದು ತಿಳಿಸಿದೆ.

* ದೇಶದಲ್ಲಿಒಟ್ಟು136ಸರ್ಕಾರಿಲ್ಯಾಬ್ಮತ್ತು59ಖಾಸಗಿಲ್ಯಾಬ್‌ಗಳುಕರೋನವೈರಸ್ಸೋಂಕು ಪರೀಕ್ಷೆನಡೆಸುತ್ತಿದೆ.

# Current affairs of April 2020 from KPSC Vaani

07 04 2020 ದೆಹಲಿಯಲ್ಲಿ ಸರ್ಕಾರದಿಂದ ಕೊರೋನಾ ವಿರುದ್ಧ ಹೋರಾಟಕ್ಕೆ '5ಟಿ ಯೋಜನೆ'



ನವದೆಹಲಿ: ಮಾರಾಣಾಂತಿಕ ಕೊರೋನಾ ವೈರಸ್ ಸೋಂಕನ್ನು ನಿಯಂತ್ರಿಸಲು ದೆಹಲಿಯ ಸರ್ಕಾರ '5ಟಿ ಯೋಜನೆ'ಯನ್ನು ಜಾರಿತರಲು ಚಿಂತನೆ

* 5ಟಿ ಯೋಜನೆ: ಟೆಸ್ಟಿಂಗ್, ಟ್ರೇಸಿಂಗ್, ಟ್ರೀಟ್ಮೆಂಟ್, ಟೀಮ್ ವರ್ಕ್ ಮತ್ತು ಟ್ರ್ಯಾಕಿಂಗ್ ಆಯಂಡ್ ಮಾನಿಟರಿಂಗ್ (ಪರೀಕ್ಷೆ, ಪತ್ತೆ ಹಚ್ಚುವುದು, ಚಿಕಿತ್ಸೆ ನೀಡುವುದು, ತಂಡವಾಗಿ ಕೆಲಸ ಮಾಡುವುದು ಮತ್ತು ನಿರ್ವಹಣೆ) ಈ ಯೋಜನೆ ಕುರಿತು ಡಿಜಿಟಲ್ ಸುದ್ದಿಗೋಷ್ಠಿಯಲ್ಲಿ ನಡೆಸಿ ದೆಹಲಿ ಸರ್ಕಾರದ ಮುಖ್ಯಮಂತ್ರಿ ಅರವಿಂದ ಕೇಜ್ರೀವಾಲ್ ಅವರು ಮಾಹಿತಿ ನೀಡಿದ್ದಾರೆ.

07 04 2020 ಕೊರೋನಾ ವೈರಸ್ : 24 ಔಷಧಿಗಳ ಮೇಲಿನ ನಿರ್ಬಂಧ ತೆರವುಗೊಳಿಸಿದ ಕೇಂದ್ರ



ಹೊಸದಿಲ್ಲಿ : ಕೇಂದ್ರ ಸರ್ಕಾರ ಭಾರತದಲ್ಲಿ ತಯಾರಾಗುವ ಒಟ್ಟು 24 ಔಷಧಿಗಳ ಮೇಲಿನ ನಿರ್ಬಂಧ ತೆರವುಗೊಳಿಸಿದೆ ಆದೇಶ ಹೊರಡಿಸಿದೆ. ದೇಶದಲ್ಲಿ ಕೊರೋನಾ ವೈರಸ್ ಸೋಂಕು ಕಾಣಿಸಿಕೊಂಡ ಆರಂಭದಲ್ಲಿ ಕೆಲ ಔಷಧಿಗಳ ಮೇಲೆ ನಿರ್ಬಂಧ ಹೇರಿ ರಫ್ತು ಮಾಡದಂತೆ ಸೂಚನೆ ನೀಡಿತ್ತು. ವಿಶ್ವಾದ್ಯಂತ ಕೊರೋನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆ ನಿರ್ಬಂಧ ವಿಧಿಸಿದ ಈ ಔಷಧಿಗಳ ಬೇಡಿಕೆ ಹೆಚ್ಚಾಗಿದೆ, ಆದ್ದರಿಂದ ಕೇಂದ್ರ ಸರ್ಕಾರ ಈ ಔಷಧಿಗಳ ಮೇಲಿನ ನಿರ್ಬಂಧಗಳನ್ನು ತೆರವುಗೊಳಿಸಿದೆ.

*ಭಾರತ ಸರ್ಕಾರ ರಫ್ತು ನಿಷೇಧಿಸಿರುವ Hydroxychloroquineಔಷಧಿಗಾಗಿ ಅಮೆರಿಕ ಸೇರಿದಂತೆ ವಿಶ್ವದ 30ಕ್ಕೂ ಹೆಚ್ಚು ರಾಷ್ಟ್ರಗಳು ಭಾರತಕ್ಕೆ ಬೇಡಿಕೆ ಇಟ್ಟಿವೆ.

# Current affairs of April 2020 from KPSC Vaani

07 04 2020 ಜಗತ್ತಿನಾದ್ಯಂತ 6 ಮಿಲಿಯನ್ ನರ್ಸ್‌ಗಳ ಕೊರತೆ : ವಿಶ್ವ ಆರೋಗ್ಯ ಸಂಸ್ಥೆ



ಜಿನೀವ (ಸ್ವಿಟ್ಸರ್‌ಲ್ಯಾಂಡ್) : ಜಗತ್ತಿನಾಧ್ಯಂತ ವ್ಯಾಪಿಸಿರುವ ಕೋವಿಡ್ 19 ಕಾಯಿಲೆ ವಿರುದ್ಧ ಹೋರಾಡಲು ಎದುರಿಸುವ ನಿಟ್ಟಿನಲ್ಲಿ ಜಗತ್ತು ಸುಮಾರು 60 ಲಕ್ಷ ನರ್ಸ್‌ಗಳ ಕೊರತೆಯನ್ನು ಎದುರಿಸುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲುಎಚ್‌ಒಕ) ವರದಿಯೊಂದನ್ನು ಬಿಡುಗಡೆ ಮಾಡಿದೆ. 'ನರ್ಸಿಂಗ್ ನೌ' ಮತ್ತು ಇಂಟರ್‌ನ್ಯಾಶನಲ್ ಕೌನ್ಸಿಲ್ ಆಫ್ ನರ್ಸಸ್ (ಐಸಿಎನ್) ಸಂಘಟನೆಗಳ ಜೊತೆಗೆ ವಿಶ್ವ ಆರೋಗ್ಯ ಸಂಸ್ಥೆಯು ಸಿದ್ಧಪಡಿಸಿದ ವರದಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ.
*ಜಗತ್ತಿನಲ್ಲಿ ಈಗಾಗಲೇ 2.8ಕೋಟಿ ನರ್ಸ್‌ಗಳಿದ್ದಾರೆ ಎಂದು ವರದಿ ಹೇಳಿದೆ.

08 04 2020 ಕರೋನವೈರಸ್ : ಜಪಾನ್‌ನಲ್ಲಿತುರ್ತುಪರಿಸ್ಥಿತಿಘೋಷನೆ



ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾದ ಜಪಾನ್ ನಲ್ಲಿ ಈಗಾಗಲೇ ಜಪಾನ್‌ನಲ್ಲಿ 3,906 ಕ್ಕೂ ಹೆಚ್ಚು COVID 19ಪ್ರಕರಣಗಳಿವೆ ಮತ್ತು ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆ ಹಾಗೂ
ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ತುರ್ತು ಪರಿಸ್ಥಿತಿ ಘೋಷಿಸಿತು. ಈ ತುರ್ತು ಪರಿಸ್ಥಿತಿ ದಿನಾಂಕ 06 ಮೇ 2020 ರವರೆಗೆ ಇರುತ್ತದೆ.

# Current affairs of April 2020 from KPSC Vaani

08 04 2020 "ಜನಔಷದಿ ಸುಗಮ್ ಆ್ಯಪ್" ಆರಂಭ




ಪ್ರಧಾನ್ ಮಂತ್ರಿ ಭಾರತೀಯ ಜನೌಷಧಿ ಯೋಜನ (ಪಿಎಂಬಿಜೆಎಪಿ) ಅಡಿಯಲ್ಲಿ ಸ್ಥಾಪಿಸಲಾದ ಪ್ರಧಾನ್ ಮಂತ್ರಿ ಜನ ಔಷಧಿ ಕೇಂದ್ರಗಳಿಂದ ಅಗತ್ಯವಿರುವ ವೃದ್ಧರು ಮತ್ತು ಇತರರೋಗಿಗಳ ಮನೆ ಬಾಗಿಲಿಗೆ ಅಗತ್ಯ ಔಷಧಿಗಳನ್ನು ಪೂರೈಸಲಾಗುತ್ತಿದೆ. ಜನ ಔಷದಿ ಸುಗಮ್ ಆ್ಯಪ್ :

* ಈ ಆ್ಯಪ್ ನಿಂದ ಹತ್ತಿರದ ಪ್ರಧಾನ್ ಮಂತ್ರಿ ಜನೌಷಧಿ ಕೇಂದ್ರಗಳನ್ನೂ ಗುರುತಿಸಬಹುದು.
* ಆ್ಯಪ್ ನಲ್ಲಿ ಔಷಧಿಗಳ ಬೆಲೆ ಮತ್ತು ಅವುಗಳ ಲಭ್ಯತೆಯ ಮಾಹಿತಿ ಪಡೆಯಬಹುದು.

08 04 2020 ಕೃಷಿ ವಿಜ್ಞಾನ ಕೇಂದ್ರ: ಮೀನು ಯೋಜನೆಯಡಿ ಬಾಗಿಲಿಗೆ ಮೀನುಗಳ ವಿತರಣೆ



ಸೆಂಟ್ರಲ್ ಮೆರೈನ್ ಫಿಶರೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಶಿ ವಿಜ್ಞಾನ ಕೇಂದ್ರವು ಕೇರಳದಲ್ಲಿ ಮನೆಗಳ ಬಾಗಿಲಿಗೆ ಮೀನು ವಿತರಣಾ ಯೋಜನೆ ಆರಂಭಿಸಿದೆ. ಈ ಯೋಜನೆಯಡಿ ಕೊಚ್ಚಿ ನಗರದ ಹಲವು ಮನೆಗಳಿಗೆ ಮೀನುಗಳನ್ನು ವಿತರಣೆ ಮಾಡಲಾಗುವದು. ಕೊಚ್ಚಿ ನಗರದಲ್ಲಿ ಡೋರ್ ಡೆಲಿವರಿ ಮೀನು ಯೋಜನೆಯು ಸರಾಸರಿ ದೈನಂದಿನ ಸರಬರಾಜು 510 ಕೆ.ಜಿ.ಯಷ್ಟು ಮೀನುಗಳನ್ನು ಪೂರೈಸುತ್ತಿದೆ.

# Current affairs of April 2020 from KPSC Vaani

## 08 04 2020 Covid 19 ಪರೀಕ್ಷೆಯನ್ನು ಉಚಿತವಾಗಿ ಮಾಡುವಂತೆ ಕೇಂದ್ರಕ್ಕೆ ಸುಪ್ರಿಂ ಸೂಚನೆ



ನವದೆಹಲಿ : ಕೋವಿಡ್ 19 ಸೋಂಕಿನ ಪರೀಕ್ಷಾ ಸೌಲಭ್ಯವನ್ನು ದೇಶದ ಎಲ್ಲ ನಾಗರಿಕರಿಗೆ ಉಚಿತವಾಗಿ ಲಭ್ಯವಾಗುವಂತೆ ಮಾಡಲು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸಲಹ ನೀಡಿದೆ. ಪ್ರಸ್ತುತ, ಖಾಸಗಿ ಪ್ರಯೋಗಾಲಗಳಿಗೆ ಕರೋನವೈರಸ್ (ಕೋವಿಡ್ 19) ಸೋಂಕು ಪರೀಕ್ಷಿಸಲು ಅವಕಾಶವಿದ್ದು ಪ್ರತಿ ಪರೀಕ್ಷೆಗೆ 4500 ರೂಗಳ ಶುಲ್ಕವನ್ನು ನಿಗದಿಪಡಿಸಲಾಗಿದೆ. ಇನ್ನು ಎಲ್ಲ ಸರ್ಕಾರೀ ಆಸ್ಪತ್ರೆಗಳಲ್ಲಿ ಈ ಪರೀಕ್ಷೆ ಉಚಿತವಾಗಿ ಮಾಡಲಾಗುತ್ತದೆ.

* ಖಾಸಗಿ ಲ್ಯಾಬ್‌ಗಳನ್ನು ಕರೋನವೈರಸ್ ಪರೀಕ್ಷೆ ಮಾಡಿಸಿಕೊಳ್ಳುವ ಜನರಿಗೆ ಶುಲ್ಕ ಮರುಪಾವತಿಸುವಂತೆ ನ್ಯಾಯಾಧೀಶರಾದ ಅಶೋಕ್‌ಭೂಷಣ್ ಮತ್ತುಎಸ್‌ರವೀಂದ್ರಭಟ್‌ಅವರನೊಳಗೊಂಡನ್ಯಾಯಪೀಠವುಸೂಚನೆನೀಡಿದೆ.

## 09 04 2020 ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ: 400 ಮಿಲಿಯನ್ ಭಾರತೀಯ ಕಾರ್ಮಿಕರುಬಡತನಕ್ಕೊಳಗಾಲಿದ್ದಾರೆ




ದಿನಾಂಕ ಏಪ್ರಿಲ್ 8, 2020 ರಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು "COVID 19 ಮತ್ತು ಕೆಲಸದ ಪ್ರಪಂಚ"(COVID 19 and world of work) ಎಂಬ ವರದಿಯನ್ನು ಬಿಡುಗಡೆ ಮಾಡಿದೆ. ಈ ವರದಿಯ ಪ್ರಕಾರ, ಭಾರತದಲ್ಲಿ ಸುಮಾರು 400 ಮಿಲಿಯನ್ ಜನರು ಕೋವಿದ್ 19 ನಿಂದಾಗಿ ಬಡತನಕ್ಕೊಳಗಾಗಲಿದ್ದಾರೆ ಎಂದು ಉಲ್ಲೇಖಿಸಿದೆ.

ಮುಖ್ಯಾಂಶಗಳು ಕೋವಿಡ್ 19 ನಿಂದಾಗಿ ಜಾಗತಿಕವಾಗಿ ಸುಮಾರು 195 ಮಿಲಿಯನ್ ಪೂರ್ಣ ಪ್ರಮಾಣದ ಉದ್ಯೋಗಗಳು ಉದ್ಯೋಗ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು ಎಂದು ವಿಶ್ವಸಂಸ್ಥೆಯ ಕಾರ್ಮಿಕ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಎಚ್ಚರಿಸಿದೆ.

* ಅರಬ್ ದೇಶಗಳಲ್ಲಿ ಸುಮಾರು 5 ಮಿಲಿಯನ್ ನಷ್ಟು ಜನ ಪೂರ್ಣ ಸಮಯದಕೆಲಸಗಾರರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.
* ಪೆಸಿಫಿಕ್ ಮತ್ತು ಏಷ್ಯಾದಲ್ಲಿ ಸುಮಾರು 125 ಮಿಲಿಯನ್ ಜನರು ಉದ್ಯೋಗ ಕಳೆದುಕೊಳ್ಳಲಿದ್ದಾರೆ.
* ಅಮೆರಿಕ ಮತ್ತು ಆಫ್ರಿಕಾದಲ್ಲಿ ನಿರುದ್ಯೋಗದ ಅಪಾಯದ ಶೇಕಡಾವಾರು ಕ್ರಮವಾಗಿ43%ಮತ್ತು26%ಆಗಿದೆ.

# Current affairs of April 2020 from KPSC Vaani

09 04 2020 SAFE ಯೋಜನೆ: ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ SIDBIಯಿಂದ 1 ಕೋಟಿವರೆಗೆಬಂಡವಾಳ

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ 1 ಕೋಟಿ ರೂಪಾಯಿಗಳ ತುರ್ತು ಕಾರ್ಯ ಬಂಡವಾಳವನ್ನು ನೀಡುವುದಾಗಿ ಭಾರತದ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್(Small Industries Development Bank of India) ಘೋಷಿಸಿದೆ.
SAFE ಯೋಜನೆ SIDBI ದಿನಾಂಕ ಮಾರ್ಚ್ 26,2020ರಂದು SAFEಯೋಜನೆಯನ್ನು ಆರಂಭಿಸಿದ್ದು, ಕರೋನಾ ವೈರಸ್ ವಿರುದ್ಧ ತುರ್ತು ಕಾರ್ಯಗಳನ್ನು ಸರಳಗೊಳಿಸಲು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೆರವು ನೀಡಿದೆ.
* ಉತ್ಪಾದನೆಯಲ್ಲಿ ತೊಡಗಿರುವ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಇದು ಹಣಕಾಸಿನ ನೆರವು ನೀಡುವ ಯೋಜನೆಯಾಗಿದೆ.

09 04 2020 ಯಾಂಟಿ ಮೈಕ್ರೋಬಿಯಲ್ (Anti Microbial) ಲೇಪನ ತಂತ್ರಜ್ಞಾನ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಅನುಮೋದನೆ




Antimicrobial coating on surfaces

ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್ (JNCASR) ಅಭಿವೃದ್ಧಿಪಡಿಸಿದ ಯಾಂಟಿ ಮೈಕ್ರೋಬಿಯಲ್ (Anti Microbial) ಲೇಪನ ತಂತ್ರಜ್ಞಾನವನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇತ್ತೀಚೆಗೆ ಅನುಮೋದಿಸಿದೆ.
ಯಾಂಟಿ ಮೈಕ್ರೋಬಿಯಲ್ (Anti Microbial) ಲೇಪನ : ಆಂಟಿ ಮೈಕ್ರೊಬಿಯಲ್ ಲೇಪನವನ್ನು ಜವಳಿ, ಪ್ಲಾಸ್ಟಿಕ್ ಮುಂತಾದ ವಸ್ತುಗಳ ಮೇಲ್ಮೈಗಳಲ್ಲಿ ಲೇಪಿಸಬಹುದಾಗಿದೆ ಇದರಿಂದ ಸೂಕ್ಷ್ಮಜೀವಿಗಳನ್ನು ನಿಯಂತ್ರಿಸಬಹುದು ಮತ್ತು ಅವುಗಳು ಸಂಪರ್ಕಕ್ಕೆ ಬಂದಾಗ ಅವುಗಳನ್ನು ಕೊಲ್ಲುತ್ತದೆ.

# Current affairs of April 2020 from KPSC Vaani

09 04 2020 ಸಮಾಧಾನ್ : ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ ಆರಂಭಿಸಲಾದ ನೂತನಚಾಲೆಂಜ್




ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ದೇಶದಲ್ಲಿ COVID 19 ಸೋಂಕಿನ ವಿರುದ್ಧ ಹೋರಾಡಲು ಮತ್ತು ಅದನ್ನು ಹತ್ತಿಕ್ಕುವ ಸಲುವಾಗಿ "ಸಮಾಧಾನ್" ಎಂಬ ಸವಾಲನ್ನು ಆರಂಭಿಸಿದೆ. ಈ ಮೆಗಾ ಆನ್‌ಲೈನ್ ಸವಾಲನ್ನು ಫೋರ್ಜ್(Forge) ಮತ್ತು ಇನ್ನೋವೇಶನ್ ಕ್ಯೂರಿಸ್ (InnovationCuris)ಜೊತೆಗೆಮಾನವಸಂಪನ್ಮೂಲಅಭಿವೃದ್ಧಿಸಚಿವಾಲಯದನವೀನಕೋಶ ಮತ್ತು AITCE(ಅಖಿಲಭಾರತತಾಂತ್ರಿಕಶಿಕ್ಷಣಮಂಡಳಿ)ಪ್ರಾರಂಭಿಸಿದೆ.
*"ಸಮಾಧನ್"ಎಂಬಸವಾಲು ವಿದ್ಯಾರ್ಥಿಗಳಿಗೆ ನೂತನ ಆವಿಸ್ಕಾರಗಳನ್ನು ಮಾಡಲು ಮತ್ತು ಹೊಸ ಪ್ರಯೋಗಗಳ ಪ್ರೇರೇಪಿಸುವ ಉದ್ದೇಶ ಹೊಂದಿದ್ದು,COVID 19ರವಿರುದ್ಧಹೋರಾಡಲುಸಹಾಯಮಾಡುವಪರಿಹಾರಗಳೊಂದಿಗೆ ಬರಲಿದೆ. ಈ ಸವಾಲಿನಡಿಯಲ್ಲಿ ಆಯ್ದ ಪ್ರಯೋಗ ಮತ್ತು ಆವಿಸ್ಕಾರಗಳನ್ನು ಸರ್ಕಾರಿ ಆಸ್ಪತ್ರೆಗಳು,ಆರೋಗ್ಯಸೇವೆಮತ್ತುಇತರಸೇವೆಗಳಲ್ಲಿಜಾರಿಗೆತರಲಾಗುವುದು

09 04 2020 COVID 19 ನಿಯಂತ್ರಣಕ್ಕಾಗಿ ರಾಜ್ಯಗಳಿಗೆ ತುರ್ತು ಪ್ಯಾಕೇಜ್ ಬಿಡುಗಡೆಗೆಕೇಂದ್ರಸರಕಾರಒಪ್ಪಿಗೆ



ನವದೆಹಲಿ : ಭಾರತದಲ್ಲಿ ಹೆಚ್ಚುತ್ತಿರುವ ಕರೋನ ವೈರಸ್ ಶಂಕಿತರ ಪ್ರಕರಣಗಳನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ರಾಜ್ಯಗಳಿಗೆ 15,000 ಕೋಟಿ ರೂ.ಗಳನ್ನು ತುರ್ತು ಪ್ಯಾಕೆಜ್ ಹಣವನ್ನು ಬಿಡುಗಡೆ ಮಾಡಿದೆ. ಇದರ ನಡುವೆಯೇ ಒಡಿಶಾ ಸರ್ಕಾರ ರಾಜ್ಯದಲ್ಲಿ ಬೀಗ ಹಾಕುವಿಕೆಯನ್ನು(Seal Lock) ಏಪ್ರಿಲ್ 30ರವರೆಗೆ ವಿಸ್ತರಿಸಿದೆ.

# Current affairs of April 2020 from KPSC Vaani

09 04 2020 COVID 19 ಸೋಂಕು ಪ್ರಕರಣಗಳ ನಿರ್ವಹಣೆಗಾಗಿ ಮೂರು ರೀತಿಯ ಆರೋಗ್ಯಸೌಲಭ್ಯ



ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 2020ರ ಏಪ್ರಿಲ್ 8ರಂದು ದೇಶದಲ್ಲಿ ವ್ಯಪಿಸಿರುವ COVID 19 ಸೋಂಕಿತ ಪ್ರಕರಣಗಳ ಚಿಕಿತ್ಸೆಗಾಗಿ ಇರುವ ಆಸ್ಪತ್ರೆಗಳು ಮತ್ತು ಆರೋಗ್ಯ ಸೌಲಭ್ಯಗಳನ್ನು ವಿವಿಧ ವರ್ಗಗಳಲ್ಲಿ ವರ್ಗೀಕರಿಸಲಾಗಿದೆ. ಕೋರೋಣ ಸೋಂಕಿತ ಪ್ರಕರಣಗಳನ್ನು ದೇಶದಲ್ಲಿ ಮೂರು ವಿಧದ COVID 19 ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕಾಗಿದೆ ಎಂದು ತಿಳಿಸಿದೆ ಮತ್ತು ಅವುಗಳ ಪಟ್ಟಿ ಈ ಕೆಳಗಿನಂತಿದೆ .

*COVIDಆರೈಕೆ ಕೇಂದ್ರ

*ಸಮರ್ಪಿತ COVIDಆರೋಗ್ಯ ಕೇಂದ್ರ

*ಸಮರ್ಪಿತ COVIDಆಸ್ಪತ್ರೆ

10 04 2020 ಸ್ಮಾರ್ಟ್ ಸಿಟಿ ಮಿಷನ್: ಸಾರ್ವಜನಿಕ ಸ್ಥಳಗಳ ಸ್ವಚ್ಛತೆಗೆ ವಿನೂತನಕ್ರಮಗಳು




ಸ್ಮಾರ್ಟ್ ಸಿಟಿ ಮಿಷನ್ ಯೋಜನೆ ಅಡಿಯಲ್ಲಿ ನಗರಗಳನ್ನು ಸೋಂಕು ಮುಕ್ತಗೊಳಿಸಲು ಕೇಂದ್ರ ಸರ್ಕಾರ ಬೃಹತ್ ಕಾರ್ಯಕ್ರಮವನ್ನು ಯೋಜಿಸಿದೆ. ಈ ಕಾರ್ಯಕ್ರಮದಡಿಯಲ್ಲಿ, ಸ್ಮಾರ್ಟ್ ಸಿಟಿ ಯೋಜನೆಯ ನಗರಗಲ್ಲಿ ಸಾರ್ವಜನಿಕ ಸ್ಥಳಗಳಾದ ಮಾರುಕಟ್ಟೆಗಳು, ಬೀದಿಗಳು, ಉದ್ಯಾನವನಗಳು, ಆಟದ ಮೈದಾನಗಳು ಮತ್ತು ಶಾಪಿಂಗ್ ಮಾಲ್ ಗಳನ್ನು ಸೋಂಕು ಮುಕ್ತಗೊಳಿಸಲು ಕ್ರಮಕೈಗೊಳ್ಳಲಾಗುವದು.

* ಈ ನೂತನ ಕಾರ್ಯಕ್ರಮದಡಿಯಲ್ಲಿ ಕೋವಿಡ್ 19 ವೈರಸ್ ನಿಯಂತ್ರಿಸಲು ಸಾರ್ವಜನಿಕ ಸ್ಥಳಗಳಲ್ಲಿ ರಾಸಾಯನಿಕ ಸಿಂಪಡಿಸಲಾಗುವದು ಈ ಮೂಲಕ ಸೋಂಕುಗಳನ್ನು ಸುಲಭವಾಗಿ ನಿಷ್ಕ್ರಿಯಗೊಳಿಸಬಹುದು.

* ಬೀದಿಗಳನ್ನು ಸ್ವಚ್ ಗೊಳಿಸಲು ಅಗ್ನಿಶಾಮಕ ಮತ್ತು ವಾಟರ್ ವಾಶ್ ಪಂಪ್‌ಗಳನ್ನು ಬಳಸಲಾಗುತ್ತಿದೆ.

* ಕೆಲವು ಸ್ಮಾರ್ಟ್ ನಗರಗಳು ಸೋಡಿಯಂ ಹೈಪೋಕ್ಲೋರೈಟ್ ಬಳಸಿ ಸಾರ್ವಜನಿಕ ಸ್ಥಳಗಳ ಸ್ವಚ್ಛಗೊಳಿಸುತ್ತಿವೆ.

* ಇನ್ನು ಕೆಲವು ಸ್ಮಾರ್ಟ್ ಸಿಟಿಗಳಲ್ಲಿ ಸೋಂಕು ತಡೆಯಲು ಮಾನವ ಸುರಂಗಗಳನ್ನು ರಚಿಸಲಾಗಿದೆ. ಜನರು ಈ ಸುರಂಗಗಳನ್ನು ಪ್ರವೇಶಿಸಿದಾಗ ಸೋಂಕು ರಹಿತವಾಗುತ್ತಾರೆ.

* ಬೆಂಗಳೂರು, ಚೆನ್ನೈ, ಮತ್ತು ರಾಯ್‌ಪುರಗಳಲ್ಲಿ ಸಾರ್ವಜನಿಕ ಸ್ಥಳಗಳನ್ನು ಸೋಂಕುರಹಿತಗೊಳಿಸಲು ಡ್ರೋನ್ ತಂತ್ರಜ್ಞಾನವನ್ನು

# Current affairs of April 2020 from KPSC Vaani

## 10 04 2020 ಏಪ್ರಿಲ್ 9: CRPF ಶೌರ್ಯ ದಿನ



ಪ್ರತಿ ವರ್ಷ, ದಿನಾಂಕ ಏಪ್ರಿಲ್ 9 ರಂದು ಭಾರತದಾದ್ಯಂತ "CRPF ಶೌರ್ಯ ದಿವಸ್" ಎಂದು ಆಚರಿಸಲಾಗುತ್ತದೆ.*ಏಪ್ರಿಲ್9, 1965ರಂದುCRPFಒಂದುಸಣ್ಣತಂಡವುಪಾಕಿಸ್ತಾನದವಿರುದ್ಧರನ್ ಆಫ್ ಕಚ್ ನಲ್ಲಿ 34 ಪಾಕಿಸ್ತಾನಿ ಸೈನಿಕರನ್ನು ಹೊರಹಾಕಿತು. ಇದೆ ಸಂದರ್ಭದಲ್ಲಿ 06 ಸಿಆರ್‌ಪಿಎಫ್ ಪುರುಷ ಯೋಧರು ಪ್ರಾಣ ಕಳೆದುಕೊಂಡರು ಈ ಧೈರ್ಯಶಾಲಿ ವೀರಯೋಧರಿಗೆ ಗೌರವ ಸಲ್ಲಿಸಲು ಪ್ರತಿವರ್ಷ "CRPF ಶೌರ್ಯ ದಿನ"ವನ್ನು ಆಚರಿಸಲಾಗುತ್ತದೆ.

## 10 04 2020 COVID 19ವಿರುದ್ಧಹೋರಾಡಲುಸ್ವಚ್ಛತಾಆಯಪ್'ನ ನೂತನಆವೃತ್ತಿ ಆರಂಭ



ಕೇಂದ್ರಸರ್ಕಾರದವಸತಿಮತ್ತುನಗರಾಭಿವೃದ್ಧಿಸಚಿವಾಲಯವುದಿನಾಂಕಏಪ್ರಿಲ್9,2020ರಂದು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ವೀಡಿಯೊ ಕಾನ್ಫರೆನ್ಸ್ ನಡೆಸಿ ಸ್ವಚ್ಛತಾ ಆಯಪ್‌ನಪರಿಸ್ಕೃತಆವೃತ್ತಿಯನ್ನುಬಿಡುಗಡೆಗೊಳಿಸಿತು.ನೂತನಆವೃತ್ತಿ: *ಭಾರತದಾದ್ಯಂತ1.7 ಕೋಟಿಗಿಂತ ಅಧಿಕ ನಗರ ಬಳಕೆದಾರರನ್ನು ಒಳಗೊಂಡಿದೆ.
* ಪರಿಷ್ಕೃತ ಅಪ್ಲಿಕೇಶನ್ 9 ಹೆಚ್ಚುವರಿ ವಿಭಾಗಗಳನ್ನು ಒಳಗೊಂಡಿದೆ: COVID 19ಸಮಯದಲ್ಲಿ ನೈರ್ಮಲ್ಯಕ್ಕಾಗಿ ವಿನಂತಿ COVID 19ಸಮಯದಲ್ಲಿQuarantine ಉಲ್ಲಂಘಿಸುವುದು COVID 19 ಸಮಯದಲ್ಲಿ ಲಾಕ್ ಡೌನ್ ಉಲ್ಲಂಘನೆ COVID 19ರಶಂಕಿತಪ್ರಕರಣವನ್ನುವರದಿಮಾಡುವದು COVID 19 ಸಮಯದಲ್ಲಿ ಆಹಾರವನ್ನುವಿನಂತಿ COVID 19ಸಮಯದಲ್ಲಿಆಶ್ರಯಕ್ಕಾಗಿವಿನಂತಿ COVID 19 ಸಮಯದಲ್ಲಿಔಷಧಿಯನ್ನುವಿನಂತಿಸಿ COVID 19 ರೋಗಿಗಳ ಸಾರಿಗೆಗೆ ಸಹಾಯಕ್ಕಾಗಿ ವಿನಂತಿ Quarantineಪ್ರದೇಶದಿಂದತ್ಯಾಜ್ಯಎತ್ತಿಕೊಳ್ಳುವಿಕೆಗಾಗಿವಿನಂತಿ

# Current affairs of April 2020 from KPSC Vaani

10 04 2020 ರಾಜ್ಯಜಿಲ್ಲಾಉಸ್ತುವಾರಿಸಚಿವರಪಟ್ಟಿರಿಲೀಸ್



ಬೆಂಗಳೂರು : ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ರಾಜ್ಯದ 30 ಜಿಲ್ಲೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಿಸಿ ಅಧಿಕೃತ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಬದಲಾವಣೆಗೊಂಡು ನೂತನವಾಗಿ ನೀಡಲಾಗಿರುವ ಜಿಲ್ಲಾ ಉಸ್ತುವಾರಿ ಸಚಿವರ ಪಟ್ಟಿ ಈ ಕೆಳಗಿನಂತೆ ಇದೆ.

ಜಿಲ್ಲಾ ಉಸ್ತುವಾರಿ ಸಚಿವರಪಟ್ಟಿ:

| | |
|---|---|
| ಬೆಂಗಳೂರುನಗರ | ಮುಖ್ಯಮಂತ್ರಿ ಬಿಎಸ್ಯಡಿಯೂರಪ್ಪ |
| ರಾಮನಗರ | ಡಿಸಿಎಂ ಡಾ.ಸಿಎನ್ ಅಶ್ವಥ್ನಾರಾಯಣ |
| ರಾಯಚೂರು | ಡಿಸಿಎಂಲಕ್ಷ್ಮಣ್ಸವದಿ |
| ಬಾಗಲಕೋಟೆಮತ್ತುಕಲಬುರ್ಗಿ | ಡಿಸಿಎಂ ಗೋವಿಂದ ಎಂಕಾರಜೋಳ |
| ಶಿವಮೊಗ್ಗ | ಸಚಿವ ಕೆ ಎಸ್ ಈಶ್ವರಪ್ಪ |
| ಬೆಂಗಳೂರು ಗ್ರಾಮಾಂತರ | ಸಚಿವಆರ್ಅಶೋಕ್ |
| ಬೆಳಗಾವಿಮತ್ತುಧಾರವಾಡ | ಸಚಿವಜಗದೀಶ್ಶೆಟ್ಟರ್ |
| ಚಿತ್ರದುರ್ಗ | ಸಚಿವ ಬಿ ಶ್ರೀರಾಮುಲು |
| ಚಾಮರಾಜನಗರ | ಸಚಿವ ಎಸ್ ಸುರೇಶ್ ಕುಮಾರ್ |
| ಕೊಡಗು | ವಿ ಸೋಮಣ್ಣ |
| ಚಿಕ್ಕಮಗಳೂರು | ಸಚಿವಸಿ.ಟಿ.ರವಿ |
| ಹಾವೇರಿಮತ್ತುಉಡುಪಿ | ಸಚಿವ ಬಸವರಾಜ್ ಬೊಮ್ಮಾಯಿ |
| ದಕ್ಷಿಣ ಕನ್ನಡ | ಕೋಟಾ ಶ್ರೀನಿವಾಸ ಪೂಜಾರಿ |
| ತುಮಕೂರುಮತ್ತು ಹಾಸನ | ಸಚಿವ ಜೆ ಸಿ ಮಾಧುಸ್ವಾಮಿ |
| ಗದಗ | ಸಚಿವ ಸಿಸಿ ಪಾಟೀಲ್ |
| ಕೋಲಾರ | ಸಚಿವಹೆಚ್ನಾಗೇಶ್ |
| ಬೀದರ್ಮತ್ತುಯಾದಗಿರಿ | ಸಚಿವ ಪ್ರಭು ಚೌವ್ಹಾಣ |
| ವಿಜಯಪುರ | ಸಚಿವೆ ಶಶಿಕಲಾ ಜೊಲ್ಲೆ |
| ಉತ್ತರ ಕನ್ನಡ | ಸಚಿವ ಶಿವರಾಂ ಹೆಬ್ಬಾರ್ |
| ಮೈಸೂರು | ಸಚಿವ ಎಸ್ ಟಿ ಸೋಮಶೇಖರ್ |
| ಚಿಕ್ಕಬಳ್ಳಾಪುರ | ಸಚಿವಡಾ.ಕೆ.ಸುಧಾಕರ್ |
| ಮಂಡ್ಯ | ಸಚಿವ ಕೆಸಿ ನಾರಾಯಣ ಗೌಡ |
| ಬಳ್ಳಾರಿ | ಸಚಿವ ಆನಂದ್ ಸಿಂಗ್ |
| ದಾವಣಗೆರೆ | ಸಚಿವಬಿಎಬಸವರಾಜು |
| ಕೊಪ್ಪಳ | ಸಚಿವಬಿಸಿಪಾಟೀಲ್ |

# Current affairs of April 2020 from KPSC Vaani

10 04 2020 ಫೋರ್ಬ್ಸ್ ಪಟ್ಟಿಯಲ್ಲಿ ಸ್ಥಾನಪಡೆದ ಮುಖೇಶ ಅಂಬಾನಿ, ರಾಧಾಕೃಷ್ಣದಮನಿ




ನವದೆಹಲಿ: ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಖೇಶ್ ಅಂಬಾನಿ ಹಾಗೂ ಅವೆನ್ಯೂ ಸೂಪರ್ ಮಾರ್ಟ್ಸ್ ಸಂಸ್ಥಾಪಕ ರಾಧಾಕೃಷ್ಣ ದಮನಿ (ಡಿ ಮಾರ್ಟ್ ಸ್ಟೋರ್‌ಗಳನ್ನು ನಡೆಸುವ) ಈ ಇಬ್ಬರು ಭಾರತೀಯ ಉದ್ಯಮಿಗಳು ಫೋರ್ಬ್ಸ್ ನ ಜಾಗತಿಕ ಬಿಲೇನಿಯರ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

* ಈ ಪಟ್ಟಿಯಲ್ಲಿ ಮುಕೇಶ ಅಂಬಾನಿ 17 ನೇ ಸ್ಥಾನ ಮತ್ತು ರಾಧಾಕೃಷ್ಣ ದಮನಿ 65ನೇ ರ್‍ಯಾಂಕ್ ಪಡೆದಿದ್ದಾರೆ.

# Current affairs of April 2020 from KPSC Vaani

10 04 2020 Hydroxychloroquine ಔಷಧಿಯನ್ನು 25 ದೇಶಗಳಿಗೆ ರಫ್ತುಮಾಡಲುಭಾರತಸಮ್ಮತಿ




ನವದೆಹಲಿ: ಮಲೇರಿಯಾ ರೋಗಕ್ಕೆ ಬಳಸುವ Hydroxychloroquine ಔಷಧಿ ಕರೋನ ವೈರಸ್ ಗೆ ಸೋಂಕಿತರರಿಗೆ ಚಿಕಿತ್ಸೆ ನೀಡಲು ಉತ್ತಮವಾದುದರಿಂದ ವಿವಿಧ 30 ದೇಶಗಳಿಂದ ಈ ಔಷಧಿಗಾಗಿ ಬೇಡಿಕೆ ಬಂದಿದ್ದರ ಹಿನ್ನಲೆ, ಹೈಡ್ರಾಕ್ಸಿಕ್ಲೋರೋಕ್ವಿನ್ ಕೇಳುವ 25 ದೇಶಗಳ ಮನವಿಯನ್ನು ಭಾರತ ಅಂಗೀಕರಿಸಿ ಔಷದಿ ರಫ್ತು ಮಾಡಲು ಅನುಮೋದನೆ ನೀಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

* ಭಾರತದಲ್ಲಿರುವ ಒಟ್ಟು ಸಂಗ್ರಹವನ್ನು ಪರಿಶೀಲಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.
* US ಸೇರಿದಂತೆ ಒಟ್ಟು 30 ದೇಶಗಳು ಈ ಔಷಧವನ್ನು ಗೇಮ್ ಚೇಂಜರ್ ಎಂದು ಕರೆದಿವೆ.
* US ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಬ್ರೆಜಿಲಿನ್ ಅಧ್ಯಕ್ಷ ಜೈರ್ ಎಂ ಬೋಲ್ಸನಾರೊ ಅವರು ವಿನಂತಿಗಳನ್ನು ಅಂಗೀಕರಿಸಿದ್ದಕ್ಕಾಗಿ ಭಾರತಕ್ಕೆ ಧನ್ಯವಾದಅರ್ಪಿಸಿದ್ದಾರೆ.

10 04 2020 ಬಡವರಆಹಾರಒದಗಿಸಲುಸರ್ಕಾರದಿಂದದಾಸೋಹ 2020ಆಯಪ್




ಬೆಂಗಳೂರು: ಜಗತ್ತಿನಾದ್ಯಂತ ವ್ಯಾಪಿಸಿರುವ ಕೊರೋನಾ ವೈರಸ್ ಭೀತಿಯಿಂದಾಗಿ ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಲಾಕ್'ಡೌನ್ ನಿಂದಾಗಿ ಹಲವಾರು ಕೂಲಿ ಕಾರ್ಮಿಕರು ಸೇರಿ ಬಡವರಮೇಲೆ ತೀವ್ರ ಪರಿಣಾಮ ಬೀರಿದ್ದು, ಇದನ್ನರಿತ ರಾಜ್ಯ ಸರ್ಕಾರವು ಬಡವರ ಹಸಿವು ನೀಗಿಸುವ ಸಲುವಾಗಿ

"ದಾಸೋಹ 2020" ಎಂಬ ಹೊಸ ಆಯಪ್ ವೊಂದನ್ನು ಬಿಡುಗಡೆಗೊಳಿಸಿದೆ. ಸರ್ಕಾರ ಬಿಡುಗಡೆಗೊಳಿಸಿರುವ ಈ ಆಯಪ್ swiggy ಹಾಗೂ Zomatoರೀತಿ ಕಾರ್ಯ ನಿರ್ವಹಿಸುತ್ತದೆ. ಈ ಆಯಪ್ ಗಳ ಮೂಲಕ ಆಹಾರಕ್ಕಾಗಿ ಮನವಿ ಮಾಡುವ ಬಡವರಿಗೆ, ಸ್ವಯಂಸೇವಕರು ಆಹಾರ ಹಾಗೂ ಪಡಿತರಗಳನ್ನು ವಿತರಿಸಲಿದ್ದಾರೆ.

# Current affairs of April 2020 from KPSC Vaani

## 11 04 2020 ಭಾರತಸರ್ಕಾರದ“ಕೇಂದ್ರಭಂಡಾರ್”ದಿಂದತಯಾರಿಸಲಾದ ಎಸೆನ್ಷಿಯಲ್ ಕಿಟ್‌ಗಳವಿತರಣೆ

ಕೇಂದ್ರ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಸಚಿವಾಲಯವು ಅಗತ್ಯವಿರುವ BPL ಕುಟುಂಬಗಳಿಗೆ ಅಗತ್ಯ ಕಿಟ್‌ಗಳನ್ನು ತಯಾರಿಸಿ ವಿತರಿಸಿತು. ಈ ಕಿಟ್‌ಗಳನ್ನು "ಕೇಂದ್ರೀಯ ಭಂಡಾರ್" ತಯಾರಿಸಿದೆ.

* ಎಸೆನ್ಷಿಯಲ್ ಕಿಟ್ : ಎಸೆನ್ಷಿಯಲ್ ಕಿಟ್‌ನಲ್ಲಿ 3 ಕೆಜಿ ಅಕ್ಕಿ, 3 ಕೆಜಿ ಗೋಧಿ, 2 ಕೆಜಿ ಬೇಳೆ, 1 ಲೀಟರ್ ಅಡುಗೆ ಎಣ್ಣೆ, ಉಪ್ಪು, ಸ್ನಾನದ ಸೋಪ್, ಬಿಸ್ಕತ್ತು ಮತ್ತು ಡಿಟರ್ಜೆಂಟ್ ಸೋಪ್ ಬಾರ್‌ಗಳನ್ನು ಒಳಗೊಂಡಿದೆ.

* ಕೇಂದ್ರ ಭಂಡಾರ್ : ಕೇಂದ್ರೀಯ ಭಂಡಾರವು 1963 ರಲ್ಲಿ ಸ್ಥಾಪನೆಯಾಗಿದ್ದು, ಈ ಸಂಸ್ಥೆಯು ಕೇಂದ್ರ ಸರ್ಕಾರಿ ನೌಕರರ ಗ್ರಾಹಕರ ಸಹಕಾರಿ ಸಂಘವಾಗಿದೆ.

## 11 04 2020 FCI ಯಿಂದ ಸರ್ಕಾರೇತರ ಸಂಸ್ಥೆಗಳಿಗೆ ಆಹಾರ ಧಾನ್ಯಗಳನ್ನು ನೇರವಾಗಿ ಖರೀದಿಸಲುಅನುಮತಿ

Food Corporation of India

COVID 19 ವೈರಸ್ ನಿಯಂತ್ರಣಕ್ಕಾಗಿ ದೇಶದಲ್ಲಿ ಹೇರಿರುವ ಲಾಕ್ ಡೌನ್ ಸಮಯದಲ್ಲಿ ಅಗತ್ಯವಿರುವವರಿಗೆ ಆಹಾರ ಪೂರೈಕೆಯಲ್ಲಿ ತೊಡಗಿರುವ ಸರ್ಕಾರೇತರ ಸಂಸ್ಥೆಗಳಿಗೆ FCI (ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ) ಯಿಂದ ನೇರವಾಗಿ ಆಹಾರ ಧಾನ್ಯಗಳನ್ನು ಪಡೆಯಲು ಭಾರತ ಸರ್ಕಾರ ಅನುಮತಿ ನೀಡಿದೆ.

# Current affairs of April 2020 from KPSC Vaani



# Current affairs of April 2020 from KPSC Vaani

## 11 04 2020 ಕೊರೋನವಿರುದ್ಧಹೋರಾಟಕ್ಕೆಭಾರತಕ್ಕೆಎಡಿಬಿಯಿಂದ 16,716ಕೋಟಿ ರೂ. ನೆರವು




ನವದೆಹಲಿ : ದೇಶದಲ್ಲಿ ಕೊರೋನ ವೈರಸ್ ವಿರುದ್ಧ ಹೋರಾಡಲು ಹಾಗೂ ಆರ್ಥಿಕ ದುಷ್ಪರಿಣಾಮವನ್ನು ಎದುರಿಸಲು, ಭಾರತಕ್ಕೆ ಏಶಿಯನ್ ಡೆವಲಪ್ಮೆಂಟ್ ಬ್ಯಾಂಕ್ ನಿಂದ 2.2 ಶತಕೋಟಿ ಡಾಲರ್ (ಸುಮಾರು 16,716 ಕೋಟಿ ರೂ.)ಗಳ ನೆರವನ್ನು ನೀಡಿದೆ. ಏಶ್ಯ ಅಭಿವೃದ್ಧಿ ಬ್ಯಾಂಕ್ (ADB) ನ ಅಧ್ಯಕ್ಷರಾದ ಮಸಾಟಾಗು ಅಸಾಕಾವಾ ಅವರು ದಿನಾಂಕ 10 ಏಪ್ರಿಲ್ 2020 ರಂದು ಭಾರತದ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕರೆ ಮಾಡಿ ಭಾರತಕ್ಕೆ ಈ ಬೃಹತ್ ನೆರವನ್ನು ನೀಡುವುದಾಗಿ ತಿಳಿಸಿದ್ದಾರೆ.

## 11 04 2020 ದೆಹಲಿರಾಜ್ಯಸರ್ಕಾರದಿಂದ“ಆಪರೇಷನ್ಶೀಲ್ಡ್”ಆರಂಭ



ದಿನಾಂಕ ಏಪ್ರಿಲ್ 9, 2020 ರಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ರಾಷ್ಟ್ರೀಯ ರಾಜಧಾನಿ ದೆಹಲಿಯಾ ವಿವಿಧ ಪ್ರದೇಶಗಳಲ್ಲಿ "ಆಪರೇಷನ್ ಶೀಲ್ಡ್" ಘೋಷಿಸಿದ್ದಾರೆ. ಆಪರೇಷನ್ ಶೀಲ್ಡ್ ಎಂದರೆ ಸೀಲ್ ಹಾಕುವದು, ಹೋಂ ಕ್ವಾರಂಟೈನ್, ಸುರಕ್ಷಿತ ಅಂತರ ಮತ್ತು ಸೋಂಕಿತರ ಪತ್ತೆಹಚ್ಚುವಿಕೆ, ಅಗತ್ಯತೆಗಳ ಪೂರೈಕೆ, ಸ್ಥಳೀಯ ನೈರ್ಮಲ್ಯ ಮತ್ತುಮನೆ ಮನೆಗೆತಪಾಸಣೆ.

*.ಈಆಪರೇಷನ್ಶೀಲ್ಡ್ಕಾರ್ಯಾಚರಣೆಯನ್ನುದೆಹಲಿಯ21 ವಲಯಗಳಲ್ಲಿಜಾರಿಗೆತರಲಾಗುವುದು.

*ಈಎಲ್ಲಾ21ವಲಯಗಳಪ್ರದೇಶಅಥವಾಸುತ್ತಮುತ್ತಲಿನ ಪ್ರದೇಶಗಳನ್ನು ಮೊಹರುಮಾಡಬೇಕು

# Current affairs of April 2020 from KPSC Vaani

11 04 2020 KSRTCಯಿಂದಮೊಬೈಲ್‌ಸ್ಯಾನಿಟೈಸರ್‌ಬಸ್"ಸಾರಿಗೆ ಸಂಜೀವಿನಿ"ಗೆ ಚಾಲನೆ




ಬೆಂಗಳೂರು: ಕೋರೋಣ ವೈರಸ್ ನಿಯಂತ್ರಣಕ್ಕಾಗಿ ಸರ್ಕಾರದ ವಿವಿಧ ಇಲಾಖೆಗಳು ತಮ್ಮದೇ ಆದ ರೀತಿಯಲ್ಲಿ ಸೋಂಕು ನಿಯಂತ್ರಣಕ್ಕಾಗಿ ವಿವಿಧ ಕಾರ್ಯಕ್ರಮವನ್ನು ರೂಪಿಸುತ್ತಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸಾರಿಗೆ ಬಸ್ ಅನ್ನೇ ಮೊಬೈಲ್ ಸ್ಯಾನಿಟೈಸರ್ ಆಗಿ ಪರಿವರ್ತನೆ ಮಾಡುವ ಮೂಲಕ "ಸಾರಿಗೆ ಸಂಜೀವಿನಿ" ಎಂಬ ಕಾರ್ಯಕ್ರಮ ಆರಂಭಿಸಿದೆ.

* ಸುಮಾರು ಹತ್ತು ವರ್ಷದ ಹಳೆಯ ಬಸ್ ಅನ್ನು ಸ್ಯಾನಿಟೈಸರ್ ಬಸ್ ಆಗಿ ಪರಿವರ್ತಿಸಲಾಗಿದೆ.
* ಒಂದು ಸಾರಿಗೆ ಸಂಜೀವಿನಿ ಬಸ್ ತಯಾರಿಸಲು 20 ಸಾವಿರ ವೆಚ್ಚ
* ಸಾರ್ವಜನಿಕರ ಅನುಕೂಲಕ್ಕಾಗಿ ಆರಂಭದಲ್ಲಿ ಬೆಂಗಳೂರಿನಲ್ಲಿ ಸ್ಯಾನಿಟೈಸರ್ ಬಸ್ ಸಂಚರಿಸಲಿವೆ.
* ಬಸ್ ಮುಂಭಾಗ ಹತ್ತಿ ಹಿಂಭಾಗ ಇಳಿದರೆ ಸಂಪೂರ್ಣವಾಗಿ ದೇಹಕ್ಕೆ ಸೋಂಕು ನಿರೋಧಕ ಸಿಂಪಡಣೆ ಆಗಲಿದೆ.
* ಬೆಂಗಳೂರು ನಗರದಲ್ಲಿ ಪೊಲೀಸ್, ಮೆಡಿಕಲ್, ಪೌರ ಸಿಬ್ಬಂದಿಗಳ ಅನುಕೂಲಕ್ಕಾಗಿ ಈ ಬಸ್ ಸಂಚರಿಸಲಿದೆ

11 04 2020 G 20 ರಾಷ್ಟ್ರಗಳ ಇಂಧನ(ಎನರ್ಜಿ) ಸಚಿವರ ವಿಡಿಯೋ ಕಾನ್ಫರೆನ್ಸ್ ಸಮ್ಮೇಳನ




ಜಿ 20 ರಾಷ್ಟ್ರಗಳ ಇಂಧನ(ಎನರ್ಜಿ) ಮಂತ್ರಿಗಳು ಇತ್ತೀಚೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆನಡೆಸಿದ್ದು, ಸಭೆಯಲ್ಲಿ ಸ್ಥಿರ ಇಂಧನ ಮಾರುಕಟ್ಟೆ ವಾಸ್ತವತೆ ಬಗ್ಗೆ ಚರ್ಚಿಸಲಾಯಿತು. COVID 19 ಬಿಕ್ಕಟ್ಟಿನಿಂದಾಗಿ ಬೇಡಿಕೆ ಇಳಿಮುಖವಾಗಿದೆ ಕಡಿತದಿಂದ ಇಂಧನ ಮಾರುಕಟ್ಟೆಗಳು ಹೆಚ್ಚು ಪರಿಣಾಮ ಬೀರಿದೆ.

* ಈ ಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ಇಂಧನ ಸಚಿವ ಶ್ರೀ ಧರ್ಮೇಂದ್ರ ಪ್ರಧಾನ್ ಭಾಗಿಯಾಗಿದ್ದರು.
* ಭಾರತವು ನಿಗದಿಪಡಿಸಿದ 23 ಬಿಲಿಯನ್ USD ಪರಿಹಾರ ಪ್ಯಾಕೇಜ್ ಭಾಗವಾಗಿ, 80.3 ದಶಲಕ್ಷ ಬಡ ಕುಟುಂಬಗಳಿಗೆ ಉಚಿತ LPG ಸಿಲಿಂಡರ್ ಗಳನ್ನು ನೀಡಲಾಗುವದು.
* ಜಿ 20 ಇಂಧನ ಮಂತ್ರಿಗಳ ಸಭೆ ಕಾರ್ಯಪಡೆ ಸ್ಥಾಪಿಸಲು ಜಂಟಿ ಹೇಳಿಕೆಯನ್ನು ಅಳವಡಿಸಿಕೊಳ್ಳಲಿದೆ.

# Current affairs of April 2020 from KPSC Vaani

12 04 2020 ಕೇಂದ್ರದಿಂದ ಮೀನುಗಾರಿಕೆ ಮತ್ತು ಜಲಚರಕಾರ್ಯಾಚರಣೆಗೆ ಲಾಕ್‌ಡೌನ್‌ನಿಂದ ವಿನಾಯಿತಿ



ಈ ಮೊದಲು ಈ ಹಿಂದೆ ಕೃಷಿ ಚಟುವಟಿಕೆಗಳಿಗೆ ವಿನಾಯಿತಿ ನೀಡಿದ್ದ ಕೇಂದ್ರ ಗೃಹ ಸಚಿವಾಲಯವು ಇದೀಗ ಮೀನುಗಾರಿಕೆ ಮತ್ತು ಜಲಚರಗಳ ಸಾಕಾಣಿಕೆ ಉದ್ಯಮಗಳಿಗೆ ಲಾಕ್ ಡೌನ್‌ನಿಂದ ವಿನಾಯಿತಿ ನೀಡಲಾಗಿದೆ.

* ಕೊಯ್ಲು, ಪ್ಯಾಕೇಜಿಂಗ್, ಸಂಸ್ಕರಣೆ, ಮೊಟ್ಟೆಕೇಂದ್ರಗಳು, ವಾಣಿಜ್ಯ ಅಕ್ವೇರಿಯಾ, ಸೀಗಡಿ ಸೇರಿ ಮುಂತಾದ ಜಲಚರಪ್ರಾಣಿಗಳಿಗೆ ಸಂಬಂದಿಸಿದ ಕಾರ್ಯಾಚರಣೆಗಳನ್ನು ನಡೆಸಲು ಲಾಕ್ ಡೌನ್ ನಿಂದ ವಿನಾಯಿತಿ ನೀಡಲಾಗಿದೆ.

*ಆರ್ಥಿಕ ಸಮೀಕ್ಷೆ 2019 20ರಪ್ರಕಾರ, ಭಾರತೀಯ ಮೀನುಗಾರಿಕೆ ವಿಶ್ವದ ಮೂರನೇ ಮತ್ತು ಭಾರತೀಯ ಅಕ್ವಾಕಲ್ಚರ್ (aquaculcture) ವಿಶ್ವದ ಎರಡನೇ ಸ್ಥಾನದಲ್ಲಿದೆ.

* 2019 20ರಲ್ಲಿ ಭಾರತೀಯ ಮೀನುಗಾರಿಕೆ ಜಿಡಿಪಿಯ 1.07% ಕೊಡುಗೆ ನೀಡಿದೆ.

12 04 2020 TRIFED ವ್ಯಾನ್ ಧನ್ ಯೋಜನೆಯಡಿ ಮುಖವಾಡಗಳಿಗೆ ಮಾರ್ಕೆಟಿಂಗ್ ಬೆಂಬಲವನ್ನು ನೀಡುತ್ತದೆ




ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬುಡಕಟ್ಟು ಸಹಕಾರಿ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ (TRIFED)ವು ಈಗ ಸರ್ಕಾರೇತರ ಸಂಸ್ಥೆ(NGO) ಮತ್ತು ವ್ಯಾನ್ ಧನ್ ಯೋಜನೆಯ ಫಲಾನುಭವಿಗಳಿಗೆ ಕರಕುಶಲ ವಸ್ತುಗಳು, ಕೈಮಗ್ಗ ಮತ್ತು ನೈಸರ್ಗಿಕ ಉತ್ಪನ್ನಗಳಿಗೆ ಉತ್ಪಾದನೆ ಮತ್ತು ಮಾರುಕಟ್ಟೆ ಬೆಂಬಲವನ್ನು ಘೋಷಿಸಿದೆ. ಪ್ರಸ್ತುತ ವ್ಯಾನ್ ಧನ್ ಯೋಜನೆಯ ಫಲಾನುಭವಿಗಳು ತಮ್ಮ ತಮ್ಮ ಮನೆಗಳಲ್ಲಿ ಮುಖಗವಸುಗಳ ತಯಾರಿ ಆರಂಭಿಸಿದ್ದು ಇದರಿಂದ ಇದು ತಮಗೂ ಸಮುದಾಯದ ಸದಸ್ಯರಿಗೂ ಆರ್ಥಿಕವಾಗಿ ಅನುಕೂಲವಾಗಿದೆ.

# Current affairs of April 2020 from KPSC Vaani

12 04 2020 ಏಪ್ರಿಲ್12:ಮಾನವಬಾಹ್ಯಾಕಾಶಹಾರಾಟದ(Human Space Flight)ಅಂತರರಾಷ್ಟ್ರೀಯದಿನ



ಪ್ರತಿ ವರ್ಷ ದಿನಾಂಕ ಏಪ್ರಿಲ್ 12 ರಂದು ಅಂತರರಾಷ್ಟ್ರೀಯ ಮಾನವ ಬಾಹ್ಯಾಕಾಶ ಹಾರಾಟದ ದಿನವನ್ನಾಗಿ ಆಚರಿಸಲಾಗುತ್ತಿದೆ. 1961 ರಲ್ಲಿ ಯೂರಿ ಗಗಾರಿನ್ ಅವರು ಐತಿಹಾಸಿಕ ಬಾಹ್ಯಾಕಾಶ ಹಾರಾಟ ನಡೆಸಿದದುರ ವಾರ್ಷಿಕೋತ್ಸವದ ನೆನಪಿಗಾಗಿ ಪ್ರತಿ ವರ್ಷ ಮಾನವ ಬಾಹ್ಯಾಕಾಶ ಹಾರಾಟದ ದಿನವನ್ನಾಗಿ ಆಚರಿಸಲಾಗುತ್ತಿದೆ.

* 2011 ರ ಏಪ್ರಿಲ್ ನಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿ ತೆಗೆದು ಕೊಂಡ ನಿರ್ಣಯದ ಅನುಸಾರ ಪ್ರತಿ ವರ್ಷ ಏಪ್ರಿಲ್ 12 ರಂದು ಅಂತರರಾಷ್ಟ್ರೀಯ ಮಾನವ ಬಾಹ್ಯಾಕಾಶ ಹಾರಾಟದ ಆಚರಿಸಲಾಗುತ್ತಿದೆ.

12 04 2020 ಸ್ಮಾರ್ಟ್‌ಸ್ಟೆತಾಸ್ಕೋಪ್‌ಅಭಿವೃದ್ಧಿಪಡಿಸಿದಬಾಂಬೆಐಐಟಿ



ಮುಂಬೈ: ಬಾಂಬೆಯ ಭಾರತೀಯ ತಂತ್ರಜ್ಞಾನ ಸಂಸ್ಥೆಯ (IIT) ಯಾ ಸಂಶೋಧನಾ ತಂಡವೊಂದು ಸ್ಮಾರ್ಟ್ ಸ್ಟೆತಾಸ್ಕೋಪ್ ಅನ್ನು ಅಭಿವೃದ್ಧಿ ಪಡಿಸಿದ್ದಲ್ಲದೆ ಇದಕ್ಕೆ ಪೇಟೆಂಟ್ ಕೂಡ ಪಡೆದಿದೆ. ಈ ಸ್ಮಾರ್ಟ್ ಸ್ಟೆತಾಸ್ಕೋಪ್ ನ ವಿಶೇಷವೇನೆಂದರೆ ಇದನ್ನು ಎದೆ ಮೇಲೆ ಇರಿಸದೆ ದೂರದಿಂದಲೇ ಹೃದಯದ ಬಡಿತ ಪರಿಶೀಲಿಸಬಹುದಾಗಿದೆ. ಇದು ಕರೊನಾದಂಥ ಸೋಂಕು ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ವೈದ್ಯರಿಗೆ ರೋಗಿಯ ಬಳಿ ಹೋಗದೆ ದೂರದಿಂದಲೇ ಪರಿಶೀಲಿಸುವುದಕ್ಕೆ ಸಹಕಾರಿಯಾಗಲಿದೆ ಎಂದು ಬಾಂಬೆ ಐಐಟಿಯ ಸಂಶೋಧನಾ ತಂಡ ಹೇಳಿಕೊಂಡಿದೆ.

* ಈ ಸ್ಮಾರ್ಟ್ ಸ್ಟೆತಾಸ್ಕೋಪ್ ಟ್ಯೂಬ್ ಒಂದಕ್ಕೆ ಎರಡು ಇಯರ್‌ಪೀಸ್‌ಗಳನ್ನು ಅಳವಡಿ ಬ್ಲೂಟೂತ್ ಬಳಸಿ ವೈದ್ಯರು ದೂರದಿಂಲೇ ರೋಗಿಯ ಉಸಿರಾಟದ ಹಾಗು ಹೃದಯ ಬಡಿತದ ಶಬ್ದವನ್ನು ಕೇಳಿಸಿಕೊಳ್ಳಬಹುದಾಗಿದೆ.

# Current affairs of April 2020 from KPSC Vaani

12 04 2020 ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿ ಆರಂಭಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ ವೆಬ್‌ಪೋರ್ಟಲ್ ಆರಂಭ




ನವದೆಹಲಿ: ಭಾರತದಲ್ಲಿ ಜಾರಿಯಲ್ಲಿರುವ ಲಾಕ್‌ಡೌನ್‌ನಿಂದಾಗಿ ದೇಶದ ಎಲ್ಲ
ಶಾಲಾ ಕಾಲೇಜುಗಳನ್ನು ತಾತ್ಕಾಲಿಕವಾಗಿ ಬಂದ ಮಾಡಲಾಗಿದ್ದು ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ತೊಡಕಾಗಬಾರದೆಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಅಭ್ಯಾಸ ಪರಿಕರಗಳು (ಸ್ಟಡಿ ಮೆಟೀರಿಯಲ್) ಮತ್ತು ವೆಬ್ ಪೋರ್ಟಲ್‌ನ್ನು ಬಿಡುಗಡೆ ಮಾಡುತ್ತಿದೆ. E Learning (ಇ ಕಲಿಕೆ) ಮೂಲಕ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ ಮುಂದುವರೆಸಬಹುದಾಗಿದೆ.

12 04 2020 ಭಾರತಸೇನೆಯಮಿನಿಸರ್ಜಿಕಲ್‌ಸ್ಟ್ರೈಕ್‌ಗೆ15ಪಾಕ್ ಯೋಧರುಸೇರಿ 8ಉಗ್ರರಬಲಿ



ಶ್ರೀನಗರ:ಭಾರತಸೇನೆಯುಗಡಿನಿಯಂತ್ರಣರೇಖೆಯಖೇರನ್‌ಸೆಕ್ಟರ್‌ನದೂಧ್‌ನಿಯಾಲ್‌ಎಂಬ ಸ್ಥಳದಲ್ಲಿ ಉಗ್ರರು ಹಾಗೂ ಪಾಕ್ ನೆಲದಲ್ಲಿನ ಉಗ್ರ ಶಿಬಿರಗಳ ಮೇಲೆ ಎಪ್ರಿಲ್ 10ರಂದು ನಡೆಸಿದ ಪ್ರತೀಕಾರದಾಳಿಯಲ್ಲಿಒಟ್ಟು15ಪಾಕ್‌ಯೋಧರುಮತ್ತು8ಉಗ್ರಗಾಮಿಗಳುಹಾಗೂಇತರೇ 2 ವ್ಯಕ್ತಿಗಳುಮೃತಪಟ್ಟಿದ್ದಾರೆಎಂಬಮಾಹಿತಿಗುಪ್ತಚರಮಾಹಿತಿಮೂಲಗಳಿಂದತಿಳಿದುಬಂದಿದೆ.

# Current affairs of April 2020 from KPSC Vaani

13 04 2020 KVICಯಿಂದಎರಡುಪದರಗಳಮುಖಗವಸುಗಳ(Mask) ಅಭಿವೃದ್ಧಿ




ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು(KVIC) ಎರಡು ಪದರುಗಳನ್ನು ಹೊಂದಿದ ಖಾದಿ ಮುಖಗವಸುಗಳನ್ನು ಅಭಿವೃದ್ಧಿಪಡಿಸಿದೆ. ಪ್ರಸ್ತುತ ಈ ಮುಖಗವಸುಗಳನ್ನು ಬೇಡಿಕೆಗೆ ತಕ್ಕಂತೆ ಬಾರಿ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ. ಎರಡು ಪದರದ ಖಾದಿ ಮುಖವಾಡಗಳಿಗೆ ಬೇಡಿಕೆ ಹೆಚ್ಚುತ್ತಿದ್ದು ಇತ್ತೀಚೆಗೆ, ಜಮ್ಮು ಕಾಶ್ಮೀರ ಸರ್ಕಾರವೊಂದೇ 7.4 ಲಕ್ಷದಷ್ಟು ಬೇಡಿಕೆಯನ್ನು KVIC ಗೆ ಸಲ್ಲಿಸಿದೆ.

* ಈ ಮಾಸ್ಕುಗಳು 70% ತೇವಾಂಶವನ್ನು ಹೀರಿಕೊಳ್ಳುತ್ತವೆ ಮತ್ತು ಗಾಳಿಗೆ ಸುಲಭವಾದ ಮಾರ್ಗವನ್ನು ಒದಗಿಸುತ್ತದೆ.
* ಈ ಮಾಸ್ಕುಗಳನ್ನು ತಯಾರಿಸಲು ಬಳಸುವ ಬಟ್ಟೆಯು ಕೈಯಿಂದ ತಿರುಗಿಸಲ್ಪಟ್ಟಿದೆ
* ಈ ಮಾಸ್ಕುಗಳನ್ನು ತೊಳೆಯಬಹುದು, ಜೈವಿಕ ವಿಘಟನೀಯ ಮತ್ತು ಮರುಬಳಕೆ ಮಾಡಬಹುದಾಗಿದೆ.

13 04 2020 COVID 19 ಚಿಕಿತ್ಸೆಗಾಗಿ 586 ಮೀಸಲು ಆಸ್ಪತ್ರೆಗಳನ್ನು ಸ್ಥಾಪನೆ



ಭಾರತ ಸರ್ಕಾರವು ದೇಶದಲ್ಲಿ ವ್ಯಾಪಿಸಿರುವ ಕರೋನ ಸೋಂಕಿತರ ಚಿಕಿತ್ಸೆಗಾಗಿ ದೇಶಾದ್ಯಂತ ಸುಮಾರು 586 ಮೀಸಲು COVID 19 ಆಸ್ಪತ್ರೆಗಳನ್ನು ಸ್ಥಾಪಿಸಿದೆ. ಈ ಆಸ್ಪತ್ರೆಗಳು 1 ಲಕ್ಷಕ್ಕೂ ಹೆಚ್ಚು ಪ್ರತ್ಯೇಕ ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿವೆ.

* 20,000 ಕ್ಕೂ ಹೆಚ್ಚು ರೈಲ್ವೆ ಬೋಗಿಗಳನ್ನು ಆಸ್ಪತ್ರೆ ವಾರ್ಡ್‌ಗಳಾಗಿ ಪರಿವರ್ತಿಸಲಾಗಿದೆ.
* ಆಯುಷ್ಮಾನ್ ಭಾರತ್ ಯೋಜನೆಯಡಿ ಫಲಾನುಭವಿಗಳನ್ನು ಉಚಿತವಾಗಿ ಪರೀಕ್ಷಿಸಲಾಗುತ್ತಿದೆ.

# Current affairs of April 2020 from KPSC Vaani

13 04 2020 ಮಾನವ ಸಂಪನ್ಮೂಲ ಸಚಿವಾಲಯದಿಂದ “ಭಾರತ್ ಪಾದೇ ಆನ್‌ಲೈನ್ ಅಭಿಯಾನ” ಆರಂಭ




ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು “ಭಾರತ್ ಪಾಧೆ ಆನ್‌ಲೈನ್ ಅಭಿಯಾನ” (Bharat PadheOnline Campaign)ಎಂಬಒಂದುವಾರದಅಭಿಯಾನಆರಂಭಿಸಿದೆ.ಈಅಭಿಯಾನದಮೂಲಕ ಲಾಕ್ ಡೌನ್ ಸಮಯದಭಾರತದಲ್ಲಿ ಆನ್‌ಲೈನ್ ಶಿಕ್ಷಣವನ್ನು ಉತ್ತಮಪಡಿಸುವ ಗುರಿಯನ್ನು ಹೊಂದಿದೆ.

* ಡಿಜಿಟಲ್ ಶಿಕ್ಷಣವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಬರಬಹುದಾದ ಕುಂದು ಕೊರತೆಗಳನ್ನು ನೀಗಿಸಲು ದೇಶದ ಶೈಕ್ಷಣಿಕ ತಜ್ಞರನ್ನು ಅವರ ಜ್ಞಾನ ಮತ್ತು ಪರಿಹಾರಗಳನ್ನು ಹಂಚಿಕೊಳ್ಳಲು ವೇದಿಕೆ ಕಲ್ಪಿಸುವುದೇ ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

13 04 2020 ಮಾನವ ಸಂಪನ್ಮೂಲ ಸಚಿವಾಲಯದಿಂದ "YUKTI" ಡಿಜಿಟಲ್ ಪೋರ್ಟಲ್ ಆರಂಭ




ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯವು "YUKTI" ಪೋರ್ಟಲ್ ಅನ್ನು ಪ್ರಾರಂಭಿಸಿದೆ.

* ಶಿಕ್ಷಣ ಸಂಸ್ಥೆಗಳು ಮತ್ತು ಸಚಿವಾಲಯದ ನಡುವೆ ದ್ವಿಮುಖ ಸಂವಹನವಾಗಿ ಕಾರ್ಯನಿರ್ವಹಿಸುವುದು ಈ ಪೋರ್ಟಲ್‌ನ ಮುಖ್ಯ ಉದ್ದೇಶವಾಗಿದೆ.

# Current affairs of April 2020 from KPSC Vaani

13 04 2020 ಲಾಕ್‌ಡೌನ್:ಅಗತ್ಯವಸ್ತುಖರೀದಿಗೆದೇಶಾದ್ಯಂತ20ಲಕ್ಷ ಸುರಕ್ಷಾ ಸ್ಟೋರ್ ಆರಂಭ



ನವದೆಹಲಿ : ಕೊರೋನಾ ವೈರಸ್ ಸೋಂಕಿನ ವಿರುದ್ಧ ಹೋರಾಡಲು ದೇಶಾದ್ಯಂತ ವಿಧಿಸಿರುವ ಲಾಕ್ ಡೌನ್ ವಿಸ್ತರಿಸುವ ಬಗ್ಗೆ ಕೇಂದ್ರ ಸರ್ಕಾರ ಚಿಂತಿಸಿರುವ ಹಿನ್ನಲೆ, ಸಾರ್ವಜನಿಕರಿಗೆ ಅಗತ್ಯ ವಸ್ತು ಹಾಗೂ ಸೇವೆ ಒದಗಿಸಲು ದೇಶಾದ್ಯಂತ ಸುಮಾರು 20 ಲಕ್ಷ ಸುರಕ್ಷಾ ಸ್ಟೋರ್ ಗಳನ್ನು ಆರಂಭಿಸಲು ಚಿಂತಿಸಲಾಗಿದೆ.

* ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ದಿನಸಿ ಅಂಗಡಿಗಳು ಮತ್ತು ಇತರೆ ಅಗತ್ಯ ಸೇವೆಗಳನ್ನು ನೀಡುವ ಶಾಪ್ ಗಳನ್ನೇ ಸುರಕ್ಷಾ ಸ್ಟೋರ್ ಗಳಾಗಿ ಪರಿವರ್ತಿಸಲಾಗುವದು.
* ದೇಶಾದ್ಯಂತ 20 ಲಕ್ಷ ಅಂಗಡಿಗಳನ್ನು ಸುರಕ್ಷಾ ಸ್ಟೋರ್ ಗಳಾಗಿ ಮಾರ್ಪಡಿಸಲಾಗುವುದು.
* ಇಲ್ಲಿ ಕೊರೋನಾ ಸೋಂಕು ಹರಡದಂತೆ ಎಲ್ಲ ರೀತಿಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

13 04 2020 ಜಲಿಯನ್ ವಾಲಾಬಾಗ್ ಹತ್ಯಾಕಾಂಡ : 101 ವರ್ಷ



ಅಮೃತಸರ:ಭಾರತದಇತಿಹಾಸದಲ್ಲಿನಡೆದದುರಂತಗಳಲ್ಲಿಒಂದಾದಪಂಜಾಬನಅಮೃತಸರದಲ್ಲಿನಡೆದಭೀಕರ ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ನಡೆದು ಇಂದಿಗೆ ಅಂದರೆ ಏಪ್ರಿಲ್ 13 ಕ್ಕೆ 101 ವರ್ಷ. ಈ ಸಂದರ್ಭದಲ್ಲಿ ಮಡಿದ ಭಾರತೀಯರಿಗಾಗಿ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಸೇರಿ ವಿವಿಧ ಗಣ್ಯರುಹುತ್ಮಾತರಿಗೆಶ್ರದ್ಧಾಂಜಲಿಸಲ್ಲಿಸುವಮೂಲಕಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನವನ್ನು ಸ್ಮರಿಸಿಕೊಂಡಿದ್ದಾರೆ. ಜಲಿಯನ್ ವಾಲಾಬಾಗ್ ಹತ್ಯಾಕಾಂಡ : ಬ್ರಿಟಿಷ್ ಸೈನ್ಯದ ಕಮಾಂಡರ್ ಆಗಿದ್ದ ಜನರಲ್ ಡಯ್ಯರ್ ನು ಪಂಜಾಬನ ಅಮೃತಸರದಲ್ಲಿನ ಜಲಿಯನ್ ವಾಲಾಬಾಗ್ ಎಂಬ ಸ್ಥಳದಲ್ಲಿ ಸೇರಿದ್ದ ಸುಮಾರು ಹತ್ತು ಸಾವಿರದಷ್ಟು ಅಮಾಯಕ ಮತ್ತು ನಿಶ್ಯಸ್ತ್ರ ಭಾರತೀಯರ ಮೇಲೆ ಸುಮಾರು 1650 ಸುತ್ತು ಗುಂಡು ಹರಿಸುವಂತೆ ತನ್ನ ಸೈನಿಕರಿಗೆ ಆದೇಶಿಸಿದ ಹಿನ್ನಲೆ ಒಟ್ಟು 739 ಭಾರತೀಯರು ತಮ್ಮ ಪ್ರಾಣವನ್ನು ಭಾರತಮಾತೆಗೆ ಅರ್ಪಿಸಿದರು ಮತ್ತು 1,137 ಜನರು ಗಾಯಗೊಂಡಿದ್ದರು.

# Current affairs of April 2020 from KPSC Vaani

13 04 2020 ಮಾಜಿಕೇಂದ್ರಸಚಿವಎಂ.ವಿ.ರಾಜಶೇಖರನ್ಇನ್ನಿಲ್ಲ



ಬೆಂಗಳೂರು:ಕೇಂದ್ರದಮಾಜಿಸಚಿವರುಹಾಗೂರಾಜ್ಯಕಾಂಗ್ರೆಸ್‌ನಹಿರಿಯಮುಖಂಡರುಆದಶ್ರೀ ಎಂ.ವಿ.ರಾಜಶೇಖರನ್ ಅವರು ತಮ್ಮ 92 ವಯಸ್ಸಿನಲ್ಲಿ ಬೆಂಗಳೂರು ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ತೀವ್ರ ಬಹು ಅಂಗಾಗ ವೈಫಲ್ಯದಿಂದ ಕೊನೆಯುಸಿರೆಳೆದರು.

* ಸರಳ, ಸಜ್ಜನಿಕೆಯ ಪ್ರಬುದ್ಧ ರಾಜಕಾರಣಿಯಾಗಿದ್ದ ಇವರು ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪರ ಅಳಿಯರಾಗಿದ್ದರು.
* ಡಾ.ಮನಮೋಹನ್ ಸಿಂಗ್ ಸರ್ಕಾರದಲ್ಲಿ ಕೇಂದ್ರ ಯೋಜನೆ ಮತ್ತು ಅಂಕಿಅಂಶ ಖಾತೆಯರಾಜ್ಯಸಚಿವರಾಗಿಅಧಿಕಾರನಡೆಸಿದ್ದರು.

14 04 2020 ಏಪ್ರಿಲ್14:ವಿಶ್ವಚಾಗಸ್‌ರೋಗದಿನ



ದಿನಾಂಕ ಏಪ್ರಿಲ್ 14,2020ರಂದು ಇಡೀ ವಿಶ್ವದಲ್ಲೇ ಮೊದಲ ಬಾರಿಗೆ ವಿಶ್ವ ಚಾಗಸ್ ರೋಗ ದಿನವನ್ನು ಆಚರಿಸಲಿದೆ. ಈ ದಿನವನ್ನು ಆಚರಿಸುವುದರ ಮುಖ್ಯ ಉದ್ದೇಶ ಜನರಿಗೆ ಚಾಗಸ್ ಕಾಯಿಲೆಯ ಅರಿವು ಹೆಚ್ಚಿಸುವುದು ಜೊತೆಗೆ ರೋಗವನ್ನು ತಡೆಗಟ್ಟಲು, ನಿಯಂತ್ರಿಸಲು ಮತ್ತು ತೊಡೆದುಹಾಕಲು ಬೇಕಾದ ಸಂಪನ್ಮೂಲಗಳ ಬಗ್ಗೆ ಗಮನವಹಿಸುವುದಾಗಿದೆ.

* ಚಾಗಸ್ ರೋಗವನ್ನು "ಅಮೇರಿಕನ್ ಟ್ರಿಪನೊಸೋಮಿಯಾಸಿಸ್" ಎಂದೂ ಕರೆಯಲಾಗುತ್ತದೆ.
* ಈ ರೋಗವನ್ನು "ಮೂಕ ಮತ್ತು ಮೌನ ರೋಗ" ಎಂದೂ ಕರೆಯಲಾಗುತ್ತದೆ.

# Current affairs of April 2020 from KPSC Vaani



# Current affairs of April 2020 from KPSC Vaani

14 04 2020 ಭಾರತದ ಮೊದಲ ರಿಮೋಟ್ ಹೆಲ್ತ್ ಮಾನಿಟರಿಂಗ್ ಸಿಸ್ಟಮ್ ರೀಷಿಕೇಶದಲ್ಲಿ ಸ್ಥಾಪನೆ



ರಿಷಿಕೇಶದಲ್ಲಿರುವ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (AIIMS) ಮತ್ತು BHEL (ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್) ಜಂಟಿಯಾಗಿ ಭಾರತದ ಮೊದಲ ರಿಮೋಟ್ ಹೆಲ್ತ್ ಮಾನಿಟರಿಂಗ್ ವ್ಯವಸ್ಥೆಯನ್ನು ಸ್ಥಾಪಿಸಿವೆ.
* ರಿಮೋಟ್ ಹೆಲ್ತ್ ಮಾನಿಟರಿಂಗ್ ಸಿಸ್ಟಮ್ ಮೂಲಕ ವೈದ್ಯರಿಗೆ ಸೋಂಕಿತರ ದೇಹದ ಉಷ್ಣತೆ ಮತ್ತು ರೋಗಿಗಳ ಆಮ್ಲಜನಕವನ್ನು ದೂರದಿಂದಲೇ ಮೇಲ್ವಿಚಾರಣೆ ಮಾಡಬಹುದಾಗಿದೆ.
* ರಿಮೋಟ್ ಹೆಲ್ತ್ ಮಾನಿಟರಿಂಗ್ ಸಿಸ್ಟಮ್ ನ ಒಂದು ಭಾಗವಾಗಿ ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಶನ್ ಅನ್ನು ಸಹ ನಿರ್ಮಿಸಲಾಗಿದೆ.

14 04 2020 ಲಾಕ್‌ಡೌನ್‌ಸಮಯದಲ್ಲಿದೇಶಾದ್ಯಂತ6,300ಜನೌಷಧಿ ಕೇಂದ್ರಗಳು ಕಾರ್ಯನಿರ್ವಹಣೆ



ಕರೋನ ವೈರಸ್ ನಿಂದಾಗಿ ದೇಶದಲ್ಲಿ ವಿಧಿಸಿರುವ ಲಾಕ್ ಡೌನ್ ಸಮಯದಲ್ಲಿ ಜನರಿಗೆ ತುರ್ತು ಔಷಧಿಗಳ ಪೂರೈಕೆಗಾಗಿ ಪ್ರಧಾನ್ ಮಂತ್ರಿ ಜನೌಷದಿ ಕೇಂದ್ರಗಳಲ್ಲಿ ಸಾಕಷ್ಟು ಔಷಧಿಗಳ ಲಭ್ಯತೆ ಕುರಿತು ಭಾರತ ಸರ್ಕಾರ ಖಚಿತಪಡಿಸಿದೆ. ಸಾರ್ವಜನಿಕರಿಗೆ ಕೈಗೆಟುಕುವ ದರಗಳಲ್ಲಿ ಔಷಧಿಗಳನ್ನು ಪೂರೈಸುವ ಸುಮಾರು 6,300 ಕ್ಕೂ ಹೆಚ್ಚು ಪ್ರಧಾನ್ ಮಂತ್ರಿ ಜನಔಷದಿ ಕೇಂದ್ರಗಳು ಪ್ರಸ್ತುತ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದೂ ಕೇಂದ್ರ ಸರ್ಕಾರ ತಿಳಿಸಿದೆ.
* "ಜನ ಔಷದಿ ಸುಗಮ್" ಎಂಬ ಮೊಬೈಲ್ ಅಪ್ಲಿಕೇಶನ್ ಅನ್ನು ಪ್ರಾರಂಭಿಸಲಾಗಿದ್ದು, ಇದು ದೇಶದ ಹತ್ತಿರದ ಜನೌಷಧಿ ಕೇಂದ್ರವನ್ನು ಗುರುತಿಸಲು ಸಹಕಾರಿಯಾಗಿದೆ.

# Current affairs of April 2020 from KPSC Vaani

15 04 2020 ಎರಡನೇ ಹಂತದ ಲಾಕ್ಡೌನ್ ಮೇ3 ರವರೆಗೆ ಘೋಷಿಸಿ ಪ್ರಧಾನಿ ಭಾಷಣ



ನವದೆಹಲಿ : ದೇಶದಲ್ಲಿ ವ್ಯಾಪಿಸುತ್ತಿರುವ ಕರೋನ ವೈರಸ್ ನಿಯಂತ್ರಿಸಲು ಸಲುವಾಗಿ ಭಾರತದಲ್ಲಿ ಎರಡನೇಹಂತದಲಾಕ್ ಡೌನ್ ಮೇ03ರ ವರೆಗೆವಿಧಿಸಿಪ್ರಧಾನಿಮೋದಿಯವರುಮಂಗಳವಾರ(ಏಪ್ರಿಲ್ 14)ತಮ್ಮಭಾಷಣದಲ್ಲಿಘೋಷಿಸಿದರು.

*ಮಾರ್ಚ್23ರಿಂದಏಪ್ರಿಲ್14ರತನಕಮೊದಲನೇಹಂತದ

21 ದಿನಗಳ ಲಾಕ್ಡೌನ್ ಈಗಾಗಲೇ ಪೂರ್ಣಗೊಂಡಿದೆ. ಪ್ರಧಾನಿಯವರು ತಮ್ಮ ಭಾಷಾದ ವೇಳೆ ಜನರಿಗೆ ಸಪ್ತ ಸೂತ್ರಗಳನ್ನು ನೀಡಿದ್ದು ಅವುಗಳ ವಿವಿರ ಈ ಕೆಳಗಿನಂತಿದೆ: * ಮನೆಯಲ್ಲಿರುವ ವಯೋವೃದ್ಧರ ಬಗ್ಗೆ ಕಾಳಜಿ ವಹಿಸಿ

* ಲಾಕ್ಡೌನ್ ಸಮಯದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಿ ಮತ್ತು ಮನೆಯಲ್ಲೇ ತಯಾರಿಸಿದ ಮಾಸ್ಕ್ ಧರಿಸಿ

* ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಆಯುಷ್ ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸಿ

* ಆರೋಗ್ಯ ಸೇತು ಆಪ್ ಡೌನ್ಲೌಡ್ ಮಾಡಿ ಬಳಸಿ.

* ಬಡವರು, ನಿರ್ಗತಿಕರ ಊಟ, ವಸತಿ ಬಗ್ಗೆ ನಿಗಾವಹಿಸಿ, ಅವರಿಗೆ ಸಹಾಯ ಮಾಡಿ.

* ಯಾರನ್ನು ಕೆಲಸದಿಂದ ತೆಗೆಯಬೇಡಿ, ಕೃಷಿಕರ ಬೆಂಬಲಕ್ಕೆ ನಿಲ್ಲಿ, ವೈದ್ಯರು, ಪೊಲೀಸರು, ಪೌರ ಕಾರ್ಮಿಕರು ಮುಂತಾದ ಕೊರೊನಾ ವಾರಿಯರ್ಸ್ ಗೌರವಿಸಿ ಮತ್ತು ಸಹಕರಿಸಿ

15 04 2020 ಬಿಬಿಎಂಪಿಯಿಂದ'ಸಹಾಯಸೇತುವೆ'ಅಪ್ಲಿಕೇಶನ್ಬಿಡುಗಡೆ



ಬೆಂಗಳೂರು : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರ ಅನುಕೂಲಕ್ಕಾಗಿ BBMP ಯಿಂದ 'ಸಹಾಯ ಸೇತುವೆ' ಎಂಬ ಹೊಸ ಅಪ್ಲಿಕೇಶನ್ ಆರಂಭಿಸಲಾಯಿತು. ಈ ಅಪ್ಲಿಕೇಶನ್ ಯಿಂದ ಇಂದಿರಾ ಕ್ಯಾಂಟೀನ್, ಫೀವರ್ ಕ್ಲಿನಿಕ್ ಸೇರಿದಂತೆ ಇನ್ನಿತರ ಹಲವು ಅಗತ್ಯ ಮಾಹಿತಿಗಳನ್ನು ಪಡೆಯಬಹುದಾಗಿದೆ. ದೇಶದಲ್ಲಿ ಕೊರೊನಾ ಹರಡದಂತೆ ಸುರಕ್ಷತೆಗಾಗಿ ಲಾಕ್ ಡೌನ್ ಘೋಷಣೆ ಮಾಡಲಾಗಿದ್ದು ಈ ಸಮಯದಲ್ಲಿ ಜನರ ಸುರಕ್ಷತೆ ಹಾಗೂ ನಿರ್ಗತಿಕರ ಬಗ್ಗೆ ಕಾಳಜಿಗಾಗಿ ಈ ನೂತನ 'ಸಹಾಯ ಸೇತುವೆ' ಎಂಬ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಿದೆ.

# Current affairs of April 2020 from KPSC Vaani

15 04 2020 ಭಾರತಕ್ಕೆ 155 ದಶಲಕ್ಷ ಮೊತ್ತದ ಕ್ಷಿಪಣಿ, ಟಾರ್ಪೆಡೋ ಮಾರಾಟಕ್ಕೆ ಅಮೆರಿಕ ಒಪ್ಪಿಗೆ



ವಾಷಿಂಗ್ಟನ್ : ಭಾರತಕ್ಕೆ 155 ದಶಲಕ್ಷ ಮೊತ್ತದ ಆಧುನಿಕ ಕ್ಷಿಪಣಿ ಮತ್ತು ಟಾರ್ಪೆಡೋ (ನೌಕಾ ಧ್ವಂಸಕ) ಗಳನ್ನು ಮಾರಾಟ ಮಾಡಲು ಅಮೆರಿಕ ಒಪ್ಪಿಗೆ ನೀಡಿದ್ದು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಸರ್ಕಾರ ಅಧಿಸೂಚನೆ ಪ್ರಕಟಿಸುವ ಮೂಲಕ ಈ ವಿಷಯವನ್ನು ಬಹಿರಂಗ ಪಡಿಸಿದೆ. ಈ ಒಪ್ಪಂದದ ಪ್ರಕಾರ ಅಮೆರಿಕಾವು ಭಾರತಕ್ಕೆ ಭೂಮಿಯಿಂದ ಗಗನಕ್ಕೆ ಚಿಮ್ಮುವ ಹರ್ಪೂನ್ ಕ್ಷಿಪಣಿಗಳು ಮತ್ತು ಹಗುರ ತೂಕ ಟಾರ್ಪೆಡೋಗಳನ್ನು (ಯುದ್ಧ ನೌಕೆ, ಸಬ್‌ಮರೀನ್ ಇತ್ಯಾದಿ ಧ್ವಂಸಕ) ಮಾರಾಟ ಮಾಡಲಿದೆ.

15 04 2020 ಪ್ರಸಕ್ತ ಸಾಲಿನಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಭಾರತ : IMF




ವಿಶ್ವ ಆರ್ಥಿಕ ವರದಿಯಲ್ಲಿ ಭಾರತವನ್ನು ಜಗತ್ತಿನಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂದು ಅಂತರಾಷ್ಟ್ರೀಯ ಹಣಕಾಸು ನಿಧಿ ಹೇಳಿದೆ. ಕೊರೊನಾ ವೈರಸ್ ನಿಂದಾಗಿ ವಿಶ್ವದ ಆರ್ಥಿಕತೆ 1930ರ ದಶಕದ ನಂತರ ತೀವ್ರ ಆರ್ಥಿಕ ಹಿಂಜರಿತವನ್ನು ಎದುರಿಸುತ್ತಿರುವ ಹಿನ್ನಲೆ, 2020 ರಲ್ಲಿ ಭಾರತ GDP ಬೆಳವಣಿಗೆ 1.9ಪರ್ಸೆಂಟ್ ಎಂದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಅಂದಾಜಿಸಿದೆ.

# Current affairs of April 2020 from KPSC Vaani

15 04 2020 ವಿಶ್ವ ಆರೋಗ್ಯ ಸಂಸ್ಥೆ ಆರ್ಥಿಕ ನೆರವು ಸ್ಥಗಿತಗೊಳಿಸಿದ ನಿಲ್ಲಿಸಿದ ಅಮೇರಿಕಾ



ವಾಷಿಂಗ್ಟನ್ : ವಿಶ್ವ ಆರೋಗ್ಯ ಸಂಸ್ಥೆಗೆ ಅಮೆರಿಕ ಸರ್ಕಾರ ನೀಡುತ್ತಿದ್ದ ಆರ್ಥಿಕ ನೆರವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಥಗಿತಗೊಳಿಸಿದ್ದಾರೆ. ಕೊರೊನಾ ವೈರಸ್ ಸೋಂಕು ಮನುಷ್ಯನಿಂದ ಮನುಷ್ಯನಿಗೆ ಹರಡುವಂತಹ ಕಾಯಿಲೆಯಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ನೀಡಿದ ಹೇಳಿಕೆ ಸುಳ್ಳಾಗಿತ್ತು ಹಾಗೂ ಚೀನಾ ದೇಶದ ಪರ ವಿಶ್ವ ಆರೋಗ್ಯ ಸಂಸ್ಥೆ ಮೃದು ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿರುವ ಟ್ರಂಪ್ ಇದೆ ಕಾರಣದಿಂದ ವಿಶ್ವ ಆರೋಗ್ಯ ಸಂಸ್ಥೆಗೆ ನೀಡುತ್ತಿದ್ದ ಆರ್ಥಿಕ ನೆರವನ್ನು ಸ್ಥಗಿತಗೊಳಿಸಿದ್ದಾರೆ.

* ಅಮೆರಿಕವು ವಿಶ್ವ ಆರೋಗ್ಯ ಸಂಸ್ಥೆಗೆ ಸರಿಸುಮಾರು 400 ಮಿಲಿಯನ್ ಡಾಲರ್ ನೆರವು ನೀಡುತ್ತಾ ಬಂದಿದೆ.
* 2018 19ರ ಬಜೆಟ್‌ನಲ್ಲಿ 6ಬಿಲಿಯನ್ ಡಾಲರ್ ಮೊತ್ತದ ಆರ್ಥಿಕ ನೆರವು ನೀಡಿತ್ತು.

15 04 2020 ದೇಶಾದ್ಯಂತ 170 ಜಿಲ್ಲೆಗಳು ಕರೋನ ಹಾಟ್ ಸ್ಪಾಟ್ : ಕೇಂದ್ರ




ನವದೆಹಲಿ: ಭಾರತದಲ್ಲಿ ವಿಧಿಸಿರುವ ಲೊಕ್ಡೌನ್ ಹೊರತಾಗಿಯೂ ಹಲವು ಪ್ರದೇಶಗಳಲ್ಲಿ ಕರೋನ ಸೋಂಕು ವ್ಯಾಪಿಸುತ್ತಿರುವ ಹಿನ್ನಲೆ ದೇಶದಲ್ಲಿ ಒಟ್ಟು 170 ಜಿಲ್ಲೆಗಳನ್ನು ಕೊರೋನಾ ಹಾಟ್ ಸ್ಪಾಟ್ ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಕೊರೋನಾ ಸೋಂಕು ಪತ್ತೆಯಾದ ಪ್ರಕರಣಗಳ ಸಂಖ್ಯೆಯನ್ನು ಆಧರಿಸಿ ದೇಶದ ಜಿಲ್ಲೆಗಳನ್ನು ವಿಂಗಡಿಸಲಾಗಿದ್ದು, ಹಾಟ್ ಸ್ಪಾಟ್, ನಾನ್ ಹಾಟ್ ಸ್ಪಾಟ್ ಮತ್ತು ಗ್ರೀನ್ ಎಂದು ಮೂರು ವಿಧಗಳಾಗಿ ವರ್ಗೀಕರಿಸಲಾಗಿದೆ. ರಾಜ್ಯದಲ್ಲಿ ಹಾಟ್ ಸ್ಪಾಟ್ ಜಿಲ್ಲೆಗಳು :- ಬೆಂಗಳೂರು ನಗರ, ಮೈಸೂರು, ಬೆಳಗಾವಿ ರೆಡ್ ಜೋನ್ ಆಗಿದ್ದು, ಬೀದರ್, ದಕ್ಷಿಣ ಕನ್ನಡ, ಕಲಬುರ್ಗಿ, ಬಾಗಲಕೋಟೆ, ಧಾರವಾಡ ಜಿಲ್ಲೆಗಳು ಹಾಗೂ ಈ ಜಿಲ್ಲೆಯ ಕೆಲವು ಪ್ರದೇಶ ಹಾಟ್ ಸ್ಪಾಟ್ ಗಳಾಗಿವೆ.

# Current affairs of April 2020 from KPSC Vaani

16 04 2020 BCCIನಿಂದIPL 2020ಪಂದ್ಯಗಳು ಅನಿರ್ದಿಷ್ಟಾವಧಿವರೆಗೆಮುಂದೂಡಿಕೆ

ಏಪ್ರಿಲ್ 15,2020ರಂದು ಭಾರತೀಯ ಕ್ರಿಕೆಟ್ ಮಂಡಳಿ (BCCI)ಯುಇಂಡಿಯನ್ ಪ್ರೀಮಿಯರ್ ಲೀಗ್(IPL), 2020 ಅನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಭಾರತದಲ್ಲಿ ಲಾಕ್ ಡೌನ್ ಅನ್ನು ಮೇ 3, 2020 ರವರೆಗೆ ವಿಸ್ತರಿಸಿ ಮೋದಿಯವರು ಭಾಷಣ ಮಾಡಿದ ಹಿನ್ನಲೆ IPL ಪಂದ್ಯಗಳನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಲಾಗಿದ್ದು ಪದ್ಯಗಳು ನಡೆಯಬೇಕಾದ ನಂತರದ ದಿನಾಂಕವನ್ನು ಬರುವ ದಿನಗಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.
*BCCI2020ರ ಜೂನ್‌ನಲ್ಲಿ ಒಂದು ತಿಂಗಳ ಅವಧಿಯ ಪಂದ್ಯಗಳನ್ನು ನಡೆಸುವ ಯೋಜನೆಯನ್ನು ಹೊಂದಿತ್ತು. ಆದಾಗ್ಯೂ, ಲಾಕ್ ಡೌನ್ ವಿಸ್ತರಣೆಯಿಂದಾಗಿ ಮತ್ತು ವೈರಸ್ ಹರಡುವಿಕೆಯ ಹೆಚ್ಚಳದಿಂದಾಗಿ, ಪಂದ್ಯಗಳನ್ನು ಈಗ ಅನಿರ್ದಿಷ್ಟವಾಗಿ ಸ್ಥಗಿತಗೊಳಿಸಲಾಗಿದೆ.

16 04 2020 ಗ್ರಾಮೀಣ ಪ್ರದೇಶಗಳಲ್ಲಿ MGNREGA ಆರಂಭಿಸಲು ಕೇಂದ್ರ ಸರ್ಕಾರ ನಿರ್ಧಾರ




ದಿನಾಂಕ ಏಪ್ರಿಲ್ 15, 2020 ರಂದು ಭಾರತ ಸರ್ಕಾರವು ಎರಡನೇ ಹಂತದ ಲಾಕ್ ಡೌನ್ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಿದೆ. ಹೊಸ ಮಾರ್ಗಸೂಚಿಗಳ ಪ್ರಕಾರ, ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕಾ ಕಾರ್ಯಗಳು, ರಸ್ತೆ ನಿರ್ಮಾಣ ಕಾರ್ಯಗಳು ಮತ್ತು MGNREGA ಯೋಜನೆಯ ಕಾರ್ಯಗಳನ್ನು ಪ್ರಾರಂಭಿಸಲು ಸರ್ಕಾರ ಅವಕಾಶ ನೀಡಿದೆ.
* MGNREGA (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ) ದೇಶದ ಉದ್ಯೋಗ ಸೃಷ್ಟಿಯ ದೊಡ್ಡ ಮೂಲವಾಗಿದೆ.
* ವಾರ್ಷಿಕವಾಗಿ 50 ರಿಂದ 60 ದಶಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಕೆಲಸವನ್ನು ಒದಗಿಸುತ್ತದೆ.
* ಸರಿ ಸುಮಾರು 5 ಲಕ್ಷದಿಂದ 6 ಲಕ್ಷ ವಲಸಿಗರು ಲೊಕ್ಡೌನ್ ನಿಂದಾಗಿ ದೇಶಾದ್ಯಂತ ತಮ್ಮ ಹಳ್ಳಿಗಳಿಗೆ ಮರಳಿದ್ದಾರೆ ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ. ಇದರಿಂದ ಗ್ರಾಮೀಣ ಭಾಗದಲ್ಲಿ ನರೇಗಾ ಕಾರ್ಯವನ್ನು ಸರ್ಕಾರ ಆರಂಭಿಸಿದೆ.

# Current affairs of April 2020 from KPSC Vaani

16 04 2020 ರಾಜ್ಯ ಸರ್ಕಾರದಿಂದ 'ಮಕ್ಕಳ ವಾಣಿ' ಯುಟ್ಯೂಬ್ ಚಾನೆಲ್ ಆರಂಭ




ರಾಜ್ಯ ಲೊಕ್ಡೌನ್ ವಿಧಿಸಿರುವ ಈ ಸಂದರ್ಭದಲ್ಲಿ ಎಲ್ಲ ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿದ್ದು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯು ಮನೆಯಲ್ಲಿರುವ ಮಕ್ಕಳನ್ನು ತಲುಪಲು ಒಂದು ನೂತನ ಯುಟ್ಯೂಬ್ ಚಾನೆಲ್ "ಮಕ್ಕಳ ವಾಣಿ" ಅನ್ನು ಆರಂಭಿಸಿದೆ. ಬೇಸಿಗೆ ರಜೆಯ ಕಾರಣ ಮನೆಯಲ್ಲಿರುವ ಮಕ್ಕಳಿಗೆ ಕತೆ, ಹಾಡು, ಚಿತ್ರ ಕಲೆ, ಸಂಗೀತ, ಕಿರು ನಾಟಕ, ಕ್ರಾಫ್ಟ್, ಒಗಟು, ಗಾದೆ, ಮ್ಯಾಜಿಕ್, ಪದಬಂಧ ಇತ್ಯಾದಿಗಳ ವಿಷಯಗಳನ್ನು ಯುಟ್ಯೂಬ್ ವಿಡಿಯೋಗಳ ಮೂಲಕ ತಲುಪಿಸಿ ಮಕ್ಕಳನ್ನು ರಂಜಿಸಲು ಈ ಯುಟ್ಯೂಬ್ ಚಾನೆಲ್ 'ಮಕ್ಕಳ ವಾಣಿ'ಗೆ ಚಾಲನೆ ನೀಡಲಾಗಿದೆ.

16 04 2020 ಗೂಗಲ್ ಸಂಸ್ಥೆಯಿಂದ ಪತ್ರಿಕೋದ್ಯಮ ಪರಿಹಾರ ನಿಧಿ ಆರಂಭಿಸಲು ಚಿಂತನೆ




ಕೊರೊನಾ ವೈರಸ್ ಜಾಗತಿಕವಾಗಿ ವ್ಯಾಪಿಸಿರುವ ಬೆನ್ನಲ್ಲೇ ಹಲವು ವಲಯಗಳು ಸಂಕಷ್ಟದಲ್ಲಿ ಸಿಲುಕಿವೆ, ಇವುಗಳ ಪೈಕಿ ಪತ್ರಿಕೋದ್ಯಮವು ಒಂದಾಗಿದ್ದು, ಸುದ್ದಿ ಸಂಸ್ಥೆಗಳು ಜಾಹೀರಾತುಗಳ ಆದಾಯ ಇಲ್ಲದೇ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವುದನ್ನು ಮನಗಂಡು, ವಿಶ್ವದ ದೈತ್ಯ ಟೆಕ್ ಕಂಪೆನಿಯಾಗಿರುವ ಗೂಗಲ್ ಸಂಸ್ಥೆಯು ವಿಶ್ವಾದ್ಯಂತ ಸ್ಥಳೀಯ ಸುದ್ದಿ ಸಂಸ್ಥೆಗಳಿಗೆ ನೆರವಾಗಲು 'ಪತ್ರಿಕೋದ್ಯಮ ಪರಿಹಾರ ನಿಧಿ'(Journalism Emergency Relief Fund) ಆರಂಭಿಸಿರುವದಾಗಿ ಘೋಷಿಸಿದೆ.

# Current affairs of April 2020 from KPSC Vaani

16 04 2020 ಭಾರತಕ್ಕೆ ಚೀನಾದಿಂದ6,50,000COVID 19ಪರೀಕ್ಷಾ ಕಿಟ್‌ಗಳ ಆಮದು



ದಿನಾಂಕ ಏಪ್ರಿಲ್ 16, 2020 ರಂದು ಚೀನಾದಿಂದ 3 ಲಕ್ಷ COVID 19 ಪರೀಕ್ಷಾ ಕಿಟ್‌ಗಳು ಆರಂಭಿಕವಾಗಿ ಬರಲಿದ್ದು, ನಂತರದ 2 ವಾರಗಲ್ಲಿ ಭಾರತವು ಚೀನಾದಿಂದ 2 ರಿಂದ 3 ಮಿಲಿಯನ್ ಕಿಟ್‌ಗಳನ್ನು ಆಮದು ಮಾಡಿಕೊಳ್ಳಲಿದೆ.

* ಭಾರತವು 100,000 RNA ಹೊರತೆಗೆಯುವ ಕಿಟ್‌ಗಳನ್ನು ಮತ್ತು 5,50,000ಆಂಟಿಬಾಡಿ ಪರೀಕ್ಷಾ ಕಿಟ್‌ಗಳನ್ನು ಚೀನಾದಿಂದ ಖರೀದಿಸುತ್ತಿದೆ.

17 04 2020 COVID 19 ಸೋಂಕು ಕುರಿತ ನಡೆಯುವ ಬ್ರಿಕ್ಸ್ ಸಭೆಯಲ್ಲಿ ಭಾರತಭಾಗಿ




ಇದೆ ಏಪ್ರಿಲ್ (2020) ತಿಂಗಳ ಕೊನೆಯಲ್ಲಿ ನಡೆಯುವ covid 19 ಕುರಿತ ನಡೆಯುವ ಬ್ರಿಕ್ಸ್ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ಭಾರತ ಭಾಗವಹಿಸಲಿದೆ. ಈ ಸಭೆಯಲ್ಲಿ COVID 19 ಸೋಂಕು ಜಾಗತಿಕವಾಗಿ ಹರಡಿರುವದರಿಂದ ಉಂಟಾದ ಆರ್ಥಿಕ ಕುಸಿತದ ಬಗ್ಗೆ ಎಲ್ಲ BRICS ಸದಸ್ಯರು ಚರ್ಚಿಸಲಿದ್ದಾರೆ.

* ಬ್ರಿಕ್ಸ್ ಸಧಸ್ಯ ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲಾಗುವುದು.

# Current affairs of April 2020 from KPSC Vaani

17 04 2020 WWF ಭಾರತದ ರಾಯಭಾರಿಯಾಗಿ ಭಾರತೀಯ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್‌ನೇಮಕ



ಭಾರತದ ಚೆಸ್ ದಂತಕಥೆಯಾದ ವಿಶ್ವನಾಥನ್ ಆನಂದ್ ಅವರನ್ನು ವರ್ಲ್ಡ್ ವೈಡ್ ಫಂಡ್ (WWF)ನ ಭಾರತದ ರಾಯಭಾರಿಯಾಗಿ ಆಯ್ಕೆಮಾಡಲಾಗಿದೆ. ವಿಶ್ವನಾಥನ್ ಆನಂದ್ ಪರಿಸರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಸಂಸ್ಥೆಗೆ ಸೇರಿದ್ದಾರೆ.

*ಪರಿಸರ ಶಿಕ್ಷಣ ಕಾರ್ಯಕ್ರಮವನ್ನು 1976ರಲ್ಲಿ ಪ್ರಾರಂಭಿಸಲಾಯಿತು.

* ಪರಿಸರ ಶಿಕ್ಷಣ ಕಾರ್ಯಕ್ರಮ ದೇಶದ ಯುವಕರು, ಶಾಲಾ ಮಕ್ಕಳು ಮತ್ತು ನಾಗರಿಕರನ್ನು ತಲುಪಲು ಕ್ರಮ ಕೈಗೊಳ್ಳುತ್ತದೆ.

* ಒಟ್ಟು 5 ಲಕ್ಷ ಮಕ್ಕಳು ಮತ್ತು 2000 ಶಾಲೆಗಳನ್ನು ಪರಿಸರ ಶಿಕ್ಷಣ ಕಾರ್ಯಕ್ರಮ ತಲುಪುತ್ತದೆ.

* ವರ್ಲ್ಡ್ ವೈಡ್ ಫಂಡ್ : WWF ಎನ್ನುವುದು 1961 ರಲ್ಲಿ ಸ್ಥಾಪನೆಯಾದ ಅಂತಾರಾಷ್ಟ್ರೀಯ ಸರ್ಕಾರೇತರ ಸಂಸ್ಥೆ ಆಗಿದೆ.

17 04 2020 PUSA:ICARನಿಂದಅಭಿವೃದ್ಧಿಪಡಿಸಿದಸೋಂಕು ನಿವಾರಕ ಸುರಂಗ



ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಸೋಂಕು ನಿವಾರಕ ಮಾನವ ಸುರಂಗ(PUSA)ವನ್ನು ಅಭಿವೃದ್ಧಿಪಡಿಸಿದೆ. ಈ ಮಾನವ ಸುರಂಗವನ್ನು 2020 ರ ಏಪ್ರಿಲ್ 16 ರಂದು ಕೇಂದ್ರ ಸಚಿವರಾದ ಶ್ರೀ ಕೈಲಾಶ್ ಚೌಧರಿ ಅವರು ಉದ್ಘಾಟಿಸಿದ್ದಾರೆ. ಸುರಂಗದ ಬಗ್ಗೆ : ಈ ಸುರಂಗವು ಪಾದಗಳ ಚಲನೆ ಆಧಾರದ ಮೇಲೆ ನೀರು ಮತ್ತು ಸಾಬೂನು ಸಿಂಪಡಿಸುತ್ತದೆ. ಸುರಂಗವು ಸುಮಾರು 20 ಸೆಕೆಂಡುಗಳ ಕಾಲ ಫಾಗಿಂಗ್(ದಟ್ಟ ಹೊಗೆ) ಯನ್ನು ಸಹ ಒಳಗೊಂಡಿದೆ.

* ಈ ಸುರಂಗದಲ್ಲಿ ಕ್ವಾಟರ್ನರಿ ಅಮೋನಿಯಂ ಸಂಯುಕ್ತಗಳನ್ನು 0.045% ಸಾಂದ್ರತೆಯಲ್ಲಿ ಬಳಸಲಾಗಿದೆ.

# Current affairs of April 2020 from KPSC Vaani

17 04 2020 ಜೂಮ್ಅಪ್ಲಿಕೇಶನ್‌ಗೆಕೆಂಪುಧ್ವಜ(RedFlag)ನೀಡಿದ ಕೇಂದ್ರಸರ್ಕಾರ




ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೈಬರ್ ಕೋರ್ದಿನೇಷನ್ ಸೆಂಟರ್ (CyCord)ವು ಜೂಮ್ ಅಪ್ಲಿಕೇಶನ್ ಗೆ ಕೆಂಪು ಧ್ವಜ (Red Flag) ನೀಡಿದೆ. ಅಲ್ಲದೆ ಜೂಮ್ ಅಪ್ಲಿಕೇಶನ್ ಬಳಸಲು ಗೃಹ ಸಚಿವಾಲಯ ಹಲವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಅಲ್ಲದೆ ಸರ್ಕಾರಿ ಅಧಿಕಾರಿಗಳು ಅರ್ಜಿಯನ್ನು ಅಧಿಕೃತ ಉದ್ದೇಶಗಳಿಗಾಗಿ ಬಳಸಬಾರದು ಎಂದು ಗೃಹ ಸಚಿವಾಲಯ ಒತ್ತಿಹೇಳಿದೆ.

17 04 2020 RBI ನಿಂದ ಕೋರೋಣ ವಿರುದ್ಧ ಹೋರಾಟಕ್ಕೆ ನೂತನ ಕ್ರಮಗಳು



ಭಾರತೀಯ ರಿಸರ್ವ್ ಬ್ಯಾಂಕ್(RBI) ದಿಂದ ಕರೋನಾ ವಿರುದ್ಧದ ಹೋರಾಟಕ್ಕೆ ಹೆಚ್ಚುವರಿ ಕ್ರಮಗಳನ್ನು RBI ನ ಗೋವರ್ನರ್ ಶಕ್ತಿಕಾಂತ ದಾಸ್ ಮಾಧ್ಯಮ ಘೋಷ್ಠಿ ನಡೆಸುವ ಮೂಲಕ ಘೋಷಿಸಿದ್ದಾರೆ. ಪ್ರಮುಖ ಅಂಶಗಳು :

* ಬ್ಯಾಂಕ್ ಗಳು ಎಂದಿನಂತೆ ಕಾರ್ಯ ನಿರ್ವಾಹಣೆ
* ರಿಸರ್ವ್ ರೇಪೊದರ 3.75 ಕ್ಕೆ ಇಳಿಕೆ
* ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ 50 ಸಾವಿರ ಕೋಟಿ ಮೀಸಲು
* ನಬಾರ್ಡ್ ಗೆ 25 ಸಾವಿರ ಕೋಟಿ ನೀಡಲಾಗುತ್ತಿದೆ
* ನಬಾರ್ಡ್ 25 ಸಾವಿರ ಕೋಟಿ ಮೀಸಲಿಡಲಾಗಿದೆ
* ಸಿಐಡಿಬಿಐ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿಗೆ 15 ಸಾವಿರ ಕೋಟಿ ಮೀಸಲು
* ನ್ಯಾಶನಲ್ ಹೌಸಿಂಗ್ ಬ್ಯಾಂಕ್ ಗೆ 10 ಸಾವಿರ ಕೋಟಿ ಮೀಸಲು * ಕೊರೊನಾ ವಿರುದ್ಧ ಹೋರಾಟಕ್ಕೆ ರಾಜ್ಯಗಳಿಗೆ ಶೇ.60ರಷ್ಟು ಹೆಚ್ಚುವರಿ ಹಣ
*ಆರ್.ಬಿ.ಐನಿಂದ ಬ್ಯಾಂಕ್ ಗಳಿಗೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ
* ಬ್ಯಾಂಕ್ ಗಳು ಲಾಭದ ಅಂಶವನ್ನು ಘೋಷಣೆ ಮಾಡುವ ಅಗತ್ಯವಿಲ್ಲ * 3 ತಿಂಗಳ ಕಾಲ ಎನ್ ಪಿ.ಎ ನಿಯಮ ಅನ್ವಯಿಸುವುದಿಲ್ಲ

# Current affairs of April 2020 from KPSC Vaani

18 04 2020 ಚೀನಾದಿಂದ5ಲಕ್ಷಕೋರೋಣಪರೀಕ್ಷಾಕಿಟ್ಆಮದು




ನವದೆಹಲಿ: ಭಾರತವು ಚೀನಾ ದೇಶದಿಂದ 5 ಲಕ್ಷ ಕೋವಿಡ್ ಪರೀಕ್ಷಾ ಕಿಟ್‌ಗಳನ್ನು ಆಮದು ಮಾಡಿಕೊಂಡಿರುವದಾಗಿ ICMR ತಿಳಿಸಿದೆ. ಈ ಪರೀಕ್ಷಾ ಕಿಟ್ ಗಳನ್ನು ಕೇವಲ ನಿಗಾ ವಹಿಸಲು ಹಾಗೂ ದೇಶದ ಹಾಟ್ ಸ್ಪಾಟ್ ಗಳ ಸಂಖ್ಯೆಯನ್ನು ತಿಳಿಯಲು ಮಾತ್ರವೇ ಬಳಸಲಾಗುತ್ತದೆ. ಭಾರತದಲ್ಲಿ ಪ್ರತಿ ದಿನ ಸರಿಸುಮಾರು 30,043 ಸ್ಯಾಂಪಲ್ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಈವರೆಗೆ ಒಟ್ಟು ಖಾಸಗಿ ಹಾಗೂ ಸರಕಾರಿ ಪ್ರಯೋಗಾಲಯಗಳು ಸೇರಿ 2.90ಲಕ್ಷ ಪರೀಕ್ಷೆಗಳನ್ನು ನಡೆಸಿವೆ.

18 04 2020 ಕೋವಿಡ್ ನಿಯಂತ್ರಣದಲ್ಲಿ ಭಾರತ ಪ್ರಥಮ; ಸೋಂಕು ಪರೀಕ್ಷೆಯಲ್ಲಿ 2ನೇ ಸ್ಥಾನ




ನವದೆಹಲಿ : ಕೋವಿಡ್ 19 ಸೋಂಕು ನಿಯಂತ್ರಿಸಲು ಭಾರತ ಕೈಗೊಂಡಿರುವ ಕ್ರಮಗಳು ಇಡೀ ವಿಶ್ವದಲ್ಲೇ ಅತ್ಯಂತ ಪರಿಣಾಮಕಾರಿ ಎಂಬ ಕೀರ್ತಿ ಪಡೆದಿದೆ. ಪರೀಕ್ಷೆಗೊಳಗಾದವರ ಸಂಖ್ಯೆ:

* ಭಾರತದಲ್ಲಿ ಮೊದಲ 10,000 ಸೋಂಕಿತರು ಪತ್ತೆಯಾಗುವಷ್ಟರಲ್ಲಿ 2.17 ಲಕ್ಷ ಜನರನ್ನು ಪರೀಕ್ಷೆಗೊಳಪಡಿಸಲಾಗಿತ್ತು.
* ಅಮೆರಿಕದಲ್ಲಿ ಮೊದಲ 10000 ಪ್ರಕರಣಗಳ ಪೈಕಿ 1.39 ಲಕ್ಷ
* ಯು.ಕೆ.ಯಲ್ಲಿ 10,000ಸೋಂಕಿತರು ಪತ್ತೆಯಾಗುವಷ್ಟರಲ್ಲಿ 1.13ಲಕ್ಷ
*ಇಟಲಿಯಲ್ಲಿ 73,000ಜನರನ್ನು ಪರೀಕ್ಷೆ ಮಾಡಲಾಗಿತ್ತು.
*ಕೆನಡಾದಲ್ಲಿ ಮಾತ್ರ 2.95ಲಕ್ಷ ಮಂದಿಯನ್ನು ಪರೀಕ್ಷೆಗೊಳಪಡಿಸುವ ಮೂಲಕ ಮೊದಲ ಸ್ಥಾನದಲ್ಲಿದೆ. ಪ್ರತಿ 10 ಲಕ್ಷ ಜನರಲ್ಲಿ ಸೋಂಕಿತರ ಲೆಕ್ಕ :
*ಭಾರತದಲ್ಲಿ ಪ್ರತಿ 10ಲಕ್ಷ ಜನರಲ್ಲಿ 9ಜನರು ಸೋಂಕಿತರಾಗಿದ್ದಾರೆ.
*ಇದೇ ಪ್ರಮಾಣ ಅಮೆರಿಕದಲ್ಲಿ 1,946,ಸ್ಪೇನ್‌ನಲ್ಲಿ 3,864,ಇಟಲಿಯಲ್ಲಿ 2,732,ಫ್ರಾನ್ಸ್‌ನಲ್ಲಿ 2,265ಹಾಗೂ ಯು.ಕೆ. 1,451,ಜಪಾನ್‌ನಲ್ಲಿ 68 ಸೋಂಕಿತರು ಇದ್ದಾರೆ.

# Current affairs of April 2020 from KPSC Vaani

18 04 2020 ರೈತರಿಗಾಗಿ `ಕಿಸಾನ್ ರಥ್' ಆಯಪ್ ಬಿಡುಗಡೆ ಮಾಡಿದ ಕೇಂದ್ರ ಸರ್ಕಾರ

ನವದೆಹಲಿ : ದೇಶದಲ್ಲಿ ವಿಧಿಸಿರುವ ಲಾಕ್ ಡೌನ್ ನಿಂದಾಗಿ ರೈತರಿಗೆ ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ತಲುಪಿಸುವದು ಕಷ್ಟವಾಗುತ್ತಿರುವದನ್ನು ಮನಗಂಡು ಕೇಂದ್ರ ಸರ್ಕಾರ Ola Uber ರೀತಿಯಲ್ಲಿ "ಕಿಸಾನ್ ರಥ" ಎಂಬ ನೂತನ ಮೊಬೈಲ್ ಆಯಪನ್ನು ಬಿಡುಗಡೆ ಗೊಳಿಸಿದೆ.

* ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಈ ಆಯಪ್ ನ್ನು ಬಿಡುಗಡೆ ಮಾಡಿದರು.

18 04 2020 ಕರೋನ ಪ್ರಕರಣಗಳ ಗೌಪತೆಯಲ್ಲಿ ಚೀನಾವನ್ನು ಅನುಸರಿಸುತ್ತಿರುವ ಇತರದೇಶಗಳು: WHO



COVID 19 ಸೋಂಕಿನ ಪ್ರಕರಣಗಳ ನಿಖರ ಸಂಖ್ಯೆಯನ್ನು ಬಹಿರಂಗ ಪಡಿಸುವಲ್ಲಿ ಅನೇಕ ದೇಶಗಳು ಚೀನಾ ದೇಶದ ನಡೆಯನ್ನೇ ಅನುಸರಿಸುತ್ತಿವೆ ಎಂದು ಏಪ್ರಿಲ್ 18, 2020 ರಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

* ಚೀನಾದ ವುಹಾನ್ ಪ್ರಾಂತ್ಯವು COVID 19 ಸೋಂಕಿನ ಪ್ರಮುಖ ಕೇಂದ್ರಬಿಂದುವಾಗಿದೆ. ಚೀನಾ ದೇಶವು ಇತ್ತೀಚೆಗೆ COVID 19 ಸೋಂಕಿನಿಂದ ಸಾವಿಗೀಡಾದವರ ಸಂಖ್ಯೆಯನ್ನು ಹಲವು ದಿನಗಳ ಬಳಿಕ 50% ರಷ್ಟು ಹೆಚ್ಚಿರುವುದಾಗಿ ತಿಳಿಸಿದೆ. WHO ಪ್ರಕಾರ, ವುಹಾನ್‌ನ ಆರೋಗ್ಯ ಅಧಿಕಾರಿಗಳು ಸೋಂಕು ಪ್ರಕರಣಗಳನ್ನು ಮುಚ್ಚಿಹಾಕಿದ್ದರು, ನಂತರ ಹಲವಾರು ವೈದ್ಯರು ಆನ್‌ಲೈನ್‌ನಲ್ಲಿ ಎಚ್ಚರಿಕೆ ನೀಡಿದ ಬಳಿಕೆ ನಂತರ ಸಂಖ್ಯೆಗಳನ್ನು ಪರಿಸ್ಕರಿಸಲಾಯಿತು.

# Current affairs of April 2020 from KPSC Vaani



# Current affairs of April 2020 from KPSC Vaani

18 04 2020 IMF ವಿಶ್ವ ಬ್ಯಾಂಕಿನ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಭಾಗವಹಿಸಿದ ಭಾರತ




ಭಾರತ ವಿಶ್ವಬ್ಯಾಂಕ್ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಭಾಗವಹಿಸಿತು. ಭಾರತದ ಪ್ರತಿನಿಧಿಯಾಗಿ ಕೇಂದ್ರ ಹಣಕಾಸು ಸಚಿವ ಶ್ರೀಮತಿ ನಿರ್ಮಲಾ ಸೀತಾರಾಮನ್ ಪ್ರತಿನಿಧಿಸಿದ್ದರು.
* ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಈ ಅಭಿವೃದ್ಧಿ ಸಮಿತಿಯ 101 ನೇ ಸಭೆಯಲ್ಲಿ ಭಾರತ ಭಾಗವಹಿಸಿತು.
* ಈ ಸಭೆಯಲ್ಲಿ ಭಾಗವಹಿಸಿದ ತಜ್ಞರು COVID 19 ನಿಂದ ತೇಗೆದುಕೊಳ್ಳಬೇಕಾದ ತುರ್ತು ಕ್ರಮಗಳ ಪ್ರತಿಕ್ರಿಯೆ ಕುರಿತು ಚರ್ಚಿಸಿದರು.
* ಮುಂದಿನ 15 ತಿಂಗಳುಗಳವರೆಗೆ COVID 19viruddaಹೋರಾಡಲು ವಿಶ್ವಬ್ಯಾಂಕನಿಂದ ದೊರೆಯುವ 150 ರಿಂದ 160 ಶತಕೋಟಿ ಡಾಲರ್ಗಳಷ್ಟು ಆರ್ಥಿಕ ಸಹಾಯವನ್ನು ಸಮಿತಿಯು ಸ್ವಾಗತಿಸಿತು.
* ಅಭಿವೃದ್ಧಿ ಸಮಿತಿಯ ಮುಂದಿನ ಸಭೆಯನ್ನು 17ಅಕ್ಟೋಬರ್ 2020ರಂದು ನಿಗದಿಪಡಿಸಲಾಗಿದೆ.

19 04 2020 ಸ್ವಿಝರ್ ಲ್ಯಾಂಡ್ ನ ಮ್ಯಾಟರ್‌ಹಾರ್ನ್ ಪರ್ವತದಲ್ಲಿ ಬೆಳಗಿದ ತ್ರಿವರ್ಣ ಧ್ವಜ



ಬರ್ನ್ (ಜಿನೀವ) :ಸ್ವಿಝರ್ ಲ್ಯಾಂಡ್ ಮತ್ತು ಇಟಲಿ ದೇಶಗಳ ಗಡಿಭಾಗದಲ್ಲಿ ಆಲ್ಪ್ಸ್ ಪರ್ವತ ಶ್ರೇಣಿಯಲ್ಲಿ ವ್ಯಾಪಿಸಿರುವ ಅತ್ಯುನ್ನತ ಶಿಖರಗಳಲ್ಲಿ ಒಂದಾಗಿರುವ 14,692 ಅಡಿ ಎತ್ತರದ ಮ್ಯಾಟರ್‌ಹಾರ್ನ್ ಪರ್ವತದಲ್ಲಿ ಸುಮಾರು 1000 ಮೀಟರನಷ್ಟು ಭಾರೀಗಾತ್ರದಲ್ಲಿ ಭಾರತೀಯ ತ್ರಿವರ್ಣ ಧ್ವಜದ ಮಾದರಿಯ ಲೇಸರ್ ಬೆಳಕನ್ನು ಬೆಳಗಿಸುವ ಮೂಲಕ, ಸ್ವಿಝರ್ ಲ್ಯಾಂಡ್ ವಿನೂತನವಾಗಿ ಕೊರೋನ ವೈರಸ್ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ಬೆಂಬಲ ನೀಡಿದೆ.

# Current affairs of April 2020 from KPSC Vaani

19 04 2020 ಖ್ಯಾತಕಾದಂಬರಿಕಾರಚಂದ್ರಕಾಂತಕುಸನೂರಇನ್ನಿಲ್ಲ



ಬೆಳಗಾವಿ: ಕಲಬುರಗಿ ಮೂಲದ ಖ್ಯಾತ ಕಾದಂಬರಿಕಾರ ಚಂದ್ರಕಾಂತ ಕುಸನೂರ ಅವರು ತಮ್ಮ 90 ನೇ ವಯಸ್ಸಿನಲ್ಲಿ ಶನಿವಾರ (19 ಏಪ್ರಿಲ್ 2020) ರ ರಾತ್ರಿ ವಯೋಸಹಜ ಕಾಯಿಲೆಯಿಂದ ಬೆಳಗಾವಿಯಲ್ಲಿ ನಿಧನರಾದರು.

* ಚಂದ್ರಕಾಂತ ಕುಸನೂರ ಅವರು ಕನ್ನಡದ ಖ್ಯಾತ ಸಾಹಿತಿ ಹಾಗು ರಂಗಕರ್ಮಿಯಾಗಿದ್ದರು.

*1931ರಲ್ಲಿ ಕಲಬುರ್ಗಿಯ ಕುಸನೂರಲ್ಲಿ ಜನನ

*ಕಲಬುರಗಿಯಲ್ಲಿ "ರಂಗ ಮಾಧ್ಯಮ" ಎಂಬ ನಾಟಕ ಸಂಸ್ಥೆಯ ಸ್ಥಾಪಕರಾಗಿದ್ದು

* 1975ರಲ್ಲಿ 'ಯಾತನಾ ಶಿಬಿರ' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡಮಿಯ ಪುರಸ್ಕಾರ ಲಭಿಸಿದೆ.

* 1992ರಲ್ಲಿ ಕರ್ನಾಟಕ ನಾಟಕ ಅಕಾಡಮಿ ಗೌರವ ಪ್ರಶಸ್ತಿ ನೀಡಲಾಗಿದೆ ಮತ್ತು 2006 ನೇ ಸಾಲಿನಲ್ಲಿ ನಾಡೋಜ ಪ್ರತಿಷ್ಠಾನದ ಅರವಿಂದ ಪ್ರಶಸ್ತಿ ದೊರೆತಿದೆ.

19 04 2020 ಡೆಮೊ 2ಮಿಷನ್:ನಾಸಾ11ವರ್ಷಗಳನಂತರಮೊದಲಬಾರಿಗೆ ಗಗನಯಾತ್ರಿಗಳನ್ನುಬಾಹ್ಯಾಕಾಶಕ್ಕೆಕಳುಹಿಸಲಿದೆ




ನಾಸಾ ತನ್ನ ಗಗನಯಾತ್ರಿಗಳನ್ನು ಬಾಹಾಕ್ಯಾಶಕ್ಕೆ ಕಳುಹಿಸುವ ಯೋಜನೆಯನ್ನು ಇದೆ ಮೇ 27, 2020 ರಂದು ಪ್ರಾರಂಭಿಸುವುದಾಗಿ ಘೋಷಿಸಿದೆ.

* ಈ ಮಿಷನ್ ಗಾಗಿ ಫಾಲ್ಕನ್ 9 ರಾಕೆಟ್ ಅನ್ನು ಬಳಸಲಾಗುವದು.

* ಗಗನಯಾತ್ರಿಗಳನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಿ ಕಾರ್ಯಾಚರಣೆಯನ್ನು ಆರಂಭಿಸಲಾಗುವದು. ಡೆಮೊ 2 ಮಿಷನ್ : ನಾಸಾದ ಡೆಮೊ 1 ಮಿಷನ್ ಅನ್ನು ಸ್ಪೇಸ್ಎಕ್ಸ್ ಪ್ರಾರಂಭಿಸಿತು. ಡೆಮೊ 1 ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಉಡಾವಣೆಯಾದ ಮೊದಲ ಪರೀಕ್ಷಿಸಿದ ಹಾರಾಟವಾಗಿದೆ.

# Current affairs of April 2020 from KPSC Vaani

19 04 2020 ನೈಜೀರಿಯಾದ ಅಧ್ಯಕ್ಷ ಮುಹಮ್ಮದು ಬುಹಾರಿ ಅವರಮುಖ್ಯಸಹಾಯಕ ಕರೋನಸೋಂಕಿನಿಂದನಿಧನ



ನೈಜೀರಿಯಾದ ಅಧ್ಯಕ್ಷ ಮುಹಮ್ಮದು ಬುಹಾರಿ ಅವರಮುಖ್ಯ ಸಹಾಯಕ ಅಬ್ಬಾ ಕ್ಯಾರಿ ಅವರು ಏಪ್ರಿಲ್ 17, 2020 ರಂದು COVID 19 ಸೋಂಕಿನಿಂದ ನಿಧನರಾದರು. ಹಲವು ದಿನಗಳಿಂದ ಅವರು ಕರೋನ ಸೋಂಕಿಗೆ ಚಿಕಿತ್ಸೆ ಪಡೆಯುತ್ತಿದ್ದರು.

* ಅಬ್ಬಾ ಕಯಾರಿ(Abba Kyari) : ಅಬ್ಬಾ ಕ್ಯಾರಿ ನೈಜೀರಿಯಾದ ಅಧ್ಯಕ್ಷ ಮುಹಮ್ಮದು ಬುಹಾರಿ ಅವರ ಮುಖ್ಯ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಅವರು ಮಾಜಿ ಮಿಲಿಟರಿ ಆಡಳಿತಗಾರರಾಗಿದ್ದರು.
* ಮುಹಮ್ಮದು ಬುಹಾರಿ : ಮುಹಮ್ಮದು ಬುಹಾರಿ ನೈಜೀರಿಯಾದ ಪ್ರಸ್ತುತ ಅಧ್ಯಕ್ಷರಾಗಿದ್ದಾರೆ. ಮತ್ತು ಅವರು 1983 ಮತ್ತು 1985 ರ ನಡುವೆ ಮಿಲಿಟರಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. 2014 ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ವಿಜಯ ಸಾಧಿಸಿ ಪ್ರಸ್ತುತ ನೈಜೀರಿಯಾದ ಅಧ್ಯಕ್ಷರಾಗಿ ಸೇವೆಸಲ್ಲಿಸುತ್ತಿದ್ದಾರೆ.

20 04 2020 ಏಪ್ರಿಲ್20:UNಚೈನೀಸ್ ಭಾಷಾ ದಿನ



ಪ್ರತಿ ವರ್ಷ, ಏಪ್ರಿಲ್ 20 ರಂದು ವಿಶ್ವಸಂಸ್ಥೆಯಿಂದ ಚೀನೀ ಭಾಷಾ ದಿನವನ್ನು ಆಚರಿಸಲಾಗುತ್ತದೆ. ಚೀನೀ ಅಕ್ಷರಗಳನ್ನು ಕಂಡುಹಿಡಿದ ಪೌರಾಣಿಕ ವ್ಯಕ್ತಿಯಾದ ಕ್ಯಾಂಗ್ಜಿ(Cangjie)ಗೆ ಗೌರವ ಸಲ್ಲಿಸಲು ಈ ದಿನವನ್ನು ವಿಶ್ವಸಂಸ್ಥೆಯಿಂದ ಆಚರಿಸಲಾಗುತ್ತದೆ.

* ಮೊದಲ ಬಾರಿಗೆ ವಿಶ್ವಸಂಸ್ಥೆಯಿಂದ ಚೀನಿ ಭಾಷಾ ದಿನವನ್ನು 2010 ರಲ್ಲಿ ಆಚರಿಸಲಾಯಿತು.
* ಚೀನಾದ ಈ ವ್ಯಕ್ತಿ ಕ್ಯಾಂಗ್ಜಿ(Cangjie)ಯು ನಾಲ್ಕು ಕಣ್ಣುಗಳನ್ನು ಹೊಂದಿದ್ದರು ಎಂದು ನಂಬಲಾಗಿದೆ. ಅಲ್ಲದೆ, ಇವರು ಚೀನೀ ಅಕ್ಷರಗಳನ್ನು ಕಂಡುಹಿಡಿಯುವಾಗ ದೇವತೆಗಳು ಮತ್ತು ದೆವ್ವಗಳು ಅಳುತ್ತವೆ ಮತ್ತು ರಾಗಿ ಮಳೆ ಸಂಭವಿಸಿದೆ ಎಂದು ನಂಬಿಕೆಯಿದೆ.

# Current affairs of April 2020 from KPSC Vaani

## 20 04 2020 ವಿದ್ಯುತ್‌ವಾಹನಮಾರಾಟವು2020 21ರಲ್ಲಿ20% ಹೆಚ್ಚಾಗುತ್ತದೆ



ಎಲೆಕ್ಟ್ರಿಕ್ ವಾಹನಗಳ ತಯಾರಕರ ಸೊಸೈಟಿ (Society of Manufacturers of Electric Vehicles) (SMEV) ಎಲೆಕ್ಟ್ರಿಕ್ ವಾಹನಗಳ ಮಾರಾಟದ ಕುರಿತಾದ ತನ್ನ ಡೇಟಾವನ್ನು ಬಿಡುಗಡೆ ಮಾಡಿದೆ. ಈ ವರದಿಯನುಸಾರ, 2019 20ರ ಆರ್ಥಿಕ ವರ್ಷದಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾರಾಟವು 20% ಹೆಚ್ಚಾಗಿದೆ.

* 2018 19ರಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾರಾಟದಲ್ಲಿ 3,600ಕಾರುಗಳು, 1,26,000ದ್ವಿಚಕ್ರ ವಾಹನಗಳು ಮತ್ತು 400ಬಸ್ಸುಗಳು ಸೇರಿವೆ.
* 2019 20ನೇ ಸಾಲಿನ ಎಲೆಕ್ಟ್ರಿಕ್ ವಾಹನಗಳ ಮಾರಾಟದಲ್ಲಿ 3,400 ಕಾರುಗಳು, 152,000 ದ್ವಿಚಕ್ರ ವಾಹನಗಳು ಮತ್ತು 600 ಬಸ್ಸುಗಳು ಸೇರಿವೆ.
* ದೇಶದಲ್ಲಿ ಎಲೆಕ್ಟ್ರಿಕ್ ಕಾರುಗಳ ಬೃಹತ್ ಖರೀದಿಯ ಕೊರತೆಯಿಂದಾಗಿ ಕಾರುಗಳ ಮಾರಾಟವು ಮುಖ್ಯವಾಗಿ ಕುಸಿದಿದೆ.
* 2019 20ನೇ ಸಾಲಿನಲ್ಲಿ ಸುಮಾರು 90,000ಇ ರಿಕ್ಷಾಗಳು ಮಾರಾಟವಾಗಿವೆ.

## 20 04 2020 ಭಾರತೀಯ ವಿಜ್ಞಾನಿಗಳಿಂದ ಅಯಾನುಗೋಳದ ಎಲೆಕ್ಟ್ರಾನ್ ಸಾಂದ್ರತೆ ಅಂದಾಜಿಸಲುನೂತನಮಾದರಿಅನ್ವೇಷನೆ



ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜಿಯೋಮ್ಯಾಗ್ನೆಟಿಸಮ್(Indian Institute of Geomagnetism)ನ ಸಂಶೋಧಕರು ಅಯಾನುಗೋಳದ ಎಲೆಕ್ಟ್ರಾನಿಕ್ ಸಾಂದ್ರತೆಯನ್ನು ಅಂದಾಜಿಸುವ ನೂತನ ಮಾದರಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಮಾದರಿಯ ಅನ್ವೇಷಣೆಯು ಭೂಮಿಯ ಮೇಲಿನ ಸಂವಹನ ಮತ್ತು ಸಂಚರಣೆಗಾಗಿ ಅನುಕೂಲವಾಗಲಿದೆ. 20 ವರ್ಷಗಳಿಗಿಂತ ಹೆಚ್ಚು ಕಾಲ ಸಂಗ್ರಹಿಸಿದ ಡೇಟಾವನ್ನು ಬಳಸಿಕೊಂಡು ಮಾದರಿಯನ್ನು ಅಭಿವೃದ್ಧಿಪಡಿಸಲಾಗಿದೆ.

# Current affairs of April 2020 from KPSC Vaani

20 04 2020 ಏರ್‌ಏಷ್ಯಾ ಸಿಬ್ಬಂದಿ ವೇತನದಲ್ಲಿ ಶೇ. 20 ರಷ್ಟು ಕಡಿತಗೊಳಿಸಲು ನಿರ್ಧಾರ




ಮುಂಬೈ: ದೇಶದಲ್ಲಿ ವಿಧಿಸಿರುವ ಲಾಕ್‌ಡೌನ್ ಹಿನ್ನೆಲೆಯಲ್ಲಿ ವಿಮಾನ ಹಾರಾಟ ಸ್ಥಗಿತವಾಗಿದ್ದು ಇದರಿಂದ ಎಲ್ಲ ವಿಮಾನಯಾನ ಸಂಸ್ಥೆಗಳು ತೀವ್ರ ನಷ್ಟದಲ್ಲಿವೆ, ಇದೆ ಕಾರಣದಿಂದಾಗಿ ಏರ್‌ಏಷ್ಯಾ ಇಂಡಿಯಾ ವಿಮಾನ ಯಾನ ಸಂಸ್ಥೆಯು ತನ್ನ ಸಿಬ್ಬಂದಿಯ ಏಪ್ರಿಲ್ ವೇತನದಲ್ಲಿ ಶೇ. 20 ರಷ್ಟು ಕಡಿತಗೊಳಿಸಿದೆ ಎಂದು ಮೂಲಗಳ ಪ್ರಕಾರ ತಿಳಿದುಬಂದಿದೆ.
* ತಿಂಗಳಿಗೆ 50,000 ರೂ ಅಥವಾ ಅದಕ್ಕಿಂತ ಕಡಿಮೆ ವೇತನ ಪಡೆಯುವವರಿಗೆ ಇದು ಅನ್ವಯವಾಗುವುದಿಲ್ಲ.

21 04 2020 ಶೀಘ್ರದಲ್ಲೇ₹20ರೂಪಾಯಿಹೊಳೆಯುವನಾಣ್ಯ ಬಿಡುಗಡೆ




ನವದೆಹಲಿ : ಭಾರತೀಯ ಕರೆನ್ಸಿಯಲ್ಲಿ ಈಗಾಗಲೇ ವಿವಿಧ ಮುಖಬೆಲೆಯ ನಾಣ್ಯಗಳು ಚಲಾವಣೆಯಲ್ಲಿವೆ. ಈಗ ಈ ಪಟ್ಟಿಗೆ ಮತ್ತೊಂದು ನಾಣ್ಯವನ್ನು ಸೇರಿಸಲಾಗುವುದು. ಶೀಘ್ರದಲ್ಲೇ RBI ನಿಂದ 20 ರೂಪಾಯಿ ಮುಖಬೆಲೆಯ ನಾಣ್ಯವನ್ನು ಬಿಡುಗಡೆಗೊಳಿಸಲಾಗುವದು. ಇದೆ ಮೊದಲ ಬಾರಿಗೆ ಭಾರತದಲ್ಲಿ 20 ರೂಪಾಯಿ ಮುಖಬೆಲೆಯ ನಾಣ್ಯಗಳು ಚಲಾವಣೆಗೆ ಬರಲಿವೆ.
* ಶೀಘ್ರದಲ್ಲೇ ಆರ್‌ಬಿಐ ಈ ನಾಣ್ಯಗಳನ್ನು ಬ್ಯಾಂಕ್‌ಗಳಿಗೆ ನೀಡಲಿದೆ. ಮುಂಬೈ, ಕೋಲ್ಕತಾ, ನೋಯ್ಡಾ ಮತ್ತು ಹೈದರಾಬಾದ್ ಟಂಕಸಾಲಾಗಳಲ್ಲಿ 20 ರೂಪಾಯಿ ನಾಣ್ಯಗಳನ್ನು ತಯಾರಿಸಲಾಗುತ್ತಿದೆ.
* ಹಣಕಾಸು ಸಚಿವಾಲಯದ ಅಧಿಸೂಚನೆಯ ಪ್ರಕಾರ ಈ ನಾಣ್ಯವು 12 ಮೂಲೆಗಳನ್ನು ಹೊಂದಿರುತ್ತದೆ.
* 11 ವರ್ಷಗಳ ನಂತರ ಹೊಸ ನಾಣ್ಯವನ್ನು ನೀಡಲಾಗುತ್ತಿದೆ. ಇದಕ್ಕೂ ಮೊದಲು ಮಾರ್ಚ್ 2009ರಲ್ಲಿ 10 ರೂಪಾಯಿ ನಾಣ್ಯವನ್ನು ಬಿಡುಗಡೆಗೊಳಿಸಲಾಗಿತ್ತು.
* ಈನಾಣ್ಯವು20ಎಂಎಂವ್ಯಾಸವನ್ನುಹೊಂದಿರುತ್ತದೆ.
*₹20ನಾಣ್ಯವು₹10ನಾಣ್ಯದಂತೆ2 ಉಂಗುರಗಳನ್ನುಹೊಂದಿರುತ್ತದೆ.
*ಮೇಲಿನಉಂಗುರವು65ಪ್ರತಿಶತತಾಮ್ರ,15ಪ್ರತಿಶತಸತು ಮತ್ತು20ಪ್ರತಿಶತನಿಕ್ಕಲ್‌ಅನ್ನು ಹೊಂದಿರುತ್ತದೆ.

# Current affairs of April 2020 from KPSC Vaani

21 04 2020 ಟಾಮ್ ಆಯಂಡ್ ಜೆರ್ರಿ ಮತ್ತು ಪಾಪಾಯ್ ನಿರ್ದೇಶಕ ಡೀಚ್ ನಿಧನ



ವಿಶ್ವಪ್ರಸಿದ್ಧ ಟಾಮ್ ಆಯಂಡ್ ಜೆರ್ರಿ ಮತ್ತು ಪಾಪಾಯ್ ಕಾರ್ಟೂನ್‌ಗಳನ್ನು ನಿರ್ದೇಶಿಸಿದ್ದ ಜೀನ್ ಡೀಚ್(95) ಅವರು ನಿಧನರಾದರು.

* ಯುಜೀನ್ ಮೆರಿಲ್ ಡೀಚ್ ಎಂಬ ಪೂರ್ಣ ಹೆಸರಿನ ಜೀನ್ ಡೀಚ್ ಅವರು 1924ರಲ್ಲಿ ಜನಿಸಿದ್ದರು.
* 1960ರಲ್ಲಿ ಅಕಾಡೆಮಿ ಪ್ರಶಸ್ತಿ ಪಡೆದಿದ್ದಇವರು ಹಲವಾರು ಪ್ರಸಿದ್ಧ ಕಾರ್ಟೂನ್‌ಗಳನ್ನು ನಿರ್ದೇಶಿಸಿದ್ದರು.
* ವಿಶ್ವ ಪ್ರಸಿದ್ಧ ಕಾರ್ಟೂನ್ ಟಾಮ್ ಅಯಂಡ್ ಜೆರ್ರಿ ಮತ್ತು ಪಾಪಾಯ್ ಕಾರ್ಟೂನ್ ನಿರ್ದೇಶಿಸಿದ್ದರು.
* ಆಸ್ಕರ್ ಪ್ರಶಸ್ತಿ ಪುರಸ್ಕೃತರಾಗಿದ್ದರು.

21 04 2020 ಕೇಂದ್ರಸರ್ಕಾರದಿಂದರಾಜ್ಯಗಳಪಾಲಿನತೆರಿಗೆಹಣಬಿಡುಗಡೆ



ನವದೆಹಲಿ : ದೇಶದಲ್ಲಿ ವಿಧಿಸಿರುವ ಕೊರೋನಾ ಲಾಕ್‌ಡೌನ್ ನ ಈ ಸಮಯದಲ್ಲಿ ಕೇಂದ್ರ ಸರ್ಕಾರವೂ ಎಲ್ಲ ರಾಜ್ಯಗಳಿಗೆ ನೀಡಬೇಕಾದ ತೆರಿಗೆ ಹಣವನ್ನು ಆಯಾ ರಾಜ್ಯಗಳಿಗೆ ನೀಡಿದೆ. ಕೇಂದ್ರವು ಒಟ್ಟು 46,038.70 ಕೋಟಿ ರೂ. ತೆರಿಗೆ ಹಣವನ್ನು ಬಿಡುಗಡೆ ಮಾಡಿದೆ. 2020 21 ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನ, ಜಿಎಸ್‌ಟಿ ಪರಿಹಾರ ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆಗಳ ಪೈಕಿ ರಾಜ್ಯ ಸರ್ಕಾರಗಳಿಗೆ ಹತ್ತಾರು ಸಾವಿರ ಕೋಟಿಗಳಷ್ಟು ಅನುದಾನ ನೀಡಬೆಕಿದ್ದ ಕೇಂದ್ರ ಸರ್ಕಾರವು ಅದರಂತೆಯೇ ಎಲ್ಲಾ ರಾಜ್ಯಗಳ ಪಾಲಿನ ತೆರಿಗೆ ಅನುದಾನ ಬಿಡುಗಡೆ ಮಾಡಿದ್ದು, ಮೊದಲ ಕಂತಿನಲ್ಲಿ ಕರ್ನಾಟಕಕ್ಕೆ 1678ಕೋಟಿ ರೂ. ನೀಡಲಾಗಿದೆ.

# Current affairs of April 2020 from KPSC Vaani

21 04 2020 ಭಾರತದFDIನೀತಿಗೆಬದಲಾವಣೆವಿರೋಧಿಸುತ್ತಿರುವಚೀನಾ



ಇತ್ತೀಚೆಗಷ್ಟೇ ಭಾರತವು ತನ್ನ ವಿದೇಶಿ ಹೂಡಿಕೆ ನಿಯಮದಲ್ಲಿ ಬದಲಾವಣೆ ಮಾಡಿದ್ದು, ಭಾರತದ ಈ ನಿರ್ಧಾರವನ್ನು ಚೀನಾ ವಿರೋಧಿಸಿದೆ ಹಾಗೂ ಇದು ಜಿ20 ನಿಯಮಗಳಿಗೆ ವಿರುದ್ಧವಾಗಿದ್ದಲ್ಲದೆ ಮುಕ್ತ ವ್ಯಾಪಾರದ ಸಾಮಾನ್ಯ ನಿಯಮಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದೆ.

21 04 2020 ವಲಸೆಯನ್ನು ನಿಷೇಧಿಸಿದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್



ವಾಷಿಂಗ್ಟನ್ : ಮಾರಣಾಂತಿಕ ಕೊರೊನಾ ವೈರಸ್ ದಾಳಿಯಿಂದಾಗಿ ತತ್ತರಿಸಿದ ಅಮೆರಿಕಾ ದೇಶವು ವಲಸೆ ಬರುವ ಹೊರ ದೇಶದವರಿಗೆ ತಾತ್ಕಾಲಿಕ ನಿರ್ಬಂಧ ವಿಧಿಸುವ ಆದೇಶ ಪ್ರಕಟಿಸಿದೆ. ಈ ಕುರಿತು ಅಧಿಕೃತವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಅಧ್ಯಕ್ಷ ಟ್ರಂಪ್ ಘೋಷಿಸಿಕೊಂಡಿದ್ದಾರೆ. ಇದರಿಂದಾಗಿ ಉದ್ಯೋಗ, ವ್ಯಾಸಂಗ ಮತ್ತಿತರ ಉದ್ದೇಶಗಳಿಗಾಗಿ ಅಮೆರಿಕಕ್ಕೆ ತೆರಳಬೇಕಿದ್ದ ಲಕ್ಷಾಂತರ ಭಾರತೀಯರ ಭವಿಷ್ಯ ಅತಂತ್ರವಾಗುವ ಸಾಧ್ಯತೆ ಇದೆ.

* ಕೊರೊನಾ ಹಾವಳಿಯಿಂದಾಗಿ ಉದ್ಯೋಗ ಕಳೆದುಕೊಂಡ ಲಕ್ಷಾಂತರ ಅಮೆರಿಕನ್ನರ ಹಿತಾಸಕ್ತಿ ಮತ್ತು ರಕ್ಷಣೆಗಾಗಿ ಅನ್ಯ ದೇಶಗಳ ವಲಸಿಗರಿಗೆ ನಿರ್ಬಂಧ ಹೇರಲು ಅಮೇರಿಕಾ ಮುಂದಾಗಿದೆ.

# Current affairs of April 2020 from KPSC Vaani

22 04 2020 ಕೋರೋಣ ಲ್ಯಾಬ್‌ನಲ್ಲಿ ರೂಪುಗೊಂಡಿದ್ದಲ್ಲ, ಪ್ರಾಣಿಗಳಿಂದ ಹಬ್ಬಿರಬಹುದು: WHO



ಜಿನೀವಾ : ಕರೊನಾ ಸೋಂಕು ಕಳೆದ ವರ್ಷ ಚೀನಾ ರಾಷ್ಟ್ರದಲ್ಲಿ ಹುಟ್ಟಿದೆಯಾದರು ಅದನ್ನು ಲ್ಯಾಬ್ ನಲ್ಲಿ ಕೃತಕವಾಗಿ ಸೃಷ್ಟಿಸಿದಲ್ಲ ಬದಲಾಗಿ ಅದು ದಲ್ಲೇ ಹುಟ್ಟಿಕೊಂಡಿದ್ದಾದರೂ ಯಾವುದೇ ಪ್ರಯೋಗಾಲಯದಲ್ಲಿ ಸೃಷ್ಟಿಸಿದ್ದಲ್ಲ ಬದಲಾಗಿ ಅದು ಪ್ರಾಣಿಗಳಿಂದ ಹುಟ್ಟುಕೊಂಡಿರಬಹುದೆಂದು ವಿಶ್ವ ಆರೋಗ್ಯ ಸಂಸ್ಥೆ(WHO) ಮಂಗಳವಾರ ಸ್ಪಷ್ಟಪಡಿಸಿದೆ.

* ಚೀನಾದ ಪ್ರಯೋಗಾಲಯದಲ್ಲಿಯೇ ಉದ್ದೇಶಪೂರ್ವಕವಾಗಿ ಈ ವೈರಸ್ಸನ್ನು ಸೃಷ್ಟಿಸಲಾಗಿದೆ ಎಂದು ಹಲವು ಹಲವು ರಾಷ್ಟ್ರಗಳು ಆರೋಪಿಸಿದ ಬೆನ್ನಲ್ಲೆ, ವಿಶ್ವ ಆರೋಗ್ಯ ಸಂಸ್ಥೆ, ಇದಕ್ಕೆ ತದ್ವಿರುದ್ಧವಾದ ಹೇಳಿಕೆ ನೀಡುವ ಮೂಲಕ ಚೇನಾಕ್ಕೆ ಕ್ಲೀನ್ ಚಿಟ್ ನೀಡಿದಂತಾಗಿದೆ.

22 04 2020 ಏಪ್ರಿಲ್ 22 ವಿಶ್ವ ಭೂಮಿ ದಿನ




ನವದೆಹಲಿ: ವಿಶ್ವದಾದ್ಯಂದ ಏಪ್ರಿಲ್ 22 ನ್ನು ವಿಶ್ವ ಭೂ ದಿನವನ್ನು ಆಚರಿಸಲಾಗುತ್ತದೆ. ಪರಿಸರ ಸಂರಕ್ಷಣೆಗೆ ಬೆಂಬಲವನ್ನು ಪ್ರದರ್ಶಿಸಲು ಪ್ರತಿ ವರ್ಷ ಏಪ್ರಿಲ್ 22 ರಂದು ವಿಶ್ವದಾದ್ಯಂತ ವಿಶ್ವ ಭೂ ದಿನವನ್ನಾಗಿ ಆಚರಿಸಲಾಗುವದು.

* 1970 ರಲ್ಲಿ ಮೊದಲ ಬಾರಿಗೆ ಆಚರಿಸಲ್ಪಟ್ಟ ಇದು ಈಗ 193 ಕ್ಕೂ ಹೆಚ್ಚು ದೇಶಗಳಲ್ಲಿ ಆಚರಿಸಲ್ಪಡುತ್ತಿದೆ.

* ಭೂ ದಿನ 2016 ರಂದು "ಪ್ಯಾರಿಸ್ ಒಪ್ಪಂದ"ಕ್ಕೆ ಯುನೈಟೆಡ್ ಸ್ಟೇಟ್ಸ್, ಚೀನಾ ಮತ್ತು ಇತರ 120ದೇಶಗಳು ಸಹಿ ಹಾಕಿದವು.

# Current affairs of April 2020 from KPSC Vaani

22 04 2020 ಕೊರೊನಾ ವಿರುದ್ಧ ಹೋರಾಟಕ್ಕೆ ರಾಜ್ಯ ಸರ್ಕಾರದಿಂದ 'ಆಪ್ತಮಿತ್ರ' ಸಹಾಯವಾಣಿ ಆರಂಭ




ಬೆಂಗಳೂರು : ಕೋರೋಣ ವೈರಸ್ ವಿರುದ್ಧ ಹೋರಾಡಲು ರಾಜ್ಯ ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿದ್ದು ಇವುಗಳ ಜೊತೆಗೆ ಈಗ ಆಪ್ತಮಿತ್ರ ಆಯಪ್‌ಗೆ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಚಾಲನೆ ನೀಡಿದ್ದಾರೆ.

* ಈ ಸಹಾಯವಾಣಿಯಿಂದ ಕೊರೊನಾ ಸೋಂಕಿನ ಲಕ್ಷಣವುಳ್ಳವರು ಈ ಕುರಿತು ಮಾಹಿತಿ ಬೇಕಾದವರು ಈ ಆಪ್ತಮಿತ್ರ ಸಹಾಯವಾಣಿ 14410 ಸಂಖ್ಯೆಗೆ ಕರೆ ಮಾಡಿ ಮಾರ್ಗದರ್ಶನ ಪಡೆಯಬಹುದಾಗಿದೆ.
* ಈ ಸಹಾಯವಾಣಿಗೆ ಬಳಸುವ ಆಯಪ್ ನ್ನು ಇನ್ಫೋಸಿಸ್ ಉಚಿತವಾಗಿ ತಯಾರಿಸಿ ಸರ್ಕಾರಕ್ಕೆ ನೀಡಿದೆ

23 04 2020 ಪುಂಡರ ನಿಗ್ರಹಿಸಲು ಕೇಂದ್ರ, ರಾಜ್ಯ ಸರ್ಕಾರದಿಂದ 'ಸುಗ್ರೀವಾಜ್ಞೆ'



ದೇಶದಲ್ಲಿ ವ್ಯಾಪಿಸಿರುವ ಕೋರೋನಾ ಸೋಂಕಿನ ವಿರುದ್ಧದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ವೈದ್ಯರು, ವೈದ್ಯಕೀಯ ಸಿಬ್ಬಂದಿ, ಪೊಲೀಸ್ ಹಾಗೂ ಸೇವಾನಿರತರ ಮೇಲೆ ದೇಶದ ವಿವಿಧ ಭಾಗಗಳಲ್ಲಿ ಹಲ್ಲೆಗಳು ನಡೆದ ಪ್ರಕರಣಗಳು ವರದಿಯಾದ ಬೆನ್ನಲ್ಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕೋರೋಣ ಯೋಧರ ರಕ್ಷಣೆಗೆ ಸುಗ್ರೀವಾಜ್ಞೆ ಹೊರಡಿಸಲಾಗಿದೆ.

* ಕೇಂದ್ರ ಸರ್ಕಾರದ ಹೊಸ ಕಾನೂನಿನ ಪ್ರಕಾರ ಹಲ್ಲೆಕೋರರಿಗೆ 7ವರ್ಷ ಜೈಲು 5 ಲಕ್ಷ ರೂಪಾಯಿ ದಂಡ ಶಿಕ್ಷೆ ನೀಡಲು ಕಾನೂನು ತರಲಾಗಿದೆ.
* ಅದೇ ರೀತಿ ರಾಜ್ಯದಲ್ಲಿ ಹಲ್ಲೆಕೋರರಿಗೆ 5 ಲಕ್ಷ ರೂಪಾಯಿವರೆಗೆ ದಂಡ, ಆಸ್ತಿ ಹಾನಿ ಮಾಡಿದರೆ ದುಪ್ಪಟ್ಟು ದಂಡ ವಸೂಲಿ ಜೊತೆಗೆ 3 ವರ್ಷವರೆಗೆ ಜೈಲು ಶಿಕ್ಷೆ ವಿಧಿಸಲು ಸುಗ್ರೀವಾಜ್ಞೆ ಹೊರಡಿಸಲಾಗಿದೆ.

# Current affairs of April 2020 from KPSC Vaani

23 04 2020 'ಐ ಆಯಮ್ ಬ್ಯಾಡ್ಮಿಂಟನ್' ನೂತನ ಪ್ರಚಾರ ರಾಯಭಾರಿ ಯಾಗಿ ಪಿವಿ. ಸಿಂಧೂ ಆಯ್ಕೆ



ಕೌಲಾಲಂಪುರ(ಮಲೇಷ್ಯಾ): ಬ್ಯಾಡ್ಮಿಂಟನ್ ವಿಶ್ವ ಫೆಡರೇಷನ್ (ಬಿಡಬ್ಲ್ಯು ಎಫ್) ಆರಂಭಿಸಿರುವ 'ಐ ಆಯಮ್ ಬ್ಯಾಡ್ಮಿಂಟನ್ 'ಜಾಗೃತಿ ಅಭಿಯಾನದ ರಾಯಭಾರಿಗಳಲ್ಲಿ ಒಬ್ಬರಾಗಿ ಭಾರತದ ವಿಶ್ವ ಚಾಂಪಿಯನ್ ಪಿ.ವಿ. ಸಿಂಧೂ ಅವರು ಆಯ್ಕೆಯಾಗಿದ್ದಾರೆ.

* 'ಐ ಆಯಮ್ ಬ್ಯಾಡ್ಮಿಂಟನ್ 'ಜಾಗೃತಿ ಅಭಿಯಾನ : ಈ ಅಭಿಯಾನವು ಆಟಗಾರರನ್ನು ಬ್ಯಾಡ್ಮಿಂಟನ್ ಕುರಿತು ತಮ್ಮ ಪ್ರೀತಿ ಮತ್ತು ಗೌರವವನ್ನು ವ್ಯಕ್ತಪಡಿಸಲು ಹಾಗೂ ಸ್ವಚ್ಛ ಹಾಗೂ ಪ್ರಾಮಾಣಿಕ ಆಟವನ್ನು ಉತ್ತೇಜಿಸಲು ವೇದಿಕೆಯನ್ನು ಒದಗಿಸುತ್ತದೆ.

23 04 2020 2ನೇಮಹಾಯುದ್ಧದಬಳಿಕ ಮೊದಲ ಬಾರಿ'ಸ್ಪೆಲಿಂಗ್‌ಬೀ' ರದ್ದು




ವಾಶಿಂಗ್ಟನ್ :2020ನೇ ಸಾಲಿನ ಪ್ರತಿಷ್ಠಿತ 'ಸ್ಪೆಲಿಂಗ್ ಬೀ' ಸ್ಪರ್ಧೆಯನ್ನು ಕೊರೋನ ವೈರಸ್ ಸಾಂಕ್ರಾಮಿಕ ಜಗತ್ತಿನಾದ್ಯಂತ ವ್ಯಾಪಿಸುತ್ತಿರುವ ಹಿನ್ನೆಲೆ ರದ್ದುಪಡಿಸಲಾಗಿದ್ದು, ಇದು ಎರಡನೇ ಮಹಾಯುದ್ಧ ನಡೆದ ಬಳಿಕ ಮೊದಲನೇ ಬಾರಿ ರದ್ದುಪಡಿಸಲಾಗಿದೆ.

* ಪ್ರಾಥಮಿಕ ಶಾಲೆ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ನಡೆಸಲಾಗುವ ಈ ಸ್ಪರ್ಧೆಯ ಮುಂದಿನ ಆವೃತ್ತಿ ಇನ್ನು 2021 ಜೂನ್ 1ರಂದು ನಡೆಯಲಿದೆ.

* ಈ ಸ್ಪರ್ಧೆಯಲ್ಲಿ ಹಲವು ವರ್ಷಗಳಿಂದ ಭಾರತೀಯ ಮೂಲದ ಅಮೆರಿಕನ್ನರು ಮೇಲುಗೈ ಸಾಧಿಸಿರುವದು ವಿಶೇಷ.

# Current affairs of April 2020 from KPSC Vaani

23 04 2020 ಕೊರೋನಾ ವೈರಸ್ ದೀರ್ಘಕಾಲದ ಸೋಂಕು ಎಚ್ಚರಿಕೆಯಿಂದಿರಿ:ವಿಶ್ವ ಆರೋಗ್ಯ ಸಂಸ್ಥೆ



ಜಿನೆವಾ(ಸ್ವಿಡ್ಜರ್ಲ್ಯಾಂಡ್) : ಕೋವಿಡ್ 19ಸೋಂಕುಈಭೂಮಿಮೇಲೆಕೆಲಸಮಯಗಳವರೆಗೆ ಇರಬಹುದಾದ ಸೋಂಕಾಗಿದ್ದು, ಇದನ್ನು ನಿಯಂತ್ರಿಸುವಲ್ಲಿ ಬಹುತೇಕ ರಾಷ್ಟ್ರಗಳು ಇನ್ನು ಮೊದಲ ಹೆಜ್ಜೆಯಲ್ಲಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಕೊರೋನಾ ವೈರಸ್ ಪ್ರಕರಣಗಳು ಕಡಿಮೆಯಾಗಿದ್ದನ್ನು ಪರಿಗಣಿಸಿ ನಿಯಂತ್ರಣದಲ್ಲಿದೆ ಎಂದು ಕೆಲ ದೇಶಗಳು ಭಾವಿಸಿದ್ದು, ಆದರೆ ಅಲ್ಲಿ ಮತ್ತೆ ಸೋಂಕು ಕಂಡುಬರುತ್ತಿದೆ, ದೇಶಗಳು ಈ ಬಗ್ಗೆ ಜಾಗ್ರತೆ ವಹಿಸಿ ಸನ್ನದ್ಧವಾಗುವಂತೆ ವಿಶ್ವಆರೋಗ್ಯಸಂಸ್ಥೆಜನವರಿ30ರಂದೇಇದನ್ನು"ಜಾಗತಿಕತುರ್ತು ಆರೋಗ್ಯಸಮಸ್ಯೆ"ಎಂದು ಘೋಷಿಸಿತ್ತು, ಎಂದು ವಿಶ್ವ ಆರೋಗ್ಯ ಸಂಸ್ಥೆ ಮುಖ್ಯಸ್ಥ ಟೆಡ್ರೊಸ್ ಅಧ್ಹನೊಮ್ ಗೆಬ್ರೆಯೆಸಸ್ ತಿಳಿಸಿದ್ದಾರೆ

23 04 2020 ಟೈಮ್ಸ್ ಜಾಗತಿಕ ಪ್ರಭಾವಿ 400 ವಿಶ್ವ ವಿದ್ಯಾಲಯಗಳ ಪಟ್ಟಿಯಲ್ಲಿ ಯೆನೆಪೊಯ




ಮಂಗಳೂರು :ಟೈಮ್ಸ್ ಹೈಯರ್ ಎಜ್ಯುಕೇಶನ್ (THE)ಪ್ರಭಾವಿ ಶ್ರೇಯಾಂಕ ಪಟ್ಟಿಯಲ್ಲಿ ಮೊದಲ ಬಾರಿ ಮಂಗಳೂರಿನ ಯೆನೆಪೊಯ (ಪರಿಗಣಿಸಲ್ಪಟ್ಟ ವಿಶ್ವವಿದ್ಯಾನಿಲಯ) ಭಾರತದಿಂದ ಜಾಗತಿಕ ಟಾಪ್ 500ರಲ್ಲಿ ಸ್ಥಾನಗಳಿಸಿದೆ.

* ಸುಸ್ಥಿರ ಅಭಿವೃದ್ಧಿ ಗುರಿಗಳ (ಎಸ್‌ಡಿಜಿ), ಉತ್ತಮ ಆರೋಗ್ಯ/ಯೋಗಕ್ಷೇಮ, ಗುಣಮಟ್ಟದ ಶಿಕ್ಷಣ ಮತ್ತು ಲಿಂಗ ಸಮಾನತೆ ವಿಭಾಗಗಳಲ್ಲಿ ಯೆನೆಪೊಯ ವಿವಿ ಅಗ್ರ 101 ರಿಂದ 200 ರ ಒಳಗಿನ ಸ್ಥಾನದಲ್ಲಿದೆ.

# Current affairs of April 2020 from KPSC Vaani

23 04 2020 WHOಗೆ30ಮಿಲಿಯನ್‌ಡಾಲರ್‌ಅನುದಾನನೀಡುವುದಾಗಿ ಘೋಷಿಸಿದ ಚೀನಾ



ಬೀಜಿಂಗ್ : ವಿಶ್ವ ಆರೋಗ್ಯ ಸಂಸ್ಥೆಗೆ(WHO) ಅಮೇರಿಕಾ ಅನುದಾನ ಸ್ಥಗಿತಗೊಳಿಸಿದ ಬೆನ್ನಲ್ಲೇ ಚೀನಾ 30 ಮಿಲಿಯನ್ ಡಾಲರು ನಷ್ಟು ಅನುದಾನವನ್ನು ನೀಡುವದಾಗಿ ಚೀನಾ ಹೇಳಿದೆ. ಕೋವಿಡ್ 19 ಸೋಂಕು ಕುರಿತು ವಿಶ್ವ ಆರೋಗ್ಯ ಸಂಸ್ಥೆ ಮೇಲೆ ಆರೋಪಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕದಿಂದ ನೀಡಲಾಗುತ್ತಿದ್ದ ಅನುದಾನವನ್ನು ಸ್ಥಗಿತಗೊಳಿಸಿದ್ದರು.

24 04 2020 ಕೊರೊನಾ ನಿರ್ವಹಣೆಯಲ್ಲಿ ವಿಶ್ವದಲ್ಲೇ ಮೋದಿ ನಂಬರ್ ಒನ್



ನವದೆಹಲಿ : ಕೊರೊನಾ ವೈರಸ್ ಸಮರ್ಥವಾಗಿ ನಿಭಾಯಿಸಿದ ವಿಶ್ವದ 10 ಪ್ರಮುಖ ದೇಶಗಳ ನಾಯಕರುಗಳ ಸಾಲಿನಲ್ಲಿ ಭಾರತದ ಪ್ರಧಾನಿ ಮೋದಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ದಿನಾಂಕ ಜನವರಿ 1 ರಿಂದ ಏಪ್ರಿಲ್ 14ರವರೆಗಿನ ಕೋರೋಣ ವೈರಸ್ ನಿರ್ವಹಣೆ ಕುರಿತ ಜಾಗತಿಕ ವರದಿಗಳನ್ನಾಧರಿಸಿ ಅಮೆರಿಕದ 'ಮಾರ್ನಿಂಗ್ ಕನ್ಸಲ್ಟ್' ಎಂಬ ಸಂಸ್ಥೆ ಸಮೀಕ್ಷೆ ನಡೆಸಿದ್ದು, ಈ ಸಮೀಕ್ಷೆಯ ವರದಿಯನುಸಾರ ಕೊರೊನಾ ವೈರಸ್ ಹಾವಳಿಯನ್ನು ಸಮರ್ಥವಾಗಿ ನಿಭಾಯಿಸಿದ ವಿಶ್ವದ 10 ಪ್ರಮುಖ ನಾಯಕರ ಪಟ್ಟಿಯಲ್ಲಿ ಪ್ರಧಾನಿ ಮೋದಿ ಅವರಿಗೆ ಮೊದಲನೇ ಸ್ಥಾನ ಪಡೆದಿದ್ದಾರೆ. ಅಗ್ರಸ್ಥಾನ ಪಡೆದ ನಾಯಕರು : ನರೇಂದ್ರ ಮೋದಿ ಭಾರತ, ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್ ಒಬ್ರಡಾರ್ ಮೆಕ್ಸಿಕೋ, ಬೋರಿಸ್ ಜಾನ್ಸನ್ ಇಂಗ್ಲೆಂಡ್, ಜೈರ್ ಬೋಲ್ಸನಾರೋ ಬ್ರೆಜಿಲ್, ಸ್ಕಾಟ್ ಮಾರಿಸನ್ ಆಸ್ಟ್ರಲೀಯಾ, ಜಸ್ಟಿನ್ ಟ್ರುಡೊ ಕೆನಡಾ, ಏಂಜೆಲಾ ಮಾರ್ಕೆಲ್ ಜರ್ಮನಿ, ಶಿಂಜೋ ಅಬೆ ಜಪಾನ್, ಇಮ್ಯಾನುಯೆಲ್ ಮ್ಯಾಕ್ರೋನ್ ಫ್ರಾನ್ಸ್, ಡೊನಾಲ್ಡ್ ಟ್ರಂಪ್ ಅಮೆರಿಕ.

# Current affairs of April 2020 from KPSC Vaani

## 24 04 2020 ಮತ್ತೆಏಷ್ಯಾದನಂಬರ್1ಶ್ರೀಮಂತನಾದಮುಕೇಶ್ಅಂಬಾನಿ




ಇತ್ತೀಚಿಗೆ ಮುಕೇಶ್ ಅಂಬಾನಿ ಏಷ್ಯಾದ ನಂಬರ್ 1 ಪಟ್ಟದಿಂದ ಕೆಳ ಜಾರಿದ್ದರು. ಆದರೆ ಇದೀಗ ಫೇಸ್‌ಬುಕ್ ಮತ್ತು Jio ಸಂಸ್ಥೆಗಳು ಜೊತೆ ಕೈ ಜೋಡಿಸಿದ್ದರ ಪರಿಣಾಮ ಅಂಬಾನಿ ಮತ್ತೊಮ್ಮೆ ಏಷ್ಯಾದ ನಂಬರ್ 1 ಶ್ರೀಮಂತನಾಗಿ ಹೊರಹೊಮ್ಮಿದ್ದಾರೆ. ಫೇಸ್‌ಬುಕ್ ಸಂಸ್ಥೆಯು ರಿಲಯನ್ಸ್ ಜಿಯೋದಲ್ಲಿ 5.7ಬಿಲಿಯನ್ ಅಮೆರಿಕನ್ ಡಾಲರ್ (43,574ಕೋಟಿ ರುಪಾಯಿ) ಗಳನ್ನು ಹೂಡಿಕೆ ಮಾಡಲು ನಿರ್ಧರಿಸಿದೆ. ಈ ನಿರ್ಧಾರ ಹೊರಬೀಳುತ್ತಿದ್ದಂತೆ ಅಂಬಾನಿಯು ಏಷ್ಯಾದ ಶ್ರೀಮಂತರ ಪಟ್ಟಿಯಿಂದ ಮೊದಲ ಸ್ಥಾನ ಪಡೆದಿದ್ದಾರೆ.

* ಫೇಸ್‌ಬುಕ್ ಮಾಲೀಕ ಮಾರ್ಕ್ ಜುಗರ್‌ಬರ್ಗ್ ಭಾರತದ ಬೃಹತ್ ಟೆಲಿಕಾಂ ಸಂಸ್ಥೆಯಾದ ರಿಲಯನ್ಸ್ ಜಿಯೋದ 10ಪರ್ಸೆಂಟ್ ಪಾಲು ಖರೀದಿಸಲಿದೆ.

## 24 04 2020 ಮುಂದಿನತಿಂಗಳುಭಾರತಕ್ಕೆ WHOಮುಖ್ಯಸ್ಥರಭೇಟಿ



ನವದೆಹಲಿ: ಇಡೀ ಜಗತ್ತು ಕರೊನಾ COVID 19 ಸೋಂಕಿನ ಕಾರಣಕ್ಕೆ ತಲ್ಲಣಗೊಂಡಿರುವ ಈ ಸಮಯದಲ್ಲಿಯೇ ವಿಶ್ವ ಆರೋಗ್ಯ ಸಂಸ್ಥೆಯ(WHO) ಎಕ್ಸಿಕ್ಯೂಟಿವ್ ಬೋರ್ಡ್‌ನ ಚೇರ್ಮನ್‌ಷಿಪ್ ಹುದ್ದೆ ಮುಂದಿನ ತಿಂಗಳು ಭಾರತಕ್ಕೆ ಸಿಗಲಿದೆ. ಪ್ರಸ್ತುತ ಈ ಹುದ್ದೆಯನ್ನು ಜಪಾನ್ ನಿವರ್ಹಿಸುತ್ತಿದೆ. ಈ ಚೇರ್‌ಪರ್ಸನ್ ಸ್ಥಾನಕ್ಕೆ ಭಾರತದ ಹೆಸರನ್ನು ಆಗ್ನೇಯ ಏಷ್ಯಾ ರಾಷ್ಟ್ರಗಳು ಕಳೆದ ವರ್ಷವೇ ಒಮ್ಮತದಿಂದ ನಾಮನಿರ್ದೇಶನ ಮಾಡಿದ್ದವು.

# Current affairs of April 2020 from KPSC Vaani



# Current affairs of April 2020 from KPSC Vaani

## 24 04 2020 ಕಳೆದ 20 ವರ್ಷಗಳಲ್ಲಿಯೇ ಭಾರತದಲ್ಲಿ ಕಡಿಮೆ ವಾಯು ಮಾಲಿನ್ಯ



ಕಳೆದ 2 ದಶಕಗಳ ಅವಧಿಯಲ್ಲಿ ಭಾರತ ದೇಶದ ವಾತಾವರಣದಲ್ಲಿ ಅತ್ಯಂತ ಕಡಿಮೆ ಮಟ್ಟದ ವಾಯು ಮಾಲಿನ್ಯ ದಾಖಲಾಗಿದೆ ಎಂದು ಅಮೆರಿಕ ಬಾಹ್ಯಾಕಾಶ ಸಂಸ್ಥೆ 'ನಾಸಾ' ತಿಳಿಸಿದೆ. ಕೋವಿಡ್ 19 ಸೋಂಕಿನಿಂದ ದೇಶದಲ್ಲಿ ವಿಧಿಸಿರುವ ಲಾಕ್‌ಡೌನ್ ನಿಂದಾಗಿ ಎಲ್ಲ ರೀತಿಯ ಚಟುವಟಿಕೆಗಳು ಸ್ಥಗಿತಗೊಂಡ ಹಿನ್ನಲೆ ಭಾರತದ ಉತ್ತರ ಭಾಗದಲ್ಲಿ ಕಳೆದ 20 ವರ್ಷಗಳಲ್ಲೇ 'ಏರೋಸಾಲ್'ಗಳ ಮಟ್ಟ ತೀವ್ರ ಕುಸಿತ ಕಂಡ ಹಿನ್ನಲೆ ಕಡಿಮೆ ವಾಯುಮಾಲಿನ್ಯ ದಾಖಲಾಗಿರುವುದಾಗಿ ಅಧ್ಯಯನ ವರದಿ ತಿಳಿಸಿದೆ.

## 24 04 2020 ಟಿಯಾನ್ವೆನ್1(Tianwen1):ಚೀನಾದಮೊದಲಮಂಗಳ ಪರಿಶೋಧನಾ ಮಿಷನ್




ಚೀನೀ ರಾಷ್ಟ್ರೀಯ ಬಾಹ್ಯಾಕಾಶ ಆಡಳಿತ (CNSA) ತನ್ನ ಮೊದಲ ಮಂಗಳ ಪರಿಶೋಧನಾ ಕಾರ್ಯಾಚರಣೆಯನ್ನು ಟಿಯಾನ್‌ವೆನ್ 1 ಎಂದು ಹೆಸರಿಸಿದೆ. ಇನ್ನು ಮುಂದೆ ಎಲ್ಲಾ ಗ್ರಹಗಳ ಕಾರ್ಯಾಚರಣೆಯನ್ನು ಟಿಯಾನ್‌ವೆನ್ ಸರಣಿ ಎಂದು ಹೆಸರಿಸಲಾಗುವುದು ಎಂದು CNSA ಘೋಷಿಸಿದೆ.

* ಏಪ್ರಿಲ್ 24 ರಂದು ಚೀನಾ ತನ್ನ ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಆಚರಿಸುತ್ತಿರುವುದರಿಂದ ಈ ಪ್ರಕಟಣೆ ಹೊರಡಿಸಿದೆ.
* ಚೀನಾದ ರಾಷ್ಟ್ರೀಯ ಬಾಹ್ಯಾಕಾಶ ದಿನ : ಚೀನಾ ತನ್ನ ಮೊದಲ ಉಪಗ್ರಹ ಡಾಂಗ್‌ಫ್ಯಾಂಗ್‌ಹೋಂಗ್ 1 ಉಡಾವಣೆ ಮಾಡಿದ ಸವಿನೆನಪಿಗಾಗಿ ತನ್ನ ಬಾಹ್ಯಾಕಾಶ ದಿನವನ್ನು ಆಚರಿಸುತ್ತದೆ.

# Current affairs of April 2020 from KPSC Vaani

24 04 2020 "ಇ ಗ್ರಾಮ ಸ್ವರಾಜ್" ಅಪ್ಲಿಕೇಶನ್ ಮತ್ತು ವೆಬ್ ಪೋರ್ಟಲ್ ಆರಂಭ




ನವದೆಹಲಿ : ಪ್ರಧಾನಿ ನರೇಂದ್ರ ಮೋದಿ ಅವರು ಗ್ರಾಮಗಳ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು "ಇ ಗ್ರಾಮ ಸ್ವರಾಜ್" ಎಂಬ ಅಪ್ಲಿಕೇಶನ್ ಮತ್ತು 2ವೆಬ್ ಪೋರ್ಟಲ್‌ಗಳನ್ನು
ಬಿಡುಗಡೆಗೊಳಿಸಿದರು. ಪಂಚಾಯಿತಿಗಳಿಗೆ ಗ್ರಾಮಗಳಲ್ಲಿನ ಅಭಿವೃದ್ಧಿ ಕೆಳಸಗಳನ್ನು ಪೂರ್ಣಗೊಳಿಸಲು ಈ ಅಪ್ಲಿಕೇಶನ್ ನೆರವಾಗುತ್ತದೆ. ಇದು ಯೋಜನೆಯ ಆರಂಭದಿಂದ ಪೂರ್ಣಗೊಳ್ಳುವವರೆಗೆ ವೇಗ ಹೆಚ್ಚಿಸಲು ಸಹಾಯಮಾಡುತ್ತದೆ.

25 04 2020 ಖ್ಯಾತಚೆಂಡೆವಾದಕ`ಕೃಷ್ಣಯಾಜಿ'ಇನ್ನಿಲ್ಲ



ಬೆಂಗಳೂರು : ಖ್ಯಾತ ಚೆಂಡೆ ವಾದಕ ಕೃಷ್ಣಯಾಜಿ ಇಡಗುಂಜಿ (73) ಅವರು ಹೃದಯಾಘಾತದಿಂದ ದಿನಾಂಕ 24 ಏಪ್ರಿಲ್ 2020 ರ ಶುಕ್ರವಾರ ಸಂಜೆ ಇಹಲೋಕ ತ್ಯೆಜಿಸಿದರು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನವರಾಗಿದ್ದು, ಕೃಷ್ಣಯಾಜಿ ಅವರು ಕೆರೆಮನೆ ಯಕ್ಷಗಾನ ಮೇಳದ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

# Current affairs of April 2020 from KPSC Vaani

25 04 2020 ಬಿಸಿಲಿನ ತಾಪಕ್ಕೆ ಕೊರೋನ ವೈರಸ್ ನಾಶ: ವಿಜ್ಞಾನಿಗಳ ಸಂಶೋಧನೆ



ವಾಶಿಂಗ್ಟನ್ : ಕೊರೋನ ವೈರಸ್ ಸೋಂಕು ಬಿಸಿಲಿನಲ್ಲಿ ಬೇಗನೆ ನಾಶಹೊಂದುತ್ತದೆ ಎಂದು ಅಮೆರಿಕಾದ ವಿಜ್ಞಾನಿಗಳು ನಡೆಸಿದ ಸಂಶೋಧನೆಯಿಂದ ತಿಳಿದು ಬಂದಿದೆ. ಈ ವರದಿಯನ್ನು ಅಮೆರಿಕದ ಆಂತರಿಕ ಭದ್ರತೆ ಕಾರ್ಯದರ್ಶಿಯ ವಿಜ್ಞಾನ ಮತ್ತು ತಂತ್ರಜ್ಞಾನ ಸಲಹೆಗಾರ ವಿಲಿಯಮ್ ಬ್ರಯಾನ್ ಅವರು ಘೋಷಿಸಿದ್ದಾರೆ. "ವಸ್ತುಗಳ ಮೇಲಿರುವ ಹಾಗೂ ಗಾಳಿಯಲ್ಲಿರುವ ಕೊರೋನ ವೈರಸ್‌ಗಳನ್ನು ಕೊಲ್ಲುವ ಸಾಮರ್ಥ್ಯ ಸೂರ್ಯನ ಬೆಳಕಿಗೆ ಇರುವುದು ನಮ್ಮ ಈವರೆಗಿನ ಪ್ರಬಲ ಸಂಶೋಧನೆಯಾಗಿದೆ" ಎಂದು ವಿಲಿಯಮ್ ಬ್ರಯಾನ್ ತಿಳಿಸಿದ್ದಾರೆ.

25 04 2020 ಏಪ್ರಿಲ್24:ರಾಷ್ಟ್ರೀಯಪಂಚಾಯತಿರಾಜ್‌ದಿನ




ಪ್ರತಿ ವರ್ಷ ಭಾರತ ಸರ್ಕಾರ ಏಪ್ರಿಲ್ 24 ಅನ್ನು ರಾಷ್ಟ್ರೀಯ ಪಂಚಾಯತಿ ರಾಜ್ ದಿನವಾಗಿ ಆಚರಿಸುತ್ತದೆ. ದಿನವನ್ನು "ರಾಷ್ಟ್ರೀಯ ಸ್ಥಳೀಯ ಸ್ವರಾಜ್ಯ" ದಿನ ಎಂದೂ ಕರೆಯುತ್ತಾರೆ. ರಾಷ್ಟ್ರೀಯ ಪಂಚಾಯತಿ ರಾಜ್ ದಿನವನ್ನು ಮೊದಲು 2010 ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಘೋಷಿಸಿದರು, ಮತ್ತು ಈ ದಿನವನ್ನು ಪಂಚಾಯತಿ ರಾಜ್ ಸಚಿವಾಲಯದಿಂದ ಪ್ರತಿವರ್ಷ ಆಚರಿಸಲಾಗುವದು.

* 2020 ರಲ್ಲಿ ರಾಷ್ಟ್ರೀಯ ಪಂಚಾಯತಿ ರಾಜ್ ದಿನಾಚರಣೆಯ ಮುನ್ನಾದಿನದಂದು ಪಿಎಂ ಮೋದಿ ಇ ಗ್ರಾಮ ಸ್ವರಾಜ್ ಅರ್ಜಿ ಮತ್ತು ಪೋರ್ಟಲ್ ಅನ್ನು ಪ್ರಾರಂಭಿಸಿದರು.

*73ನೇ ಸಾಂವಿಧಾನಿಕ ತಿದ್ದುಪಡಿ ಏಪ್ರಿಲ್ 24 ರಿಂದ ಜಾರಿಗೆ ಬಂದ ಹಿನ್ನಲೆ ಪಂಚಾಯತಿ ರಾಜ್ ದಿನವನ್ನು ಏಪ್ರಿಲ್ 24 ರಂದು ಆಚರಿಸಲಾಗುವದು.

# Current affairs of April 2020 from KPSC Vaani

25 04 2020 DRDO ಮೊಬೈಲ್ ಕೋವಿಡ್ 19 ಟೆಸ್ಟಿಂಗ್ ಲ್ಯಾಬ್ ಕೇಂದ್ರರಕ್ಷಣಾ ಸಚಿವರಿಂದಉದ್ಘಾಟನೆ

ಕೇಂದ್ರರಕ್ಷಣಾಸಚಿವರಾಜ್‌ನಾಥ್‌ಸಿಂಗ್‌ಅವರುಮೊಬೈಲ್COVID 19ಪರೀಕ್ಷಾಪ್ರಯೋಗಾಲಯ ಸೌಲಭ್ಯವನ್ನು ಉದ್ಘಾಟಿಸಿದರು. ಈ ಪರೀಕ್ಷಾ ಸೌಲಭ್ಯದಿಂದ ಒಂದು ದಿನದಲ್ಲಿ ಸರಿಸುಮಾರು 1000 ಮಾದರಿಗಳನ್ನು ಪರೀಕ್ಷಿಸಬಹುದಾಗಿದೆ.

* ಮೊಬೈಲ್ ವೈರಾಲಜಿ ರಿಸರ್ಚ್ ಅಂಡ್ ಡಯಾಗ್ನೋಸ್ಟಿಕ್ಸ್ ಲ್ಯಾಬೊರೇಟರಿ (MVRDL) ಹೈದರಾಬಾದ್ ಮತ್ತು ESIC ಆಸ್ಪತ್ರೆಯ ಸಹಯೋಗದೊಂದಿಗೆ DRDOಈಮೊಬೈಲ್‌ಪರೀಕ್ಷಾಕೇಂದ್ರಗಳನ್ನುಅಭಿವೃದ್ಧಿಪಡಿಸಿದೆ.

26 04 2020 ಬ ಸ ವಜಯಂತಿ ಆಚರಣೆ



ದೇಶದಲ್ಲಿ ಇಂದು ವಿಶ್ವಗುರು ಬಸವಣ್ಣವರ 877 ನೇ ಜಯಂತಿಯನ್ನು ಆಚರಿಸಲಾಗುತ್ತಿದೆ. ಹನ್ನೆರಡನೇ ಶತಮಾನದಲ್ಲಿಯೇ ಕ್ರಾಂತಿಕಾರಿ ಸಾಮಾಜಿಕ ಚಳವಳಿಯನ್ನು ಸಂಘಟಿಸಿದ್ದ ಬಸವಣ್ಣನವರು ಜಗತ್ತು ಕಂಡ ದಾರ್ಶನಿಕರಲ್ಲಿ ಪ್ರಮುಖರಾಗಿದ್ದಾರೆ. ಮೂಢನಂಬಿಕೆ, ಅಸ್ಪೃಶ್ಯತೆ ಸೇರಿ ಮುಂತಾದ ಪಿಡುಗುಗಳ ನಿರ್ಮೂಲನೆಗಾಗಿ ಬದುಕಿನುದ್ದಕ್ಕೂ ಹೋರಾಡಿದ ಅವರು ತಮ್ಮ ವಚನಗಳಮೂಲಕ ಕಾಯಕ, ಸಮಾನತೆಯ ಮಹತ್ವವನ್ನು ಮನುಕುಲಕ್ಕೆ ಸಾರಿದ್ದಾರೆ.

# Current affairs of April 2020 from KPSC Vaani

26 04 2020 ಇತ್ತೀಚೆಗೆ ಐಸಿಸಿ ಪರಿಗಣಿಸುತ್ತಿರುವ "ಬಾಲ್ ಟ್ಯಾಂಪರಿಂಗ್" ಎಂದರೇನು?



ಬಾಲ್ ಟ್ಯಾಂಪರಿಂಗ್ ಅನ್ನು ಕಾನೂನುಬದ್ಧಗೊಳಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಚಿಂತಿಸುತ್ತಿದೆ. ಕ್ರಿಕೆಟ್ ಬಾಲ್ ಗೆ ಬಾಯಲ್ಲಿರುವ ಲಾಲಾರಸವನ್ನು ಲೇಪಿಸುವದರಿಂದ COVID 19 ಸೋಂಕು ಹರಡುವ ಅಪಾಯ ಹೆಚ್ಚಿದೆ ಎಂದು ಬೆವರು ಅಥವಾ ಲಾಲಾರಸದ ಬಳಕೆಯನ್ನು ಕ್ರಿಕೆಟ್‌ನಲ್ಲಿ ನಿಷೇಧಿಸಲಾಗಿದೆ. ಬಾಲ್ ಟ್ಯಾಂಪರಿಂಗ್ ಎಂದರೇನು ? ಬಾಲ್ ಟ್ಯಾಂಪರಿಂಗ್ ಎನ್ನುವುದು ಕ್ರಿಕೆಟ್‌ನಲ್ಲಿ ಫೀಲ್ಡಿಂಗ್ ಮಾಡುವ ತಂಡದ ಆಟಗಾರನು ಚೆಂಡಿಗೆ ತನ್ನ ಬೆವರು ಅಥವಾ ಲಾಲಾರಸವನ್ನು ಕಾನೂನುಬಾಹಿರವಾಗಿ ಲೇಪಿಸುವ ಕ್ರಿಯೆಯಾಗಿದೆ.

26 04 2020 ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ (ನಾಫೆಡ್) ದಿಂದ6ಲಕ್ಷಮೆಟ್ರಿಕ್ ಟನ್‌ದ್ವಿದಳಧಾನ್ಯವಿತರಣೆ




ಪ್ರಧಾನ್ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿಯಲ್ಲಿ ಸುಮಾರು 20 ಕೋಟಿ ಮನೆಗಳಿಗೆ 6 ಲಕ್ಷ ಮೆಟ್ರಿಕ್ ಟನ್ ದ್ವಿದಳ ಧಾನ್ಯಗಳನ್ನು ವಿತರಿಸಲು ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ (NAFED) ಮುಂದಾಗಿದೆ. ಈ ಯೋಜನೆಯು ಸುಮಾರು 3 ತಿಂಗಳವರೆಗೆ ಕಾಮಗಾರಿಯಾ ಕಾರ್ಯವ್ಯಾಪ್ತಿ ಹೊಂದಿದೆ.

* ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ : ದ್ವಿದಳ ಧಾನ್ಯಗಳನ್ನು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ವಿತರಿಸಲಾಗುತ್ತದೆ. ಈ ಕಾಯ್ದೆಯನ್ನು 2013 ರಲ್ಲಿ ಭಾರತ ಸರ್ಕಾರ ಘೋಷಿಸಿತ್ತು.

# Current affairs of April 2020 from KPSC Vaani

26 04 2020 ಸೆಂಟ್ರಲ್ ವಿಜಿಲೆನ್ಸ್ ಕಮಿಷನರ್ ಆಗಿ ನಿವೃತ್ತ IAS ಅಧಿಕಾರಿ ಸಂಜಯ್ ಕೊಠಾರಿ ನೇಮಕ



ನಿವೃತ್ತ ಐಎಎಸ್ ಅಧಿಕಾರಿಯಾಗಿರುವ ಸಂಜಯ್ ಕೊಠಾರಿ ಅವರು ರಾಷ್ಟ್ರಪತಿ ಭವನದಲ್ಲಿ ಕೇಂದ್ರ ವಿಜಿಲೆನ್ಸ್ ಆಯುಕ್ತರಾಗಿ (CVC) ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ಅವರುಸಂಜಯಕೊಠಾರಿಅವರಿಗೆಪ್ರಮಾಣವಚನಬೋಧಿಸಿದರು.
*ಶ್ರೀಸಂಜಯಕೊಠಾರಿ ಅವರುಭಾರತದರಾಷ್ಟ್ರಪತಿಗಳಕಾರ್ಯದರ್ಶಿಯಾಗಿಈಮೊದಲುಸೇವೆಸಲ್ಲಿಸಿದ್ದರು.

27 04 2020 ಲಕ್ನೋ ವೈದ್ಯಕೀಯ ಆಸ್ಪತ್ರೆಯಲ್ಲಿ ದೇಶದ ಪ್ರಥಮ ಸರ್ಕಾರೀ ಪ್ಲಾಸ್ಮಾಟ್ರೀಟ್ಮೆಂಟ್ ಥೆರಪಿಚಿಕಿತ್ಸೆ



ಉತ್ತರ ಪ್ರದೇಶದ ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯವು COVID 19 ಸೋಂಕಿತರಿಗೆ ಚಿಕಿತ್ಸೆ ನೀಡಲು ಪ್ಲಾಸ್ಮಾ ಚಿಕಿತ್ಸೆಯನ್ನು ಆರಂಭಿಸಿದ ಮೊದಲ ಸರ್ಕಾರಿ ಆಸ್ಪತ್ರೆಯಾಗಿದೆ. ಈ ಆಸ್ಪತ್ರೆಯಲ್ಲಿ ಮೊದಲ ಪ್ಲಾಸ್ಮಾ ಚಿಕಿತ್ಸೆಯನ್ನು 58 ವರ್ಷದ ಸೋಂಕಿತನಿಗೆ ಯಶಸ್ವಿಯಾಗಿ ಈಗಾಗಲೇ ನೀಡಲಾಗಿದೆ.
* COVID 19 ನಿಂದ ಚೇತರಿಸಿಕೊಂಡ ರೋಗಿಗಳಿಂದ ಸಂಗ್ರಹಿಸಲಾದ ಪ್ಲಾಸ್ಮಾವನ್ನು ನಂತರ ವೈರಸ್‌ನಿಂದಾಗಿ ಅನಾರೋಗ್ಯದಿಂದ ಬಳಲುತ್ತಿರುವ ರೋಗಿಗಳಿಗೆ ವರ್ಗಾಯಿಸಲಾಗುತ್ತದೆ.

# Current affairs of April 2020 from KPSC Vaani

## 27 04 2020 ಮ್ಯೂಚುವಲ್‌ಫಂಡ್‌ಗೆ50,000ಕೋಟಿವಿಶೇಷ ಪ್ಯಾಕೇಜ್ ಘೋಷಿಸಿದRBI




ಭಾರತದಲ್ಲಿ ಕೊರೊನಾ ಸೋಂಕು ಇಯಂತ್ರಣ ಸಲುವಾಗಿ ವಿಧಿಸಿರುವ ಕಾರಣ ಮ್ಯೂಚುಯಲ್ ಫಂಡ್ ಹೂಡಿಕೆದಾರರು ಸಹಜವಾಗಿ ಆತಂಕಕ್ಕೀಡಾಗಿದ್ದಾರೆ. ಇದರ ಮಧ್ಯೆಯೇ ಭಾರತೀಯ ರಿಸರ್ವ್ ಬ್ಯಾಂಕ್(RBI) ಹೂಡಿಕೆದಾರರಿಗೆ ಬಹು ದೊಡ್ಡ ರಿಲೀಫ್ ನೀಡಿದ್ದು, ಮ್ಯೂಚುವಲ್ ಫಂಡ್‌ಗಳಿಗೆ ಸೋಮವಾರ(27 ಏಪ್ರಿಲ್)ದಂದು 50,000 ಕೋಟಿ ರುಪಾಯಿಯ ವಿಶೇಷ ದ್ರವ್ಯತಾ ವ್ಯವಸ್ಥೆ ಕಲ್ಪಿಸಿದೆ. ರಾಷ್ಟ್ರವ್ಯಾಪಿ ವಿಧಿಸಿರುವ ಲಾಕ್‌ಡೌನ್ ಹಿನ್ನೆಲೆಯಲ್ಲಿ ಹಣಕಾಸು ಮಾರುಕಟ್ಟೆಯಲ್ಲಿ ಉಂಟಾಗಿರುವ ಏರುಪೇರುಗಳನ್ನು ಸುಧಾರಿಸಲು ಮ್ಯೂಚುವಲ್ ಫಂಡ್(MF)ಗಳ ಮೇಲಿನ ದ್ರವ್ಯತೆ ಒತ್ತಡವನ್ನು ಸುಗಮಗೊಳಿಸಲು ಆರ್‌ಬಿಐ ಈ ಕ್ರಮ ಕೈಗೊಂಡಿದೆ.

## 28 04 2020 2021ರಭಾರತದGDPಅಂದಾಜು1.9%




ಇಂಡಿಯಾ ರೇಟಿಂಗ್ಸ್ ಆಂಡ್ ರಿಸರ್ಚ್ (ಇಂಡ್ ರಾ) ಭಾರತದ 2021 ನೇ ಸಾಲಿನ ಜಿಡಿಪಿ ದರವನ್ನು ಅಂದಾಜಿಸಿದ್ದು, ಕೊರೊನಾವೈರಸ್ ನಿಂದಾಗಿ ವಿಧಿಸಿರುವ ಲಾಕ್‌ಡೌನ್‌ನಿಂದಾಗಿ ಭಾರತದ 2021 ನೇ ಸಾಲಿನ ಜಿಡಿಪಿ ಬೆಳವಣಿಗೆ ದರವನ್ನು 1.9 ಪರ್ಸೆಂಟ್ ಎಂದು ತಿಳಿಸಿದೆ.

* ಈ ಜಿಡಿಪಿ ಬೆಳವಣಿಗೆ ದರ 29 ವರ್ಷಗಳಲ್ಲೇ ಅತ್ಯಧಿಕ ಕುಸಿತವಾಗಿದೆ.

*1992ರಲ್ಲಿ ಜಿಡಿಪಿ ದರ ಶೇಕಡಾ 1.1%ರಷ್ಟಿತ್ತು.

# Current affairs of April 2020 from KPSC Vaani

28 04 2020 ರುಹ್ದಾರ್(RUHDAAR): ಐಐಟಿ ಬಾಂಬೆಯಿಂದ ಕಡಿಮೆ ವೆಚ್ಚದ ಯಾಂತ್ರಿಕವೆಂಟಿಲೇಟರ್ಅಭಿವೃದ್ಧಿ



ಐಐಟಿ ಬಾಂಬೆ, ಇಸ್ಲಾಮಿಕ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಮತ್ತು NIT ಶ್ರೀನಗರದ ವಿದ್ಯಾರ್ಥಿಗಳು ಜಂಟಿಯಾಗಿ ಒಟ್ಟಾಗಿ "ರುಹ್ದಾರ್(RUHDAAR)" ಎಂಬ ಕಡಿಮೆ ವೆಚ್ಚದ ವೆಂಟಿಲೇಟರ್ ಗಳನ್ನೂ ಅಭಿವೃದ್ಧಿ ಪಡಿಸಿದ್ದಾರೆ.

* RUHDAAR ವೆಂಟಿಲೇಟರ್ : ಒಂದು ವೆಂಟಿಲೇಟರ್ ಉತ್ಪಾದಿಸಲು ತಗಲುವ ಸರಾಸರಿ ವೆಚ್ಚ ಸುಮಾರು 10,000 ರೂ.

28 04 2020 ಓಜೋನ್ ಪದರದಲ್ಲಿನ ದೊಡ್ಡ ರಂಧ್ರವು ಸ್ವತಃ ಮುಚ್ಚಿಕೊಂಡಿದೆ




C3S (Copernicus Climate Change Service) ಮತ್ತು CAMS (Copernicus Atmosphere Monitoring Service) ಓಜೋನ್ ಪದರ ರಂಧ್ರವು ಸ್ವತಃ ಗುಣಮುಖವಾಗಿದೆ ಎಂದು ದೃಢಪಡಿಸಿವೆ. ಓಜೋನ್ ಪದರದರಂಧ್ರವು 1 ಮಿಲಿಯನ್ ಚದರ ಕಿಲೋಮೀಟರ್ ನಷ್ಟು ಅಗಲವಿತ್ತು ಮತ್ತು ಈ ರಂಧ್ರವನ್ನು ವಿಜ್ಞಾನಿಗಳು ಮಾರ್ಚ್ 2020 ರಲ್ಲಿ ಗುರುತಿಸಿದ್ದರು. ಅಸಾಮಾನ್ಯವಾದ ಹವಾಮಾನ ಪರಿಸ್ಥಿತಿಗಳಿಂದ ಇದು ರೂಪುಗೊಂಡಿತ್ತು.

* COVID 19 ಲಾಕ್ ಡೌನ್ ಕಾರಣದಿಂದಾಗಿ ಮಾಲಿನ್ಯದ ಮಟ್ಟ ಕಡಿಮೆಯಾಗಿದೆ ಹಾಗು ಧ್ರುವ ಸುಳಿಯಿಂದಾಗಿ ರಂಧ್ರವು ಸ್ವತಃ ಮುಚ್ಚಿಕೊಂಡಿದೆ ಎಂದು ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಓಜೋನ್ ಪದರ : ಭೂಮಿಯ ವಾಯುಮಂಡಲದ ರಕ್ಷಣಾ ಕವಚವಾಗಿದ್ದು ಅದು ಸೂರ್ಯನಿಂದ ಹಾನಿಕಾರಕ ಯುವಿ ವಿಕಿರಣದಿಂದ ಭೂ ಗ್ರಹವನ್ನು ರಕ್ಷಿಸುತ್ತದೆ.

# Current affairs of April 2020 from KPSC Vaani

28 04 2020 SIPRI:ಸೇನೆಗಾಗಿ ಖರ್ಚು ಮಾಡುವವರಲ್ಲಿ ಭಾರತಕ್ಕೆ ಅಗ್ರ 3ನೇ ಸ್ಥಾನ



Stockholm International Peace Research Institute (SIPRI) ವಿಶ್ವದ ವಿವಿಧ ದೇಶಗಳ ಮಿಲಿಟರಿ ಖರ್ಚು ಕುರಿತು ತನ್ನ ವರದಿಯನ್ನು ಬಿಡುಗಡೆ ಮಾಡಿದ್ದು, ಈ ವರದಿಯ ಪ್ರಕಾರ, US, ಚೀನಾ ಮತ್ತು ಭಾರತವು 2019 ರಲ್ಲಿ ಹೆಚ್ಚು ಮಿಲಿಟರಿ ಖರ್ಚು ಮಾಡಿರುವ ರಾಷ್ಟ್ರಗಳಾಗಿವೆ.

* ರಷ್ಯಾ ಮತ್ತು ಸೌದಿ ಅರೇಬಿಯಾ ಕ್ರಮವಾಗಿ ನಾಲ್ಕನೇ ಮತ್ತು ಐದನೇ ಸ್ಥಾನದಲ್ಲಿವೆ.
* ಈ ವರದಿಯ ಪ್ರಕಾರ, ಭಾರತವು ಕಾಶ್ಮೀರ ವಿವಾದದಿಂದಾಗಿ ಮಿಲಿಟರಿ ವೆಚ್ಚ ಹೆಚ್ಚಾಗಿದೆ.
* 2019 ರಲ್ಲಿ ಭಾರತ ತನ್ನ ಮಿಲಿಟರಿಗಾಗಿ 71.1 ಬಿಲಿಯನ್ USD ಹಣ ಖರ್ಚು ಮಾಡಿದೆ. 2018 ಕ್ಕೆ ಹೋಲಿಸಿದರೆ ಇದು 6.8%ಹೆಚ್ಚಾಗಿದೆ.

29 04 2020 'ಒಂದುದೇಶಒಂದುಪಡಿತರಚೀಟಿ'ಯೋಜನೆಜಾರಿ: ಪರಿಶೀಲನೆಗೆ ಸುಪ್ರೀಂನಿರ್ದೇಶನ



ನವದೆಹಲಿ : ದೇಶದಲ್ಲಿ ಕೋರೋಣ ವೈರಸ್ ಬಿಟಿ ಹಿನ್ನಲೆ ವಿಧಿಸಿರುವ ಲೊಕ್ಡೌನ್ ನಿಂದಾಗಿ ಹಿನ್ನಲೆ ವಲಸೆ ಕಾರ್ಮಿಕರು ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳು ಜನರಿಗೆ ಸಬ್ಸಿಡಿ ಆಹಾರ ಧಾನ್ಯಗಳನ್ನು ಪಡೆದುಕೊಳ್ಳುಲು ಅನುಕೂಲವ ಯೋಜನೆಯಾದ 'ಒಂದು ದೇಶ ಒಂದು ಪಡಿತರ ಚೀಟಿ' ಯೋಜನೆಯನ್ನು ತಾತ್ಕಾಲಿಕವಾಗಿ ಜಾರಿಗೊಳಿಸುವ ಕುರಿತು ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರಸರ್ಕಾರಕ್ಕೆ ನಿರ್ದೇಶನನೀಡಿದೆ.

# Current affairs of April 2020 from KPSC Vaani

29 04 2020 ಬಾಲಿವುಡ್ ನಟ ಇರ್ಫಾನ್ ಖಾನ್ ಇನ್ನಿಲ್ಲ



ಮುಂಬಯಿ : ಟ್ಯೂಮರ್ ನಿಂದಾಗಿ ಬಳಲುತ್ತಿದ್ದ ಖ್ಯಾತ ಬಾಲಿವುಡ್ ನಟ ಇರ್ಫಾನ್ ಖಾನ್ ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ತಮ್ಮ 54 ವಯಸ್ಸಿನಲ್ಲಿ ಕೊನೆಯುಸಿರೆಳೆದರು.

* ಕಳೆದ ಕೆಲ ವರ್ಷಗಳಿಂದ ನ್ಯೂರೋಎಂಡೋಕ್ರೈನ್ ಟ್ಯೂಮರ್ ಸಮಸ್ಯೆಯಿಂದ ಬಳಲುತ್ತಿದ್ದರು.
* ಇತ್ತೀಚೆಗಷ್ಟೇ ಅಂಗ್ರೇಜಿ ಮೀಡಿಯಾಂ ಸಿನಿಮಾದಲ್ಲಿ ನಟಿಸಿದ್ದರು.

29 04 2020 ಐಟಿವೃತ್ತಿ ಪರರವರ್ಕ್‌ಫ್ರಮ್‌ಹೋಮ್ ಜುಲೈ31ರವರೆಗೆ ವಿಸ್ತರಣೆ : ಕೇಂದ್ರ



ಬೆಂಗಳೂರು: ಕೊವಿಡ್ ಹಿನ್ನೆಲೆಯಲ್ಲಿ ದೇಶದಲ್ಲಿ ಲಾಕ್ ಡೌನ್ ವಿಧಿಸಿರುವ ಹಿನ್ನಲೆ ಐಟಿ ಉದ್ಯೋಗಿಗಳಿಗೆ ಬರುವ ಜುಲೈ ತಿಂಗಳ 31 ನೇ ತಾರೀಕಿನವರೆಗೆ ಮನೆಯಿಂದಲೇ ಕೆಲಸ (ವರ್ಕ್ ಫ್ರಮ್‌ಹೋಂ)ಮಾಡಲುಕೇಂದ್ರಸರ್ಕಾರಅನುಮತಿನೀಡಿಆದೇಶಹೊರಡಿಸಿದೆ.ಕೇಂದ್ರಐಟಿ ಮತ್ತು ದೂರಸಂಪರ್ಕ ಖಾತೆ ಸಚಿವ ರವಿ ಶಂಕರ್ ಪ್ರಸಾದ್ ಅವರು ಎಲ್ಲ ರಾಜ್ಯಗಳ ಮಾಹಿತಿ ತಂತ್ರಜ್ಞಾನ ಸಚಿವರ ಜತೆ ವೀಡಿಯೋಕಾನ್ಫರನ್ಸ್ ನಲ್ಲಿಸಭೆನಡೆಸಿಬಳಿಕಈವಿಷಯಪ್ರಕಟಿಸಿದರು.

# Current affairs of April 2020 from KPSC Vaani



# Current affairs of April 2020 from KPSC Vaani

29 04 2020 ಕೊರೊನಾ ವಿರುದ್ಧ ಹೋರಾಟಕ್ಕೆ ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನಿಂದ 11,400 ಕೋಟಿ ಮಂಜೂರು




ಕೊರೊನಾ ವೈರಾಣು ವಿರುದ್ಧ ಹೋರಾಡುವ ಸಲುವಾಗಿ ಭಾರತ ಸರ್ಕಾರಕ್ಕೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಡ್ಬ್) ಸುಮಾರು 1.5 ಬಿಲಿಯನ್ ಅಮೆರಿಕನ್ ಡಾಲರ್($) ಅಂದರೆ 11,400 ಕೋಟಿ ರೂಪಾಯಿಯಷ್ಟು ಸಾಲವನ್ನು ಮಂಜೂರು ಮಾಡಿದೆ. ಕೋರೋಣ ಸೋಂಕು ನಿಯಂತ್ರಣ ಹಾಗೂ ತಡೆಯನ್ನು ಪ್ರಮುಖ ಉದ್ದೇಶವಾಗಿ ಗಮನದಲ್ಲಿ ಇಟ್ಟುಕೊಂಡು ಈ ಸಾಲವನ್ನು ಭಾರತಕ್ಕೆ ಮಂಜೂರು ಮಾಡಲಾಗಿದೆ.

30 04 2020 ಇಂದು(ಏಪ್ರಿಲ್30)ಆಯುಷ್ಮಾನ್‌ಭಾರತ ದಿನ




ಆಯುಷ್ಮಾನ್ ಭಾರತ್ ದಿವಾಸ್ ಅನ್ನು ಏಪ್ರಿಲ್ 30 ರಂದು ದೇಶಾದ್ಯಂತ ಆಚರಿಸಲಾಗುತ್ತದೆ. ಇದು ರಾಷ್ಟ್ರೀಯ ಆರೋಗ್ಯ ಸಂರಕ್ಷಣಾ ಯೋಜನೆ (ಎಬಿ ಎನ್‌ಎಚ್‌ಪಿಎ) 2018ರಿಂದ ಏಪ್ರಿಲ್ 30 ರಂದು ಭಾರತದಾದ್ಯಂತ ಆಚರಿಸಲಾಗುತ್ತದೆ.!! ★ ಉದ್ದೇಶ: ದೇಶದ ಯಾವುದೇ ಪ್ರದೇಶಗಳಲ್ಲಿರುವ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಪ್ರಧಾನ ಮಂತ್ರಿ ಆಯುಷ್ಮಾನ್ ಯೋಜನೆಯ ಅನುಸಾರ ಉಚಿತವಾಗಿ ಉತ್ತಮ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು. ಕೈಗೆಟುಕುವ ಬೆಲೆಯಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಖಾತ್ರಿಪಡಿಸುವುದು.

# Current affairs of April 2020 from KPSC Vaani

30 04 2020 ಬೆಂಗಳೂರನಲ್ಲಿ 2021 ಫೆಬ್ರುವರಿಯಲ್ಲಿ ಏರ್‌ಶೋ : ರಕ್ಷಣಾ ಇಲಾಖೆ ನಿರ್ಧಾರ



ಬೆಂಗಳೂರು : ಕಳೆದ ಬಾರಿ ಬೆಂಗಳೂರಿನಲ್ಲಿ ನಡೆದ ಏರ್ ಶೋ ಹಲವು ಅವಘಡಗಳಿಗೆ ಕಾರಣವಾಗಿದ್ದರಿಂದ ಮುಂದಿನ ಏರ್ ಶೋ ಇಲ್ಲಿ ನಡೆಯುವದು ಅನುಮಾನ ಮೂಡಿಸಿದ್ದರಿಂದ ಬೇಸರದಲ್ಲಿದ್ದ ರಾಜ್ಯದ ಜನತೆಗೆ ರಕ್ಷಣಾ ಇಲಾಖೆ ಖುಷಿಯ ವಿಚಾರ ತಿಳಿಸಿದ್ದು, ಬೆಂಗಳೂರಲ್ಲೇ ಮುಂದಿನ ಏರ್‌ಶೋ ನಡೆಸಲು ರಕ್ಷಣಾ ಇಲಾಖೆ ನಿರ್ಧರಿಸಿದೆ.

* ಪ್ರತಿ ಎರಡು ವರ್ಷಕ್ಕೊಮ್ಮೆ ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಏರ್ ಶೋ ಆಯೋಜಿಸಲಾಗುತ್ತಿದೆ.
* ಫೆ.3 ರಿಂದ 7ರವರೆಗೆ ಯಲಹಂಕ ವಾಯನೆಲೆಯಲ್ಲಿ 13ನೇ ಆವೃತ್ತಿಯ ಏರ್ ಶೋ ನಡೆಯಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

30 04 2020 ವಿಶ್ವವಿದ್ಯಾಲಯಗಳಿಗೆ ಪರಿಷ್ಕೃತ ವೇಳಾಪಟ್ಟಿ ಯುಜಿಸಿಯಿಂದ ಪ್ರಕಟ




ನವದೆಹಲಿ : ದೇಶದಲ್ಲಿ ವಿಧಿಸಿರುವ ಲಾಕ್ಡೌನ್ ನಿಂದಾಗಿ ಎಲ್ಲ ವಿಶ್ವವಿದ್ಯಾಲಯಗಳ 2020 21 ರ ಶೈಕ್ಷಣಿಕ ವೇಳಾಪಟ್ಟಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ (UGC) ವು ಸೆಪ್ಟೆಂಬರ್ ನಿಂದ ಎಲ್ಲ ವಿಶ್ವವಿದ್ಯಾಲಯಗಳ ಶೈಕ್ಷಣಿಕ ವೇಳಾಪಟ್ಟಿ ಆರಂಭಿಸಲು ಕ್ರಮ ಕೈಗೊಂಡಿದೆ. ಲಾಕ್ಡೌನ್ ನಿಂದಾಗಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗಬಾರದೆಂದು ಸಮಿತಿ ರಚಿಸಿ ಹೊಸ ಶೈಕ್ಷಣಿಕ ವೇಳಾಪಟ್ಟಿಯನ್ನು ಬಿಡುಗಡೆಗೊಳಿಸಿದೆ.

# Current affairs of April 2020 from KPSC Vaani

30 04 2020 ಬಾಲಿವುಡ್ ಖ್ಯಾತ ನಟ ರಿಷಿ ಕಪೂರ್ ವಿಧಿವಶ



ಮುಂಬೈ :ಬಾಲಿವುಡ್ ನ ಖ್ಯಾತ ನಟ ರಿಷಿ ಕಪೂರ್ ತಮ್ಮ 67ವಯಸ್ಸಿನಲ್ಲಿ ಮುಂಬೈನ ಖಾಸಗಿ ಆಸ್ಪತ್ರೆಯೊಂದರಲ್ಲಿ ವಿಧಿವಶರಾಗಿದ್ದಾರೆ.
* ಬಾಲಿವುಡ್ ಖ್ಯಾತ ತಾರೆಯಾದ ರಿಷಿ ಕಪೂರ್ ಅವರು ಹಲವು ದಿನಗಳಿಂದ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದರು.
* ರಿಷಿ ಕಪೂರ್ (4 ಸೆಪ್ಟೆಂಬರ್ 1952) ನಟ, ನಿರ್ದೇಶಕ ಮತ್ತು ನಿರ್ಮಾಪಕರಾಗಿ ಹಿಂದಿ ಚಿತ್ರರಂಗದಲ್ಲಿ ಕೆಲಸ ಮಾಡಿದ್ದಾರೆ.
* ತಂದೆ ರಾಜ್ ಕಪೂರ್ ಅವರ ಚಲನಚಿತ್ರ ಮೇರಾ ನಾಮ್ ಜೋಕರ್ (1970)ನಲ್ಲಿ ಬಾಲ ಕಲಾವಿದರಾಗಿ ಚೊಚ್ಚಲ ಪಾತ್ರಕ್ಕಾಗಿ ಅವರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿದ್ದಾರೆ.
* 1973 ರಲ್ಲಿ ಬಾಬಿ ಚಿತ್ರದೊಂದಿಗೆ ಡಿಂಪಲ್ ಕಪಾಡಿಯಾ ಎದುರು ವಯಸ್ಕನಾಗಿ ಮೊದಲ ಪಾತ್ರವನ್ನು ನಿರ್ವಹಿಸಿದರು
* 1974 ರಲ್ಲಿ ಫಿಲ್ಮ್‌ಫೇರ್ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದರು.
* ಸುಮಾರು 92ಚಲನಚಿತ್ರಗಳಲ್ಲಿ ನಾಯಕನಾಗಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ.

30 / 04 / 2020 ಉಷ್ಣವಲಯದ ಚಂಡಮಾರುತಗಳ 169 ಹೊಸ ಹೆಸರುಗಳ ಪಟ್ಟಿಯನ್ನು ಬಿಡುಗಡೆ ಮಾಡಿದ IMD



ಹಿಂದೂ ಮಹಾಸಾಗರ ಪ್ರದೇಶದಲ್ಲಿನ ಉಂಟಾಗಬಹುದಾದ ಉಷ್ಣವಲಯದ ಚಂಡಮಾರುತಗಳಿಗೆ ಭಾರತೀಯ ಹವಾಮಾನ ಇಲಾಖೆ (IMD)ಯು 169ಹೊಸ ಹೆಸರುಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.
*ಭಾರತ, ಶ್ರೀಲಂಕಾ, ಮಾಲ್ಡೀವ್ಸ್, ಮ್ಯಾನ್ಮಾರ್, ಓಮನ್, ಥೈಲ್ಯಾಂಡ್, ಕತಾರ್, ಯುಎಇ, ಸೌದಿ ಅರೇಬಿಯಾ, ಯೆಮೆನ್, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಇರಾನ್ ಈ ಎಲ್ಲ 13 ರಾಷ್ಟ್ರಗಳ ಈ ಹೆಸರುಗಳನ್ನು ನೀಡಿವೆ.
* ವಿಶ್ವ ಹವಾಮಾನ ಸಂಸ್ಥೆ ನಡೆಸಿದ ಉಷ್ಣವಲಯದ ಚಂಡಮಾರುತಗಳ (PTC) 45 ನೇ ಅಧಿವೇಶನದಲ್ಲಿ ಚಂಡಮಾರುತಗಳ ಹೊಸ ಪಟ್ಟಿಯನ್ನು ರಚಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

# Current affairs of April 2020 from KPSC Vaani

30 04 2020 ಲಾಕ್‌ಡೌನ್:ಗಂಗೆಯನೀರಿನಗುಣಮಟ್ಟವನ್ನುಸುಧಾರಣೆ



ದಿನಾಂಕ ಮಾರ್ಚ್ 22, 2020 ರಂದು ದೇಶದಲ್ಲಿ ಕೋರೋಣ ವಿರುದ್ಧ ಹೋರಾಡಲು ವಿಧಿಸಲಾದ ಲಾಕ್ ಡೌನ್‌ನಿಂದಾಗಿಗಾಳಿಯಗುಣಮಟ್ಟಮತ್ತು ನೀರಿನಗುಣಮಟ್ಟವನ್ನುಸುಧಾರಿಸಿದೆ.

*ಗಂಗಾ:ಜೈವಿಕ ಆಮ್ಲಜನಕ ಬೇಡಿಕೆ (BOD) ಆಧರಿಸಿ ನದಿಯ ನೀರಿನ ಮಾಲಿನ್ಯವನ್ನು ಅಳೆಯಲಾಗುತ್ತದೆ. ಲಾಕ್ ಡೌನ್ ಮಾಡಿದ ನಂತರ, ಗಂಗೆಯ 36 ಮಾನಿಟರಿಂಗ್ ಪಾಯಿಂಟ್‌ಗಳಲ್ಲಿ 27 ಪಾಯಿಂಟಗಳಷ್ಟು ಈಗ ಸ್ವಚ್'ವಾಗಿದೆ ಮತ್ತು ವನ್ಯಜೀವಿ ಮತ್ತು ಮೀನುಗಾರಿಕೆ ಪ್ರಸರಣಕ್ಕೆ ಸೂಕ್ತವಾಗಿದೆ ಎಂದು ಸಿಪಿಸಿಬಿಯ ವರದಿಯಿಂದ ತಿಳಿದು ಬರುತ್ತದೆ.

* ನೀರಿನ ಗುಣಮಟ್ಟದಲ್ಲಿ ಸುಧಾರಣೆಗೆ ಪ್ರಮುಖ ಕಾರಣವೆಂದರೆ ಸ್ನಾನ, ಪ್ರವಾಸೋದ್ಯಮ, ಜಾತ್ರೆಗಳು ಸೇರಿ ಮುಂತಾದ ಚಟುವಟಿಕೆಗಳ ನಿರ್ಬಂಧ ವಿಧಿಸಿರುವದು. ಅಲ್ಲದೆ, ನದಿಯ ಸುತ್ತಲಿನ ಪ್ರಮುಖ ಕೈಗಾರಿಕಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಿರುವದಾಗಿದೆ.

# KPSC VAANI

Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ

## ಸೇವೆಗಳು:

- ಪ್ರತಿದಿನದ ಉದ್ಯೋಗ ಮಾಹಿತಿ
- ಪ್ರತಿದಿನದ ಪ್ರಚಲಿತ ಘಟನೆಗಳು
- ಸ್ಟಡಿ ಮೆಟೀರಿಯಲ್ಸ್
- ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
- ಕಟ್ ಆಫ್ ಅಂಕಗಳ ಮಾಹಿತಿ
- ಸ್ಪರ್ಧಾತ್ಮಕ ಲೇಖನಗಳು
- ವೀಡಿಯೊ ತರಗತಿಗಳು
- ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ

**www.kpscvaani.com**

Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ





Scan QR Code to download kpscvaani App

# KPSC FDA/SDA ಹುದ್ದೆಗಳ ತಯಾರಿಗಾಗಿ ಉತ್ತಮ ಪುಸ್ತಕಗಳನ್ನು ಈಗಲೇ ಖರೀದಿಸಿ




## www.kpscvaani.com/books

* ಪುಸ್ತಕಗಳ ಮೇಲೆ 20%ವರೆಗೂ ರಿಯಾಯಿತಿ
* ಎಲ್ಲ ರೀತಿಯ ಸ್ಪರ್ಧಾತ್ಮಕ ಪುಸ್ತಕಗಳು
* ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ

## Mob: 8660255805


* PSI ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್ಯಾಂಕ್ ಪಡೆದ
ಬಾಬುರೆಡ್ಡಿ ಯವರಿಂದ ರಚಿತವಾದ ಪುಸ್ತಕಗಳು
* KAS PSI ಮತ್ತು ESI ಪರೀಕ್ಷೆಗಳಿಗೆ ಉಪಯುಕ್ತ
ಪ್ರಬಂಧಗಳು
ಚಿಗುರು
KAS/PSI/ESI
1
ಚಿಗುರು
PSI
ಖರೀದಿಸಲು ಕೂಡಲೇ ಭೇಟಿ ನೀಡಿ:
www.kpscvaani.com/books